ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ


ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 25 | ಜೂನ್ 14-20, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕ್ರಾಂತಿಗೀತೆಗಳ ಕವಿ ಸಿದ್ದಲಿಂಗಯ್ಯ ಇನ್ನಿಲ್ಲ!!



ದರ ಏರಿಕೆಗಳ ಶಾಕ್ ಮೇಲೆ ಶಾಕ್!

ರಾಜ್ಯ ಸರ್ಕಾರದಿಂದ ಕರೆಂಟ್ ಶಾಕ್



ರಾಜ್ಯಗಳ ಹಕ್ಕುಗಳ ಮೇಲೆ ಎಡೆಬಿಡದೆ ದಾಳಿ

ಕೊನೆಗೂ ತರ್ಕಹೀನ ಲಸಿಕೆ ನೀತಿಯಲ್ಲಿ ಯು -ಟರ್ನ್

ಕಾಣದಂತೆ ಮಾಯವಾದವೋ ಕೋವಿಡ್ ಲಸಿಕೆಗಳು!



ಬ್ಲ್ಯಾಕ್ ಫಂಗಸ್ ಸುತ್ತ ಹಲವು ಪ್ರಶ್ನೆಗಳು







ಕೊರೋನಾ ಗಾಯದ ಮೇಲೆ ತೈಲ ಶತಕದ ಬರೆ ಸಲ್ಲದು!

ಖಾಸಗಿ ವಲಯಕ್ಕೆ 25% ಲಸಿಕೆ ಮೀಸಲಾತಿಯನ್ನು ಹಿಂತೆಗೆದುಕೊಳ್ಳಬೇಕು ಉಚಿತ, ಸಾರ್ವತ್ರಿಕ, ಸಾಮೂಹಿಕ ಲಸಿಕೆ ಅಭಿಯಾನ ಆರಂಭಿಸಬೇಕು

ಮೋದಿ ಸರಕಾರ ತನ್ನ ದೋಷಪೂರ್ಣ ಮತ್ತು ವಿನಾಶಕಾರಿ "ಉದಾರೀಕೃತ ಲಸಿಕೆ ನೀತಿ"ಯನ್ನು ರಾಜ್ಯಗಳಿಂದ ಬಲವಾದ ವಿರೋಧ, ಹಿಂದೊತಿನಿಂದಾಗಿ ಮತ್ತು ಸುಪ್ರಿಂ ಕೋರ್ಟಿನ ಟೀಕೆಯಿಂದಾಗಿ ಹಿಂತೆಗೆದುಕೊಳ್ಳಲೇಬೇಕಾಗಿ ಬಂದಿದೆ. ಎಲ್ಲ ನಾಗರಿಕರಿಗೆ ಉಚಿತ ಲಸಿಕೆಯ ಆಗ್ರಹವನ್ನು ಅದು ಒಪ್ಪಿಕೊಳ್ಳಬೇಕಾಗಿ ಬಂದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪ್ರಧಾನ ಮಂತ್ರಿಗಳು ತಮ್ಮ ರಾಷ್ಟ್ರೀಯ ಪ್ರಸಾರ ಭಾಷಣದ ಮೂಲಕ ರಾಜ್ಯ ಸರಕಾರಗಳ ಮೇಲೆ ಸುಳ್ಳು ಆಪಾದನೆಗಳನ್ನು ಹಾಕಿ, ಹೊಣೆಗಾರಿಕೆಯನ್ನು ಅವುಗಳ ಮೇಲೆ ದಾಟಿಸಲು ಪ್ರಯತ್ನಿಸಿರುವುದು ಖಂಡನಾರ್ಹ. ಜನಗಳು ಇದನ್ನು ತಿರಸ್ಕರಿಸುತ್ತಾರೆ ಎಂದು ಪೊಲಿಟ್ ಬ್ಯುರೊ ಹೇಳಿದೆ. "ಉದಾರೀಕೃತ ಲಸಿಕೆ ನೀತಿ" ಕೇಂದ್ರ ಸರಕಾರದ ಏಕಪಕ್ಷೀಯ ನಿರ್ಧಾರವಗಿತ್ತು ಎಂಬುದನ್ನು ಪೊಲಿಟ್‌ಬ್ಯುರೊ ನೆನಪಿಸಿದೆ.

ಆದರೂ ಈ ವಿಫಲ ಲಸಿಕೆ ನೀತಿಯನ್ನು ಪೂರ್ಣವಾಗಿ ಬದಲಿಸಿಲ್ಲ. ದ್ವಂದ್ವ ಬೆಲೆ ನಿರ್ಧಾರ ನೀತಿಯನ್ನು ಅದು ಮುಂದುವರೆಸುತ್ತಿದೆ. ಈಗಲೂ ಲಸಿಕೆ ಉತ್ಪಾದನೆಯ 25% ದಷ್ಟು ದೊಡ್ಡ ಪ್ರಮಾಣವನ್ನು ಖಾಸಗಿಯವರಿಗೆ ಮೀಸಲಿಡಲಾಗಿದೆ. ಇದು ಖಾಸಗಿ ತಯಾರಕರಿಗೆ ಸೂಪರ್ ಲಾಭಗಳನ್ನು ಲೂಟಿ ಹೊಡೆಯಲು ಒಂದು ಪರವಾನಿಗೆಯಲ್ಲದೆ ಬೇರೇನೂ ಅಲ್ಲ ಎಂದು ಸಿಪಿಐ(ಎಂ) ಹೇಳಿದೆ. ಅಲ್ಲದೆ, ಲಸಿಕೆಯ ತೀವ್ರ ಕೊರತೆ ಇರುವ ಸಮಯದಲ್ಲಿ ಇಂತಹ ಒಂದು ಧೋರಣೆಯನ್ನು ಮುಂದುವರೆಸುವುದು, ಕೊರೊನ ವೈರಸ್‌ನ ಮೂರನೆ ಅಲೆಯೊಂದನ್ನು ಎದುರಿಸಲು ಸಾರ್ವತ್ರಿಕ ಲಸಿಕೀಕರಣದ ಅಗತ್ಯವನ್ನು ದುರ್ಬಲ ಮತ್ತು ಪೇಲವಗೊಳಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಶ್ರೀಮಂತರು ಮಾತ್ರವೇ ಖಾಸಗಿ ಆಸ್ಪತ್ರೆಗಳ ವಿಪರೀತ ಬೆಲೆಗಳನ್ನು ತೆರಲು ಸಾಧ್ಯ.

ಖಾಸಗಿ ವಲಯಕ್ಕೆ ಈ 25% ಮೀಸಲಾತಿಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಕೇಂದ್ರ ಸರಕಾರ ಭಾರತದೊಳಗೆ ಲಸಿಕೆ ತಯಾರಿಕೆದಾರರಿಂದ ಮತ್ತು ಜಗತ್ತಿನ ಇತರೆಡೆಗಳಿಂದ ಎಲ್ಲ ಲಸಿಕೆಗಳನ್ನು ಪಡೆದುಕೊಳ್ಳಬೇಕು ಹಾಗೂ ರಾಜ್ಯಗಳೊಂದಿಗೆ ಸಮಾಲೋಚನೆ ನಡೆಸಿ ಅವನ್ನು ವಿತರಣೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಕನಿಷ್ಟ ಕೂಲಿ ನಿಗದಿ ಬಗ್ಗೆ ಇನ್ನೊಂದು 'ಪರಿಣತರ ಗುಂಪು' ನೇಮಕ: ಇನ್ನೂ 3 ವರ್ಷ ಪರಿಷ್ಕರಣೆಯನ್ನು ವಿಳಂಬಗೊಳಿಸುವ ಹುನ್ನಾರ–ಸಿಐಟಿಯು

ರಾಷ್ಟ್ರೀಯ ಕನಿಷ್ಟ ಕೂಲಿಗಳನ್ನು ನಿಗದಿ ಮಾಡಲಿಕ್ಕಾಗಿ "ತಾಂತ್ರಿಕ ಅಂಶಗಳನ್ನು ಒದಗಿಸಲು ಮತ್ತು ಶಿಫಾರಸುಗಳನ್ನು ಮಾಡಲು ಒಂದು ಪರಿಣತರ ಗುಂಪನ್ನು ರಚಿಸಲಾಗಿದೆ" ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಜೂನ್ 3ರಂದು ಒಂದು ಪತ್ರಿಕಾ ಹೇಳಿಕೆ ನೀಡಿದೆ. ಕನಿಷ್ಟ ಕೂಲಿಗಳನ್ನು ಹೆಚ್ಚಿಸುವುದು ಈ ನೇಮಕದ ಉದ್ದೇಶ ಅಲ್ಲ, ಬದಲಾಗಿ ಈ ಇಡೀ ಪ್ರಕಿಯೆಯನ್ನು ವಿಳಂಬಗೊಳಿಸುವ ಪ್ರಯತ್ನ ಎಂದು ಸಿಐಟಿಯು ಟೀಕಿಸಿದೆ. ಈ ಪರಿಣತರ ಗುಂಪಿಗೆ ಮೂರು ವರ್ಷಗಳ ಕಾರ್ಯಾವಧಿಯನ್ನು ಕೊಟ್ಟಿರುವುದೇ ಇದನ್ನು ತೋರಿಸುತ್ತದೆ. ಕನಿಷ್ಟ ಕೂಲಿಗಳನ್ನು ಹೆಚ್ಚಿನ ಮಟ್ಟದಲ್ಲಿ ನಿಗದಿ ಪಡಿಸುವ ಹುಸಿ ಕಾತುರದ ಪ್ರದರ್ಶನದ ಮರೆಯಲ್ಲಿ ಸರಕಾರದ ಆರಿಸಿದ ವ್ಯಕ್ತಿಗಳಿಗೆ ಸರಕಾರೀ ಸಮಿತಿಗಳಲ್ಲಿ ಮೂರು ವರ್ಷ ಸ್ಥಾನ ಕೊಡಲಿಕ್ಕಾಗಿ, ಅದರೊಂದಿಗೆ ಕನಿಷ್ಟ ಕೂಲಿ ನಗದಿ/ಪರಿಷ್ಕರಣೆ ಪ್ರಶ್ನೆಯನ್ನು ನೆನೆಗುದಿಯಲ್ಲಿ ಇಡಲು ಈ ಕ್ರಮ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಕೇಂದ್ರ ಕಾರ್ಮಿಕ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಟೀಕಿಸಿದ್ದಾರೆ.

ಈಗಾಗಲೇ ಜನವರಿ 2018ರಲ್ಲಿ ಇದೇ ವಿಷಯದ ಮೇಲೆ ಇಂತಹ ಒಂದು ಪರಿಣಿತರ ಸಮಿತಿಯನ್ನು ಮೋದಿ ಸರಕಾರವೇ ನೇಮಿಸಿತ್ತು. ಅದು ಜನವರಿ 2019ರಲ್ಲಿ ಒಂದು ಭಾರೀ ಗಾತ್ರದ ವರದಿಯೊಂದಿಗೆ ತನ್ನ ಶಿಫಾರಸುಗಳನ್ನೂ ಸಲ್ಲಿಸಿದೆ. ಆದರೆ ಆ ವರದಿ ಮತ್ತು ಶಿಫಾರಸುಗಳ ಮೇಲೆ ಕ್ರಮ ಕೈಗೊಳ್ಳುವ ಬದಲು ಈಗ ಇನ್ನೊಂದು ಪರಿಣತರ ಗುಂಪನ್ನು ನೇಮಿಸಲಾಗಿದೆ, ಅದೂ ಮೂರು ವರ್ಷಕ್ಕೆ. ಅಂದರೆ ಕನಿಷ್ಟ/ನೆಲಮಟ್ಟದ ಕೂಲಿಯ ನಗದಿ/ಪರಿಷ್ಕರಣೆಯನ್ನು ಅಂತಿಮಗೊಳಿಸಲು ಇನ್ನೂ ಕನಿಷ್ಟ ಮೂರು ವರ್ಷ ಕಾಯಬೇಕು ಎಂದು ಅರ್ಥವೇ ಎಂದು ತಪನ್ ಸೆನ್ ಪ್ರಶ್ನಿಸಿದ್ದಾರೆ.

ಕನಿಷ್ಟ ಕೂಲಿಗಳನ್ನು ನಿರ್ಧರಿಸಲು ಬೇಕಾಗುವ ಅಂಶಗಳನ್ನು, ಮಾಹಿತಿಗಳನ್ನು ಪಡೆಯಲಿಕ್ಕಾಗಿ ಈ ನೇಮಕ ಎಂದು ಸರಕಾರ ಹೇಳಿದೆ. ಸರಕಾರಕ್ಕೆ ಎಂತಹ ಮಾಹಿತಿಗಳು ಬೇಕಾಗಿವೆ? "ಕೂಲಿ ದರಗಳನ್ನು ನಿರ್ಧರಿಸಲು ಈ ಗುಂಪು ಸಂಬಳಗಳು ಮತ್ತು ಕೂಲಿಗಳನ್ನು ಕುರಿತಂತೆ ಅಂತರ್ರಾಷ್ಟ್ರೀಯವಾಗಿ ಅನುಸರಿಸುವ ಅತ್ಯುತ್ತಮ ಅಂಶಗಳನ್ನು ಪರಿಗಣನೆಗೆ ತಗೊಂಡು, ಕೂಲಿಗಳ ನಿಗದಿಗೆ ಒಂದು ವೈಜ್ಞಾನಿಕ ಮಾನದಂಡ ಮತ್ತು ವಿಧಾನವನ್ನು ವಿಕಾಸಗೊಳಿಸುತ್ತದೆ" ಎಂದು ಹೇಳಲಾಗಿದೆ.

ಆದರೆ ಈ ಎಲ್ಲ ಅಂಶಗಳನ್ನು ಈಗಾಗಲೇ ದೇಶದ ಕಾರ್ಮಿಕರು, ಮಾಲಕರು ಮತ್ತು ಸರಕಾರದ ಪ್ರತಿನಿಧಿಗಳನ್ನು ಉಳ್ಳ ಉನ್ನತ ಮಟ್ಟದ ತ್ರಿಪಕ್ಷೀಯ ವ್ಯವಸ್ಥೆಯಾದ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ) ಒದಗಿಸಿದೆ. ಈ ಕುರಿತ ಸೂತ್ರವನ್ನು 15ನೇ ಐಎಲ್‌ಸಿ ಮತ್ತು ರಪ್ತಕ್ಕೋಸ್ ಬ್ರೆಟ್ ಕೇಸಿನಲ್ಲಿ ಸುಪ್ರಿಂ ಕೋರ್ಟಿನ ಆದೇಶ ಈಗಾಗಲೆ ಒದಗಿಸಿದೆ. ಇದನ್ನು ಸರಕಾರವೂ ಒಪ್ಪಿಕೊಂಡಿದೆ.

ಇದಲ್ಲದೆ ವೇತನಗಳು ಮತ್ತು ಕೂಲಿಗಳನ್ನು ಕುರಿತ 2019ರ ಸಂಹಿತೆಗೆ ಇದೇ ಸರಕಾರ ತಯಾರಿಸಿದ ಕರಡು ನಿಯಮಾವಳಿಗಳಲ್ಲೂ ಈ ವೈಜ್ಞಾನಿಕ ಸೂತ್ರವನ್ನು ಅಳವಡಿಸಲಾಗಿದೆ. ಇದಕ್ಕೆ ಬೇಕಾದ ಅಂಕಿ–ಅಂಶಗಳೆಲ್ಲ ಸಾರ್ವಜನಿಕವಾಗಿ ಲಭ್ಯ ಇವೆ.

ಹೀಗಿರುವಾಗ ಮತ್ತೆ ಹೊಸದಾಗಿ ಈ ಪರಿಣತರ ಗುಂಪಿನ ಪ್ರಕ್ರಿಯೆಯನ್ನು ಆರಂಭಿಸುವ ಅಗತ್ಯವೇನೂ ಇರಲಿಲ್ಲ. ಕನಿಷ್ಟ ಕೂಲಿಗಳನ್ನು ಏರಿಸುವುದು ಕಾರ್ಮಿಕರ ಜೀವನೋಪಾಯಗಳಿಗೆ ಮಾತ್ರವಲ್ಲ, ಕುಸಿದಿರುವ ದೇಶದ ಅರ್ಥವ್ಯವಸ್ಥೆಯ ಪುನಶ್ಚೇತನಕ್ಕೂ ಅತ್ಯಗತ್ಯ. ಆದರೆ ಈಗ ಮತ್ತೊಂದು ಪರಿಣತರ ಗುಂಪಿನ ನೇಮಕ ಕನಿಷ್ಟ ಕೂಲಿಗಳನ್ನು ಹೆಚ್ಚಿನ ಮಟ್ಟಕ್ಕೆ ಏರಿಸುವ ಕೆಲಸವನ್ನು, ವಿಳಂಬಗೊಳಿಸುತ್ತದೆ; ಇನ್ನೊಂದೆಡೆಯಲ್ಲಿ ತ್ರಿಪಕ್ಷೀಯ ವ್ಯವಸ್ಥೆಯನ್ನೂ ಬದಿಗೆ ತಳ್ಳುತ್ತದೆ. ಈ ಕ್ರಿಯೆಯಿಂದ ಲಾಭ ಈ ಪರಿಣತರ ಗುಂಪಿನ ಸದಸ್ಯರು ಮತ್ತು ಮಾಲಕರಿಗೆ ಮಾತ್ರ ಎಂದಿರುವ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳ ಪತ್ರ ತಕ್ಷಣವೇ ನ್ಯಾಯ ಮತ್ತು ಯುಕ್ತತೆಯ ದೃಷ್ಟಿಯಿಂದ ಇನ್ನೊಂದು ಪರಿಣತರ ಸಮಿತಿಯ ನೇಮಕದ ಈ ಕಸರತ್ತನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ.

ಮತ್ತೊಮ್ಮೆ ರೈತರಿಗೆ ವಿಶ್ವಾಸಘಾತ: ಏರಿರುವ ವೆಚ್ಚಗಳನ್ನೂ ಭರಿಸದ ಎಂಎಸ್‌ಪಿ: ಎಐಕೆಎಸ್ ಖಂಡನೆ

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಪ್ರಕಟಿಸಿರುವ 2021–22ರ ಮುಂಗಾರು ಬೆಳೆಗಳ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳು ಫಲದಾಯಕವೂ ಆಗಿಲ್ಲ, ಏರಿರುವ ಬೇಸಾಯ ವೆಚ್ಚಗಳಿಗೆ ಅನುಗುಣವಾಗಿಯೂ ಇಲ್ಲ, ದೇಶದ ರೈತರಿಗೆ ಈ ಸರಕಾರ ವಿಶ್ವಾಸಘಾತ ಮಾಡಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ.

ಕಳೆದ ವರ್ಷದ ಎಂಎಸ್‌ಪಿಗಳಿಗೆ ಒಂದು ಸಣ್ಣ ಅಂಶವನ್ನು ಯಾಂತ್ರಿಕವಾಗಿ ಸೇರಿಸಿ ಇವನ್ನು ಪ್ರಕಟಿಸಿಸಲಾಗಿದೆ. ಬಿಜೆಪಿ ಸರಕಾರದ ನೀತಿಗಳಿಂದಾಗಿ ಆಗಿರುವ ಹಣದುಬ್ಬರ ಅಥವ ವ್ಯವಸಾಯದ ಖರ್ಚುಗಳಲ್ಲಿ ಆಗಿರುವ ಏರಿಕೆಗಳನ್ನು ಇದು ಲೆಕ್ಕಕ್ಕೆ ತಗೊಂಡಿಲ್ಲ. ಸಿ2, ಅಂದರೆ ಸಮಗ್ರ ವೆಚ್ಚಗಳು+ 50% ಎಂಬ ಸೂತ್ರದ ಪ್ರಕಾರ ಎಂಎಸ್‌ಪಿಯನ್ನು ಲೆಕ್ಕ ಹಾಕುವ ಬದಲು, ಮಾಡಿದ ವೆಚ್ಚಗಳು + ಕುಟುಂಬ ಶ್ರಮದ ಅನುಮಾನಿತ ಮೌಲ್ಯ(ಎ2+ಎಫ್‌ಎಲ್)ಸೂತ್ರದ ಮೇಲೆಯೇ ಎಂಎಸ್‌ಪಿಗಳನ್ನು ಲೆಕ್ಕ ಹಾಕುವ ತನ್ನ ಸೋಗಿನ ವರ್ತನೆಯನ್ನು ಈ ಸರಕಾರ ಮುಂದುವರೆಸುತ್ತಿದೆ ಎಂದು ಎಐಕೆಎಸ್ ಹೇಳಿದೆ.

ಇದು ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವ ಸಿ2+50% ಕ್ಕಿಂತ ಬಹಳ ಕೆಳ ಮಟ್ಟದಲ್ಲಿದೆ, ಸಾಂಕ್ರಾಮಿಕದಿಂದ ಮತ್ತು ಲಾಗುವಾಡುಗಳ ವೆಚ್ಚಗಳಲ್ಲಿ ಲಂಗುಲಗಾಮಿಲ್ಲದ ಏರಿಕೆಗಳಿಂದಾಗಿ ಈಗಾಗಲೇ ಬಿಕ್ಕಟ್ಟಿನಲ್ಲಿರುವ ರೈತರ ಆಕಾಂಕ್ಷೆಗಳನ್ನು ಇದು ಈಡೇರಿಸುವುದಿಲ್ಲ.

ಈಗ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆಗಳು ಫಲದಾಯಕವಾಗಿವೆ ಎಂಬ ಸುಳ್ಳನ್ನು ಬಯಲಿಗೆಳೆಯಬೇಕಾಗಿದೆ ಎಂದಿರುವ ಎಐಕೆಎಸ್, ಇವು ರೈತರಿಗೆ ಲಾಭದಾಯಕವಾಗಿಲ್ಲ, ಮಾತ್ರವಲ್ಲ, ಈ ಅಲ್ಪ ಏರಿಕೆಯೂ ಬಹುಪಾಲು ರೈತರಿಗೆ ದಕ್ಕುವುದಿಲ್ಲ ಎಂದು ಹೇಳಿದೆ. ಏಕೆಂದರೆ, ಸರಕಾರದಿಂದ ರೈತರ ಬೆಳೆಗಳ ಖರೀದಿಯ ಖಾತ್ರಿಯೆನೂ ಇಲ್ಲ.

ಮೊದಲನೆಯದಾಗಿ, 'ಕೃಷಿ ವೆಚ್ಚಗಳು ಮತ್ತು ಬೆಲೆಗಳ ಅಯೋಗ'(ಸಿಎಸಿಪಿ) ಮತ್ತು ರಾಜ್ಯ ಕೃಷಿ ಇಲಾಖೆಗಳು ಲೆಕ್ಕ ಹಾಕಿರುವ ವೆಚ್ಚಗಳನ್ನೇ ತಗೊಂಡರೂ ಸಿ2 ಮತ್ತು ಎ2+ಎಫ್‌ಎಲ್ ಲೆಕ್ಕಗಳಲ್ಲಿ ಅಪಾರ ಅಂತರ ಇದೆ. ಎರಡನೆಯದಾಗಿ, ಸಿಎಸಿಪಿ ಲೆಕ್ಕಹಾಕಿರುವ ವೆಚ್ಚಗಳು ಮತ್ತು ರಾಜ್ಯ ಕೃಷಿ ಇಲಾಖೆಗಳು ಲೆಕ್ಕ ಹಾಕಿರುವ ವೆಚ್ಚಗಳ ನಡುವೆಯೂ ಅಪಾರ ಅಂತರವಿದೆ.

ಸರಕಾರ ಕನಿಷ್ಟ ಬೆಂಬಲ ಬೆಲೆ ನಿಗದಿಯಲ್ಲೇ ವಂಚನೆ ಮಾಡುತ್ತದೆ, ಮಾತ್ರವಲ್ಲ, ಈ ಎಲ್ಲ ಬೆಳೆಗಳನ್ನೂ ಸರಕಾರ ಖರೀದಿಸುವ ಖಾತ್ರಯಿಲ್ಲವಾದ್ದರಿಂದ ರೈತರಿಗೆ ಈ ಬೆಲೆಗಳೂ ಸಿಗುವ ಖಾತ್ರಿಯಿಲ್ಲ. ಆದ್ದರಿಂದಲೇ ವ್ಯವಸಾಯ ವೆಚ್ಚಗಳನ್ನು ಸರಿಯಾಗಿ ಲೆಕ್ಕ ಹಾಕಬೇಕು, ಕನಿಷ್ಟ ಬೆಂಬಲ ಬೆಲೆಗಳನ್ನು ಸಿ2+50% ಸೂತ್ರದಂತೆ ನಿಗದಿಪಡಿಸಬೇಕು ಹಾಗು ಈ ಬೆಲೆಗಳನ್ನು ಖಾತ್ರಿಪಡಿಸುವ ಒಂದು ಕಾನೂನು ತರಬೇಕು ಎಂದು ರೈತರು ಆಗ್ರಹಿಸುತ್ತಿದ್ದಾರೆ.

ಅಲ್ಲದೆ, ಈ ಮೇಲೆ ಹೇಳಿದಂತೆ ಸಿ.ಎ.ಸಿ.ಪಿ. ಅಂದಾಜು ಮಾಡಿರುವ ಸಿ2 ವೆಚ್ಚಗಳು ಬಹಳಷ್ಟು ಸಂದರ್ಭಗಳಲ್ಲಿ ರಾಜ್ಯಗಳ ಕೃಷಿ ಇಲಾಖೆಗಳು ಲೆಕ್ಕ ಹಾಕಿದ ಅಂದಾಜು ವೆಚ್ಚಗಳಿಗಿಂತ ಕಡಿಮೆ ಇರುತ್ತದೆ. ಉದಾ: ಕರ್ನಾಟಕದಲ್ಲಿ ಭತ್ತದ ವ್ಯವಸಾಯಕ್ಕೆ ತಗಲುವ ವೆಚ್ಚ ಕ್ವಿಂಟಾಲಿಗೆ ರೂ.2733 ಎಂದು ರಾಜ್ಯ ಕೃಷಿ ಇಲಾಖೆ ಅಂದಾಜು ಮಾಡಿದರೆ, ಸಿಎಸಿಪಿ ಅಂದಾಜು ರೂ.1635ರೂ, ಅಂದರೆ ರೂ.1098 ಕಡಿಮೆ. ತೊಗರಿಗೆ ರೂ.6399 ಎಂದು ಆಂದಾಜು ಮಾಡಿದ್ದರೆ, ಸಿಎಸಿಪಿ ಅಂದಾಜು ರೂ. ರೂ.4961, ಅಂದರೆ ರೂ. 1438 ಕಡಿಮೆ.

ನರೇಂದ್ರ ಮೋದಿ ಸರಕಾರ ಇಂತಹ ವಂಚಕ ಕಸರತ್ತುಗಳಿಂದ ರೈತರಿಗೆ ಮೋಸ ಮಾಡುವುದನ್ನು ನಿಲ್ಲಿಸಬೇಕು, ಮತ್ತು ವೆಚ್ಚಗಳ ಲೆಕ್ಕಾಚಾರಗಳಲ್ಲಿನ ಸಮಸ್ಯೆಗಳನ್ನು ಸರಿಪಡಿಸಿ ರೈತರ ಬೆಳೆಗಳಿಗೆ ಫಲದಾಯಕ ಬೆಲೆಗಳನ್ನು ಖಾತ್ರಿಪಡಿಸಲು ಒಂದು ಕಾಯ್ದೆಯನ್ನು ತರಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ಬಿಜೆಪಿ ಸರಕಾರದ ಈ ವಿಶ್ವಾಸಘಾತವನ್ನು ಪ್ರತಿಭಟಿಸಬೇಕು, ಬಯಲಿಗೆಳೆಯಬೇಕು ಎಂದು ಅದು ತನ್ನ ಘಟಕಗಳಿಗೆ ಕರೆ ನೀಡಿದೆ.

ಬೆಳೆ (1)	ಎ2+ಎಫ್‌ಎಲ್ (2)	ಸಿ2 (3)	ಸಿ2+50% (4)	ಎಂಎಸ್‌ಪಿ (5)	ಸಿ2+50%–ಎಂಎಸ್‌ಪಿ (6)=(4)–(5)=ರೈತರಿಗೆ ನಷ್ಟ
ಭತ್ರ	1293	1727	2590.5	1940	650.5
ಜೋಳ	1825	2478	3717	2738	979
ಸೆಜ್ಜೆ	1213	1579	2368.5	2250	118.5
ರಾಗಿ	2251	3004	4506	3377	1129
ಮೆಕ್ಕೆಜೋಳ	1246	1654	2481	1870	611
ತೊಗರಿ	3886	5291	7936.5	6300	1636.5
ಹೆಸರು	4850	6110	9165	7275	1890
ಉದ್ದು	3816	5133	7699.5	6300	1399.5
ನೆಲಗಡಲೆ	3699	4732	7098	5550	1548
ಸೋಯಬೀನ್	2633	3439	5158.5	3950	1208.5
ಸೂರ್ಯಕಾಂತಿ	4010	5027	7540.5	6015	1525.5
ಸಾಸಿವೆ	4871	6653	9979.5	7307	2672.5
ಹತ್ತಿ	3817	5169	7753.5	5726	2027.5

ಕಾಲಂ (4) ಸ್ವಾಮಿನಾಥನ್ ಆಯೋಗದ ಸೂತ್ರದ ಪ್ರಕಾರ ಪ್ರಕಟಿಸಬೇಕಾಗಿದ್ದ ಕನಿಷ್ಟ ಬೆಂಬಲ ಬೆಲೆ ಮತ್ತು ಕಾಲಂ (5) ಸರಕಾರ ಪ್ರಕಟಿಸಿರುವ ಎಂಎಸ್‌ಪಿ. ಕಾಲಂ (6) ಇವೆರಡರ ನಡುವಿನ ವ್ಯತ್ಯಾಸವನ್ನು, ಅಂದರೆ ಸರಕಾರ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆ ದೊರೆತರೂ ರೈತರಿಗೆ ಪ್ರತಿ ಕ್ವಿಂಟಾಲಿಗೆ ಆಗಿರುವ ನಷ್ಟವನ್ನು ಸೂಚಿಸುತ್ತದೆ.

ಸಂಪಾದಕೀಯ

ಸಲ್ಲದ ವಿದ್ಯುತ್ ದರ ಏರಿಕೆ

ರಾಜ್ಯದ ಜನ ಕೊರೊನಾದಿಂದ ತತ್ತರಿಸುತ್ತಿದ್ದಾರೆ. ಅದೆಷ್ಟೋ ಸಾವುಗಳಿಗಾಗಿ ರೋದಿಸುತ್ತಿದ್ದಾರೆ. ಅದೆಷ್ಟೋ ಮಂದಿ ಮಕ್ಕಳು, ಮುದುಕರು ಆರೈಕೆ ಕೇಂದ್ರಗಳೆಂಬ ಬಂಧಿಖಾನೆಗಳಲ್ಲಿ ನರಕಯಾತನೆ ಅನುಭವಿಸುತ್ತಿದ್ದಾರೆ. ಇಂತಹ ಸಂಕಷ್ಟದ ಸಮಯದಲ್ಲಿ ನೊಂದವರಿಗೆ, ಸೋಂಕಿತರಿಗೆ ಬದುಕಿನ ಭರವಸೆ ನೀಡುವ ಬದಲಾಗಿ ಸರಕಾರ ಅವರ ಮೇಲೆ ಬಂಡೆಯಂತಹ ಹೊರೆಯನ್ನು ಹೇರಿದೆ. ಎಪ್ರಿಲ್ ಒಂದರಿಂದಲೇ ಪೂರ್ವಾನ್ವಯವಾಗುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ (ಕೆಇಆರ್‌ಸಿ)ವು ಪ್ರತಿ ಯೂನಿಟ್ ವಿದ್ಯುತ್‌ಗೆ 30 ಪೈಸೆಯಂತೆ ದರ ಏರಿಕೆ ಮಾಡಿದೆ. ಇದು ಸಂಕಷ್ಟದಲ್ಲಿರುವ ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಲೀಟರ್ ಒಂದಕ್ಕೆ ರೂ. 100 ಗಡಿ ದಾಟಿದೆ. 2021 ಜನವರಿಯಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರ 48 ಬಾರಿ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಏರಿಸಿದೆ. ಇದೇ ಮೇ 4 ರಿಂದ ಒಟ್ಟು 20 ಬಾರಿ ತೈಲ ಬೆಲೆ ಏರಿಕೆ ಮಾಡಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಿಂದಾಗಿ ಎಲ್ಲಾ ಅಗತ್ಯ ವಸ್ತುಗಳ ಬೆಳೆಗಳಲ್ಲಿ ಏರಿಕೆ ಆಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ತಗ್ಗಿದಾಗ ಕೇಂದ್ರ ಸರ್ಕಾರವು ದೇಶಿ ಮಾರುಕಟ್ಟೆಯಲ್ಲಿ ತೈಲದ ಮೇಲಿನ ಎಕ್ಸೆಸ್ ಸುಂಕವನ್ನು ಜಾಸ್ತಿ ಮಾಡಿ ಕಚ್ಚಾ ತೈಲದ ಬೆಲೆ ಇಳಿಕೆಯ ಪ್ರಯೋಜನ ಗ್ರಾಹಕರಿಗೆ ಸಿಗದಂತೆ ಮಾಡುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಬೆಲೆ ಇಳಿಕೆಯನ್ನು ಮೊದಲು ಕೇಂದ್ರ ಸರ್ಕಾರ ಮಾಡಬೇಕೋ ಅಥವಾ ರಾಜ್ಯ ಸರ್ಕಾರಗಳು ಮಾಡಬೇಕೋ ಎಂಬ ಚರ್ಚೆಯೂ ಚಾಲ್ತಿಯಲ್ಲಿದೆ. ಕೇಂದ್ರ ಸರ್ಕಾರ ಕಡಿಮೆ ಮಾಡಿದರೆ ರಾಜ್ಯ ಸರ್ಕಾರಗಳು ತೆರಿಗೆಯನ್ನು ಜಾಸ್ತಿ ಮಾಡಿಕೊಳ್ಳುತ್ತವೆ ಎಂಬ ಮೊಂಡುವಾದ ಕೇಂದ್ರ ಸರ್ಕಾರ ಪ್ರತಿಪಾದಿಸುತ್ತದೆ. ಇದರ ನಡುವೆ ಬಡವಾಗುತ್ತಿರುವವರು ಜನಸಾಮಾನ್ಯರು.

ರಾಜ್ಯದಲ್ಲಿ ತೈಲ ದರ ಏರಿಕೆಯಿಂದಾಗಿ ಎಲ್ಲಾ ಅಗತ್ಯ ವಸ್ತುಗಳ ದರಗಳು ಗಗನ ಗಗನಮುಖಿಯಾಗಿವೆ. ಇಡೀ ರಾಜ್ಯವು ಆರೋಗ್ಯ ಸೇವೆಗಾಗಿ, ಉದ್ಯೋಗಕ್ಕಾಗಿ ಕನಿಷ್ಟ ಪೌಷ್ಠಿಕ ಆಹಾರಕ್ಕಾಗಿ ಪರಿತಪಿಸುತ್ತಿದ್ದಾರೆ. ಲಾಕ್‌ಡೌನ್‌ನಿಂದಾಗಿ ಆರ್ಥಿಕ ಚಟುವಟಿಕೆಗಳು ಸ್ತಬ್ಧವಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಸರ್ಕಾರ ವಿದ್ಯುತ್ ದರವನ್ನು ಹೆಚ್ಚಿಸಿ ಹಸಿಗಾಯದ ಮೇಲೆ ಉಪ್ಪು ಸವರುವ ಕೆಲಸ ಮಾಡಿದೆ. ತೈಲ ಬೆಲೆ ಏರಿಕೆ ಮತ್ತು ಅದರಿಂದ ಉಂಟಾದ ಅಗತ್ಯ ವಸ್ತು ಹಾಗೂ ಸೇವೆಗಳ ಗಣನೀಯ ಬೆಲೆ ಏರಿಕೆಯಿಂದ ಕಂಗೆಟ್ಟ ಬಡಜನಗಳ ಮೇಲೆ ಇನ್ನೊಂದು ಹೊರೆ ಬೀಳಲಿದೆ.

ಮೋದಿ ಸರ್ಕಾರದ ಈ ಧೋರಣೆ ಆಕಸ್ಮಿಕವಾಗಿ ಬಂದದ್ದಲ್ಲ. ಈಗಾಗಲೇ ಮೋದಿ ಸರ್ಕಾರ ವಿದ್ಯುತ್ ರಂಗದ ಪೂರ್ಣಪ್ರಮಾಣದ ಖಾಸಗೀಕರಣಕ್ಕೆ ಸಜ್ಜಾಗುತ್ತಿದೆ. ಕೊರೋನಾ ನೆರಳಿನಲ್ಲಿ ಜಾರಿಗೆ ತರಲಾಗುತ್ತಿರುವ ವಿದ್ಯುತ್ ಖಾಸಗೀಕರಣದ ಕಾಯ್ದೆಗೂ ಮೋದಿಯವರು ಕಾರ್ಪೊರೇಟ್ ಕಂಪನಿಗಳಿಗೆ ನೀಡಿರುವ ಆಹ್ವಾನಕ್ಕೂ ಅಂತರ್ಗತ ಸಂಬಂಧವಿದೆ. ವಿದ್ಯುತ್ ರಂಗ ಒಂದು ಲಾಭದಾಯಕ ಯೋಜನೆ ಆಗಲಿದೆ ಎಂದು, ಇಲ್ಲಿ ಬಂಡವಾಳ ಹೂಡಲು ಬಯಸುವ ಕಂಪನಿಗಳಿಗೆ ಮುಂದೆ ಒಳ್ಳೆಯ ದಿನಗಳು ಪ್ರಾಪ್ತವಾಗಲಿದೆ ಎಂದು ಬಿಂಬಿಸುವುದು ಮೋದಿಯವರ 'ಮನ್ ಕಿ ಬಾತ್'.

ಖಾಸಗಿ ಕಂಪನಿಗಳು, ವಶಪಡಿಸಿಕೊಳ್ಳುವ ವಿದ್ಯುತ್ ರಂಗ ಅವುಗಳ ಮೇಲೆ, ಅವುಗಳು ನಿರ್ಧರಿಸುವ ದರಗಳ ಮೇಲೆ ಅವುಗಳು ನಿರ್ಧರಿಸುವ ದರಗಳ ಮೇಲೆ ಸಂಪೂರ್ಣ ಸ್ವಾತಂತ್ರ್ಯ ಹೊಂದಿರುತ್ತವೆ ಎಂದು ಮೋದಿಯವರು ಆ ಕಾರ್ಪೊರೇಟ್ ಕಂಪನಿಗಳಿಗೆ ಭರವಸೆ ನೀಡುತ್ತಿದ್ದಾರೆ. ಇನ್ನು ಮುಂದೆ ಯಾವ ರೈತರಿಗೂ ಅವರ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪಡೆಯಲಾರರು. ದಲಿತರಿಗೆ, ಗ್ರಾಮೀಣ ಬಡವರಿಗೆ ಭಾಗ್ಯಜ್ಯೋತಿ, ಕುಟಿರಜ್ಯೋತಿ ಅಂತಹ ಸೌಲಭ್ಯಗಳು ದೊರಕಲಾರವು. ಮನೆ ಬಳಕೆಯ ವಿದ್ಯುತ್ ದುಬಾರಿಯಾಗುವುದು. ಸರ್ಕಾರದ ಈ ದುರುದ್ದೇಶ ಪೂರಿತ ವಿದ್ಯುತ್ ದರ ಏರಿಕೆಯನ್ನು ನ್ಯಾಯಾಲಯದಲ್ಲಿ ಮತ್ತು ಹೊರಗೆ ವಿರೋಧಿಸಲು ದೇಶದ ಜನತೆ ಮುಂದಾಗಬೇಕು.



ನೋವುಗಳನ್ನೇ ಹಾಡಾಗಿಸಿದ ಕವಿ ಸಿದ್ದಲಿಂಗಯ್ಯ: ಸಿಐಟಿಯು

ನಾಡಿದ ಶೋಷಿತರ ಜನಸಮುದಾಯದ ಭರವಸೆಯ ಬೆಳಕಾಗಿದ್ದ ಮತ್ತು ತನ್ನ ಕವಿತನದಿಂದ ಕಳೆದ ನಾಲ್ಕು ದಶಕಗಳಿಂದ ಶೋಷಿತರನ್ನು ಸದಾ ಎಚ್ಚರದಿಂದ ಇರುವಂತೆ ಮಾಡಿದ್ದ ಕವಿ, ಅಧ್ಯಾಪಕ ಸಿದ್ದಲಿಂಗಯ್ಯ ಕರೋನಾದಿಂದ ನಿಧನರಾಗಿರುವುದು ತೀರ ದುಃಖ ಉಂಟು ಮಾಡುವ ಸಂಗತಿಯಾಗಿದೆ. ಆಗಲಿದ ಕವಿಗೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ರಾಜ್ಯ ಸಮಿತಿ ತೀವ್ರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಎಪ್ಪತ್ತರ ದಶಕದಿಂದಲೂ ರಾಜ್ಯದಲ್ಲಿ ಬೆಳೆದು ಬಂದ ದಲಿತ, ಬಂಡಾಯ, ಸಾಂಸ್ಕೃತಿಕ ಹಾಗೂ ಮಹಿಳಾ ಮೊದಲಾದ ಚಳವಳಿಯ ಭಾಗವಾಗಿಯೇ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ ಸಿದ್ದಲಿಂಗಯ್ಯ ಆ ಎಲ್ಲ ಚಳವಳಿಗಳನ್ನು ರಾಜ್ಯಾದ್ಯಂತ ಬೆಳೆಸಲು ಅಮೂಲ್ಯ ಕೊಡುಗೆಯನ್ನು ನೀಡಿದ್ದರು.

ಬಾಲ್ಯದಲ್ಲಿ ಅನುಭವಿಸಿದ ನೋವುಗಳನ್ನೇ ಕವಿತೆಯಾಗಿಸುವ ಮತ್ತು ಹಾಡಾಗಿಸುವ ಮೂಲಕ ಇಡೀ ಶೋಷಿತರ ನಡುವೆ ಅದರಲ್ಲೂ ಅಸ್ಪೃಶ್ಯತೆಯಲ್ಲಿ ನೊಂದ ಲಕ್ಷಾಂತರ ದಲಿತರಲ್ಲಿ ಜಾಗೃತಿ ಮೂಡಿಸಲು ಕಾರಣವಾದರು ಸಿದ್ದಲಿಂಗಯ್ಯನವರು. 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಎನ್ನುವ ಅವರ ಕವನ ಈಗಲೂ ಶೋಷಿತರ ಮನದಲ್ಲಿ ರೋಮಾಂಚಕ ಉಂಟು ಮಾಡುವಂತದ್ದು. 'ಊರು ಕೇರಿ' ಎನ್ನುವ ಆತ್ಮ ಕಥನವು ಸಿದ್ದಲಿಂಗಯ್ಯ ಅವರ ಬೆಳೆದು ಬಂದ ಮತ್ತು ಅವರು ಅನುಭವಿಸಿದ ಸಂಕಟಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಇಂತಹ ಬಹುಮುಖ ವ್ಯಕ್ತಿತ್ವದ ಕವಿ, ಬರಹಗಾರ, ಅಧ್ಯಾಪಕ ಡಾ ಸಿದ್ದಲಿಂಗಯ್ಯ ಕಳೆದ ಒಂದೂವರೆ ತಿಂಗಳಿಂದ ಕರೋನಾ ವಿರುದ್ಧ ನಿರಂತರವಾಗಿ ಹೋರಾಡುತ್ತಲೇ ಬಂದರೂ ಅಂತಿಮವಾಗಿ ಅದಕ್ಕೆ ಶರಣಾಗಬೇಕಾದುದ್ದು ದುಃಖದ ಸಂಗತಿ. ಅವರು ಬದುಕಿ ಬರುವವರೆಂದು ಕಾಯುತ್ತಿದ್ದ ಲಕ್ಷಾಂತರ ಶೋಷಿತರಿಗೆ ಇದು ಅತ್ಯಂತ ನಿರಾಶೆಯ ದಿನವಾಗಿದೆ.

ಸಿದ್ದಲಿಂಗಯ್ಯ ಅವರು ಇಡೀ ಕುಟುಂಬದ ನೋವಿನ ಜೊತೆ ಸಿಐಟಿಯು ರಾಜ್ಯ ಸಮಿತಿ ನಿಂತಿದೆ

ಅಗಲಿದ ಡಾ ಸಿದ್ದಲಿಂಗಯ್ಯ ಅವರಿಗೆ ಭಾವಪೂರ್ಣ ಅಂತಿಮ ನಮನಗಳು.

ನವಿರೇಳಿಸಿದ 'ನೆನ್ನೆ ದಿನ ನನ್ನ ಜನ...'

1979ರಲ್ಲಿ ಸಮುದಾಯದ ಮೊದಲ ಜಾತಾದಲ್ಲಿ "ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು . . ." ಎಂದು ನಾವು ಜನ್ನಿ ಜತೆ ಹಾಡುವಾಗ ಮೈನವಿರೇಳುತ್ತಿತ್ತು. ಹೊಸ ನಾಡಿನ ಕನಸುಗಳನ್ನು ಬಿತ್ತಿದ್ದರು.

"ದಲಿತರು ಬರುವರು ದಾರಿಬಿಡಿ, ದಲಿತರ ಕೈಗೆ ರಾಜ್ಯ ಕೊಡಿ", ಹೀಗೆ ಬಾಯಿಪಾಠವಾಗಿದ್ದ ನಮ್ಮ ಯೌವನವನ್ನು ಹುರಿದುಂಬಿಸಿದ್ದ ಕವಿ ಇನ್ನಿಲ್ಲ ಎನ್ನುವುದನ್ನು ನಂಬಲಾಗುತ್ತಿಲ್ಲ. ಇತ್ತೀಚೆಗೆ ಅವರ ರಾಜಕೀಯ ನಡೆಗಳು ನಮಗೆ ಬೇಸರ ತರಿಸಿದ್ದವು, ನಿಜ.

ಅವರ ಕೃತಿಗಳಲ್ಲಿ ಅವರು ಪ್ರಭುತ್ವದ ವಿರುದ್ಧ ವ್ಯಕ್ತಪಡಿಸುತ್ತಿದ್ದ ಆಕ್ರೋಶ, ಆ ವಿಷಯದಲ್ಲಿನ ಅವರ ಸ್ಪಷ್ಟತೆ, ಬದ್ಧತೆ, ಈ ವ್ಯವಸ್ಥೆಯನ್ನು ಬದಲಾಯಿಸಲೇಬೇಕು ಎಂದು ತುಡಿಯುತ್ತಿದ್ದ ಅವರ ನಿಲುವು ನಮ್ಮಂಥವರಿಗೆ ಹೋರಾಟದ ಕಿಚ್ಚನ್ನು ಹಚ್ಚಿದ್ದವು. ನಮ್ಮನ್ನು ಆ ದಿಕ್ಕಿನಲ್ಲಿ ಸಾಗುವಂತೆ ಮಾಡಿದ್ದವು. ಸೈದ್ಧಾಂತಿಕವಾಗಿ ಅಷ್ಟು ಗಟ್ಟಿಯಾಗಿದ್ದ ಅವರ ನಿಲುವು ಬದಲಾದಾಗ ತಪ್ಪು ಅವರದ್ದಲ್ಲ, ಪ್ರಭುತ್ವದ್ದು ಎಂದು ಪ್ರಭುತ್ವದ ವಿರುದ್ಧ ನಮಗೆ ಕೋಪ ಬಂದಿತ್ತು. ಅವರ ಬಗ್ಗೆ ಅನುಕಂಪ ಇತ್ತು.

–ಟಿ.ಸುರೇಂದ್ರ ರಾವ್

ನಿಮ್ಮ ಕವಿತೆಗಳು ಜನಚಳುವಳಿಯ ಸ್ವತ್ತಾಗಿ ಉಳಿಯುತ್ತವೆ

ನಿಮ್ಮ ಕವಿತೆಗಳು ಆರಂಭದಲ್ಲಿ ಶತಶತಮಾನಗಳಿಂದ ತುಳಿತಕ್ಕೊಳಗಾದ ಶ್ರಮಿಕ, ದಲಿತ ಸಮುದಾಯಗಳ ಆಕ್ರೋಶದ ಆರ್ಭಟದಂತೆ ಕಂಡರೂ ಆ ಕವಿತೆಗಳಲ್ಲಿ ಅಗಾಧವಾದ ತಾತ್ವಿಕತೆ ಸಮರ್ಥವಾಗಿ ಕಾವ್ಯದಲ್ಲಿ ಬೆರೆತು ಅದ್ಭುತವಾಗಿ ಅರಳಿದ್ದು, ನಿಮ್ಮ ಕಾವ್ಯಾಭಿವ್ಯಕ್ತಿಯ ವಿಭಿನ್ನ ವಿಶಿಷ್ಟ ಗುಣ. ಬಾಬಾ ಸಾಹೇಬ ಅಂಬೇಡ್ಕರ್, ಕಾರ್ಲ್ ಮಾರ್ಕ್ಸ್ ರಂತಹ ಮಹಾನ್ ಚಿಂತಕರ ವ್ಯಕ್ತಿತ್ವ, ತತ್ವ ಹಾಗೂ ಚಿಂತನೆಗಳನ್ನು ಕವಿತೆಯಲ್ಲಿ ಅತ್ಯಂತ ಸಮರ್ಥವಾಗಿ ವಿಮರ್ಶಾತ್ಮಕವಾಗಿ ಮಂಡಿಸಿದ್ದು ಇಂದಿಗೂ ನನಗೆ ರೋಚಕವಾಗಿದೆ. ಒಟ್ಟಾರೆ ಕನ್ನಡ ಕಾವ್ಯಲೋಕದಲ್ಲಿ ಮಡುಗಟ್ಟಿದ್ದ ಭಾಷಾ ಮತ್ತು ಭಾವನೆಗಳ ಮಡಿವಂತಿಕೆಯನ್ನು ಹರಿದೊಗೆದು ಶೋಷಿತ ಸಮುದಾಯಗಳ ಭಾಷೆ ಅಭಿವ್ಯಕ್ತಿಯನ್ನು ಕಾವ್ಯದ ಕಸುವಾಗಿಸಿದ್ದು ಉಲ್ಲೇಖನಾರ್ಹ. ಹೀಗೆ ಒಡನಾಡಿ 'ಕವಿಗಳಾಗಿ' ಸಾಹಿತ್ಯ ಸಾಂಸ್ಕೃತಿಕ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿ ಅಗಲಿದ್ದೀರಿ.

ನೀವು ಸದಾ ನಮ್ಮ ಎಲ್ಲರ ನೆನಪಿನಲ್ಲಿ ಇರುತ್ತೀರಿ. ತಾವು ಬರೆದ ಕವಿತೆ, ಬರಹಗಳು ಜನ ಚಳುವಳಿಯ ಸ್ವತ್ತಾಗಿವೆ, ಉಳಿಯುತ್ತವೆ.

–ಗುರುಶಾಂತ್ ಎಸ್.ವೈ

ವಿದ್ಯುತ್ ದರ ಏರಿಕೆಯನ್ನ ಮತ್ತು ಸಾರ್ವಜನಿಕ ವಿದ್ಯುತ್ ರಂಗದ ಖಾಸಗೀಕರಣವನ್ನು ತಡೆಯಲು ಒತ್ತಾಯ

ಮಾನ್ಯಶ್ರೀ, ಬಿ.ಎಸ್. ಯಡಿಯೂರಪ್ಪರವರು
ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ

ರಾಜ್ಯದಾದ್ಯಂತ ವಿದ್ಯುತ್ ಬೆಲೆ ಏರಿಕೆಗೆ ಕ್ರಮವಹಿಸಲು ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನುಮತಿ ನೀಡಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಪ್ರಕಟಣೆ ಹೊರಡಿಸಿದೆ.

ರಾಜ್ಯದ ಜನತೆ ಒಂದೆಡೆ ಆರ್ಥಿಕ ಬಿಕ್ಕಟ್ಟು ಮತ್ತು ಇನ್ನೊಂದೆಡೆ ಕೋವಿಡ್ ಭೀತಿ ಮತ್ತು ಲಾಕ್‌ಡೌನ್‌ಗಳ ನಿರುದ್ಯೋಗದ ತೀವ್ರ ಸಂಕಷ್ಟವನ್ನು ಎದುರಿಸುತ್ತಿರುವಾಗ, ಕೇಂದ್ರ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ವ್ಯಾಪಕವಾಗಿ ಏರಿಸಿ ಗಾಯದ ಮೇಲೆ ಬರೆ ಎಳೆದರೇ, ಈಗ ತಮ್ಮ ಸರಕಾರ ವಿದ್ಯುತ್ ಬೆಲೆ ಏರಿಕೆಗೆ ಕ್ರಮ ವಹಿಸುವ ಮೂಲಕ ನಾನೇನು ಕಡಿಮೆ ಇಲ್ಲವೆಂಬಂತೆ ಮತ್ತೊಂದು ಬರೆ ಎಳೆಯಲು ಮುಂದಾಗಿದೆ. ಈ ದುರ್ನಡೆಯನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ. ಕೂಡಲೇ ವಿದ್ಯುತ್ ಬೆಲೆ ಏರಿಕೆಯ ಎಲ್ಲಾ ಕ್ರಮಗಳನ್ನು ತಡೆಯುವಂತೆ ಒತ್ತಾಯಿಸಿದೆ.

ಸರಾಸರಿ ತಲಾ ಯುನಿಟ್ ಗೆ, ವಿವಿಧ ಹಂತದ ಪ್ರಮಾಣಗಳಲ್ಲೂ ಈಗಿನ ಧರಕ್ಕೆ ತಲಾ ಹತ್ತು ಪೈಸೆಗಳಷ್ಟು ಹೆಚ್ಚಿಸಿದೆ ಮತ್ತು ನಿಗಧಿತ ಶುಲ್ಕಕ್ಕೆ 10 ರೂಗಳಷ್ಟು ಹೆಚ್ಚಳ ಮಾಡಿದೆ. ಮಾತ್ರವಲ್ಲಾ, ಕ್ರಮೇಣ ಮುಂದಿನ ವರ್ಷ ವರ್ಷವೂ ಅದರ ಹೆಚ್ಚಳಕ್ಕೆ ಕ್ರಮವಹಿಸಲಾಗುವುದೆಂಬ ಇಂಗಿತವನ್ನು ವ್ಯಕ್ತಪಡಿಸಿದೆ. ಇವುಗಳಲ್ಲದೇ, ಈ ಹೆಚ್ಚುವರಿ ಬೆಲೆಗೆ ಗ್ರಾಹಕರು ಸೇವಾ ತೆರಿಗೆಯನ್ನು ನೀಡಬೇಕಾಗಿದೆ. ಒಟ್ಟಾರೇ ಶೇ 3.5 ಬೆಲೆ ಏರಿಕೆಗೆ ಕ್ರಮವಹಿಸಲಾಗಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಮೂರು ಬಾರಿ ಬೆಲೆ ಏರಿಕೆಗೆ ಕ್ರಮವಹಿಸಿರುವುದು ಕಳವಳಕಾರಿಯಾಗಿದೆ.

ಈಗಿನ ಬೆಲೆ ಏರಿಕೆಯು ಏಪ್ರಿಲ್ ಒಂದರಿಂದಲೇ ಜಾರಿಗೆ ಬರುವಂತೆ ಕ್ರಮವಹಿಸಲಾಗಿರುವುದರಿಂದ ಜನತೆ ಏಪ್ರಿಲ್ ಒಂದರಿಂದಲೇ ಹೆಚ್ಚುವರಿ ಬೆಲೆಯ ಬಾಕಿ ಹಣವನ್ನು ಇನ್ನು ಮುಂದಿನ ದಿನಗಳಲ್ಲಿ ನೀಡಬೇಕಾಗಿದೆ.

ಇದು ಜನತೆಯ ಮೇಲೆ ಹೇರಲಾದ ನೇರವಾದ ಮತ್ತೊಂದು ದೊಡ್ಡ ಹೊರೆ ಮಾತ್ರವೇ ಆಗಿಲ್ಲ, ಬದಲಿಗೆ, ಇದು, ಈ ಕೂಡಲೇ ಎಲ್ಲ ಉತ್ಪನ್ನಗಳ ಮತ್ತು ಅಗತ್ಯ ವಸ್ತುಗಳ ಮತ್ತಷ್ಟು ಬೆಲೆ ಏರಿಕೆಯ ಹೊರೆಯಾಗಲಿದೆ.

ಆರ್ಥಿಕ ಸಂಕಷ್ಠದಲ್ಲಿರುವ ಕೈಗಾರಿಕೆಗಳ ಮೇಲೆ ಇದು ಗಧಾ ಪ್ರಹಾರ ಮಾಡಲಿದೆ. ಅವುಗಳು ಬೇಗನೇ ಮುಚ್ಚುವಂತೆ ಮತ್ತು ಅಲ್ಲಿನ ಕಾರ್ಮಿಕರು ಹಾಗೂ ಕೈಗಾರಿಕಾ ಮಾಲೀಕರನ್ನು ಬೀದಿಪಾಲು ಮಾಡಲಿದೆ.

ಪುಟ 5 ಕ್ಕೆ

ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರ ಕಛೇರಿಗಳ ಮುಂದೆ ಪ್ರತಿಭಟನೆಗೆ–ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಕರೆ

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನ ವಿರೋಧಿ ನೀತಿಗಳನ್ನು ವಿರೋಧಿಸಿ ಹಾಗೂ ಕೋವಿಡ್–19 ರ ನಿವಾರಣೆಗೆ ಅಗತ್ಯ ಕ್ರಮ ವಹಿಸದೇ ಇರುವ ಕೊಲೆಪಾತಕ ನಿರ್ಲಕ್ಷ್ಯವನ್ನು ಖಂಡಿಸಿ, ಕೋವಿಡ್ ಹಾಗೂ ಲಾಕ್ ಡೌನ್ ಗಳಿಗೆ ಪರಿಣಾಮಕಾರಿ ಪರಿಹಾರಕ್ಕಾಗಿ ಒತ್ತಾಯಿಸಿ, ಮುಂಬರುವ 15.06.2021 ರಂದು ಮುಖ್ಯಮಂತ್ರಿ ಹಾಗೂ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರ ಮತ್ತು ಶಾಸಕರ ಕಛೇರಿಗಳ ಮುಂದೆ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳು ಜಂಟಿ ಪ್ರತಿಭಟನೆಯನ್ನು ನಡೆಸಲಿವೆ. ತುರ್ತು ಪರಿಹಾರದ ಕ್ರಮ ವಹಿಸಲು ಒತ್ತಾಯಿಸಿವೆ.

ಮೇ 28, 2021 ರಂದು ಆನ್ ಲೈನ್ ಪ್ರತಿಭಟನಾ ಬಹಿರಂಗ ಸಭೆ ಮೂಲಕ ಮತ್ತು ಜೂನ್ 01 ರಂದು ರಾಜ್ಯದಾದ್ಯಂತ ಸಹಸ್ರಾರು ಜನತೆ ಮನೆ ಮನೆ ಮುಂದೆ ಪ್ರತಿಭಟನೆಗಳನ್ನು ನಡೆಸಿವೆ.

ಆದಾಗಲೂ ಜನರ ಹಕ್ಕುಗಳನ್ನು ಸರಕಾರಗಳು ಗಂಭೀರವಾಗಿ ಪರಿಗಣಿಸದೇ ಹೋದುದರಿಂದ ಈ ಪ್ರತಿಭಟನೆಯನ್ನು ಕೋವಿಡ್ ಸುರಕ್ಷತೆಯೊಂದಿಗೆ ಹಮ್ಮಿಕೊಂಡಿವೆ.

ತಜ್ಞರ ಸೂಚನೆಯಂತೆ ಸರಕಾರಗಳು,ಮುನ್ನೆಚ್ಚರಿಕೆ ಕೈಗೊ ಳ್ಳದೇ, ಪಾತಕ ನಿರ್ಲಕ್ಷ್ಯ ವಹಿಸಿದ್ದರಿಂದ, ಕೋವಿಡ್ – 19 ರ ಎರಡನೇ ಅಲೆಯ ಬಾಧೆಗೆ ರಾಜ್ಯವು ತುತ್ತಾಯಿತು. ಈ ದುಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳಲು ವಿವೇಚನಾ ರಹಿತವಾಗಿ ಮೇಲಿಂದ, ಮೇಲೆ ಲಾಕ್ ಡೌನ್ ಗಳನ್ನು ಹೇರಲಾಯಿತು.

ಇದಲ್ಲದೇ, ಜನರ ಮೇಲೆ ಬೆಲೆ ಏರಿಕೆಯ ಹೊರೆಯನ್ನು ಹೇರಲಾಗುತ್ತಿದೆ ಮತ್ತು ಕೃಷಿ ಭೂಮಿ ಹಾಗೂ ಎಲ್ಲರ ಕಸುಬುಗಳನ್ನು, ಕಸಿಯುವ ಮತ್ತು ಕಾರ್ಮಿಕರನ್ನು ಹಾಗೂ ಗ್ರಾಹಕ ಸಮುದಾಯಗಳನ್ನು ಲೂಟಿಗೊಳಪಡಿಸಲು, ಕಾರ್ಪೋರೇಟ್ ಕಾಯ್ದೆಗಳನ್ನು ಮತ್ತು ವಿದ್ಯುತ್, ಸಾರಿಗೆ, ಹಣಕಾಸು ಮುಂತಾದ ಸಾರ್ವಜನಿಕ ಉದ್ದಿಮೆಗಳನ್ನು ಕಾರ್ಪೋರೇಟ್ ಲೂಟಿಗೆ ತೆರೆದಿವೆ.

ಜನರ ಈ ಗಂಭೀರ ದುಸ್ಥಿತಿಯ ಸಂದರ್ಭದಲ್ಲಿಯೇ, ವಿರೋಧದ ನಡುವೆ ಅವುಗಳ ಜಾರಿಯ ಕ್ರೌರ್ಯವನ್ನು ಮೆರೆಯುತ್ತಿವೆ.

ಇವುಗಳ ಜೊತೆ, ಬಿಜೆಪಿಯ ಕೆಲ ಶಾಸಕರು, ಸಂಘಪರಿವಾರದ ಶಕ್ತಿಗಳು, ಬೆಡ್, ಔಷಧಿ, ಲಸಿಕೆ, ಆಮ್ಲಜನಕಗಳ ಕಾಳಸಂತೆಯಲ್ಲಿ ತೊಡಗಿವೆ ಮತ್ತು ಜಾತಿ ಹಾಗೂ ರಾಜಕೀಯ ತಾರತಮ್ಯ ಎಸಗುತ್ತಿವೆ.

ಜನರ ಪ್ರಾಣ ಹಾಗೂ ಆರೋಗ್ಯಕ್ಕಿಂತಲೂ, ಕಾರ್ಪೋರೇಟ್ ಲೂಟಿಯೇ ಈ ಸರಕಾರಗಳಿಗೆ ಮುಖ್ಯವಾಗಿದೆ.

ಈ ಎಲ್ಲ ದುಷ್ಪರಿಣಾಮಗಳನ್ನು ರಾಜ್ಯದ ದುಡಿಯುವ ಜನರು ವರ್ತಕರು ಹಾಗೂ ಕೈಗಾರಿಕೆಗಳು, ಅಸಹಾಯಕರು, ದಲಿತರು, ಆದಿವಾಸಿಗಳು,ಮಹಿಳೆಯರು, ತೀವ್ರವಾಗಿ ಅನುಭವಿಸುತ್ತಿದ್ದಾರೆ.

ಇಂತಹ ಕೊಲೆಪಾತಕ ದುಸ್ಥಿತಿಗಳಿಗೆ ಕಾರಣವಾದ ಸರಕಾರಗಳೇ ಜನತೆಗೆ ಪರಿಹಾರ ನೀಡಬೇಕಾಗಿದೆ.

ಜನರ ಒತ್ತಡಕ್ಕೆ ಮಣಿದು, ಒಲ್ಲದ ಮನಸ್ಸಿನಿಂದ ಅಗ್ಗದ ಪ್ರಚಾರ ಪಡೆಯಲು ಕೇವಲ 1,423 ಕೋಟಿ ರೂಗಳ ಪರಿಹಾರದ ಎರಡು ಪ್ಯಾಕೇಜ್ ಗಳೆಂಬ ಅಣಕಗಳನ್ನು ಘೋಷಿಸಲಾಗಿದೆ. ಇವುಗಳು ಯಾವುದೇ ರೀತಿಯಲ್ಲೂ ಜನತೆಯ ಕೋವಿಡ್ ಮತ್ತಿತರೇ ಭಾರೀ ಸಂಕಷ್ಟಕ್ಕೆ ಪರಿಹಾರಗಳಾಗಿಲ್ಲ ಎಂದು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಬಲವಾಗಿ ಖಂಡಿಸಿವೆ.

ಜನತೆಯ ಒತ್ತಾಯ ಹಾಗೂ ಸುಪ್ರಿಂ ಕೋರ್ಟ ಮದ್ಯಪ್ರವೇಶಕ್ಕೆ ಮಣಿದು 18 ವರ್ಷಕ್ಕೆ ಮೇಲಿನವರಿಗೆ ಉಚಿತ ಲಸಿಕೆ ನೀಡುವುದಾಗಿ ಕೇಂದ್ರ ಸರಕಾರ ಹೇಳಿರುವುದು ದೇಶದ ಜನತೆಯ ಹೋರಾಟಕ್ಕೆ ದೊರೆತ ಜಯವಾಗಿದೆ. ಆದರೇ, ಲಾಕ್ ಡೌನ್ ಪರಿಹಾರವಾಗಿ ಕೇಂದ್ರ ಸರಕಾರ ನೀಡಿರುವುದು ಕೇವಲ 10 ಇರ ಮುಗ್ಗುಲು ಅಕ್ಕಿ ಮಾತ್ರವೇ? ಇತರ ಪರಿಹಾರದ ಘೋಷಣೆ ಮಾಡಲಿಲ್ಲ.ರಾಜ್ಯ ಸರಕಾರ ಬಡವರಿಗೆ ನೀಡುವ ಅಕ್ಕಿಯ ಕಡಿತವನ್ನು ಹಿಂಪಡೆದಿಲ್ಲ. ಹೊಲಗಳಲ್ಲಿ ಕೊಳೆಯಲು ಬಿಟ್ಟ ಉತ್ಪನ್ನಗಳಿಗೆ ಸೂಕ್ತ ಪರಿಹಾರ ಈಗಲೂ ನೀಡಿಲ್ಲ. ಕೂಲಿಕಾರರು, ರೈತರು, ಕಸುಬುದಾರರು, ಕಾರ್ಮಿಕರು, ವಿದ್ಯಾವಂತ ನಿರುದ್ಯೋಗಿಗಳಿಗೆ ನೆರವಿಲ್ಲ.

ಎಂದಿನಂತೆ, ವಿದ್ಯಾರ್ಥಿಗಳಿಗೆ ನೀಡುವ ಹಾಲು ಪುಡಿಯ 100 ಕೋಟಿ ರೂಗಳನ್ನು 2ನೇ ಪ್ಯಾಕೇಜ್ ನಲ್ಲಿ ಸೇರಿಸಿರುವುದನ್ನು ನೋಡಿದರೇ, ಸರಕಾರದ ಖಾಳಜಿ ಎಂತಹ ಕಳಪೆ ಮಟ್ಟದ್ದೆಂಬುದು ತಿಳಿಯುತ್ತದೆ. ಜೀವದ ಹಂಗು ತೊರೆದು ಕಾರ್ಯ ನಿರ್ವಹಿಸುವ ಆಶಾ, ಅಂಗನವಾಡಿಯವರಿಗೆ ಕೊಡಲಾಗುವ ಪರಿಹಾರ ನಾಚಿಕೆಗೇಡಿನದಾಗಿದೆ.

ಇಡೀ ರಾಜ್ಯದ 6.8 ಕೋಟಿ ಜನತೆ ಕೋವಿಡ್ ಸಂಕಟದಲ್ಲಿದ್ದರೇ ರಾಜ್ಯ ಸರಕಾರ ಕೇವಲ 5 ಲಕ್ಷ ಜನರಿಗೆ ಮಾತ್ರವೇ ಪರಿಹಾರ ಘೋಷಿಸಿದೆ. ಕುಟುಂಬಕ್ಕೊಬ್ಬರಿಗೆಂಬ ಸರಕಾರದ ನೀತಿಯಿಂದ ಬಹುತೇಕರು ಬೇಸ್ತು ಬೀಳಲಿದ್ದಾರೆ. ಈ ಅಣಕದ ಪರಿಹಾರವಾದರೂ ಬೇಗನೆ ಜನತೆಗೆ ಸಿಗಬಲ್ಲದೇ?

ಜನರ ಪ್ರಾಣಗಳ ಜೊತೆ ಆಟವಾಡುವುದನ್ನು ನಿಲ್ಲಿಸಿ, ಕೇರಳ, ತಮಿಳ್ನಾಡು, ಆಂದ್ರ ರಾಜ್ಯಗಳಂತೆ ಪರಿಹಾರಗಳನ್ನು ನೀಡಿ ಜನರನ್ನು ರಕ್ಷಿಸಲು ಮರಳಿ ನಾವು ಒತ್ತಾಯಿಸಿವೆ.

ಹಕ್ಕೊತ್ತಾಯಗಳು:

1) ಉಚಿತ ಹಾಗೂ ಸಾರ್ವತ್ರಿಕ ಲಸಿಕೀಕರಣಕ್ಕೆ ಕೂಡಲೇ ಕ್ರಮವಹಿಸಬೇಕು. ಬೆಡ್, ಲಸಿಕೆ, ಔಷದಿ, ಆಮ್ಲಜನಕಗಳ ಹಗರಣಗಳು, ಜಾತಿ ಹಾಗೂ ರಾಜಕೀಯ ತಾರತಮ್ಯದ ಪ್ರಕರಣಗಳನ್ನು ಸ್ವತಂತ್ರ ಉನ್ನತ ನ್ಯಾಯಾಂಗ ತನಿಖೆಗೊಳಪಡಿಸಬೇಕು.
2) ಆದಾಯ ತೆರಿಗೆಯಡಿ ಬಾರದ ಎಲ್ಲಾ ಕುಟುಂಬಗಳಿಗೆ ಮಾಸಿಕ ತಲಾ 10 ಕೇಜಿ ಸಮಗ್ರ ಆಹಾರಧಾನ್ಯ ಮತ್ತು ಆರೋಗ್ಯ ಸುರಕ್ಷತಾ ಸಾಮಗ್ರಿಗಳ ಪೊಟ್ಟಣವನ್ನು ಮತ್ತು ಕೇಂದ್ರ ಸರಕಾರದ ಸಹಾಯ ಪಡೆದು 10,000 ರೂಗಳ ನೆರವನ್ನು ಕೋವಿಡ್ ನಿಯಂತ್ರಣಕ್ಕೆ ಬರುವವರೆಗೆ ನೀಡಬೇಕು. ದಲಿತರು, ಬಡವರ ಪ್ರದೇಶಗಳಲ್ಲಿ ಇಂದಿರಾ ಕ್ಯಾಂಟೀನ್ ಗಳನ್ನು ವಿಸ್ತರಿಸಬೇಕು, ಬಲಗೊಳಿಸಬೇಕು.
3) ಹೊಲಗಳಲ್ಲಿಯೇ ಕೊಳೆತು ಹೋದ ಹೂ, ಹಣ್ಣು, ಆಲುಗಡ್ಡೆ, ಈರುಳ್ಳಿ ಮುಂತಾದ ಬೆಳೆಗಳಿಗೆ, ಎಕರೆಗೆ ಕನಿಷ್ಠ 25,000 ರೂಗಳನ್ನು ಒದಗಿಸಬೇಕು ಮತ್ತು ರಾಜ್ಯದ ರೈತರು, ಕೂಲಿಕಾರರು, ಕಾರ್ಮಿಕರು, ಕಸುಬುದಾರರು, ದಲಿತರು, ಆದಿವಾಸಿಗಳು, ಅಲ್ಪ ಸಂಖ್ಯಾತರು ಮತ್ತು ಮಹಿಳೆಯರ ಎಲ್ಲ ರೀತಿಯ ಸಾಲಗಳನ್ನು ಕೇರಳದ ಋಣ ಮುಕ್ತ ಕಾಯ್ದೆ ಮಾದರಿಯಲ್ಲಿ ಮನ್ನಾ ಮಾಡಬೇಕು.
4) ಕೇಂದ್ರ ಸರಕಾರ ಜಾರಿಗೊಳಿಸುವ ಕಾರ್ಪೋರೇಟ್ ಕಂಪನಿಗಳ ಪರವಾದ ರೈತ ಹಾಗೂ ಕಾರ್ಮಿಕರ ಮತ್ತು ಗ್ರಾಹಕರ ವಿರೋಧಿಗಳಾದ ತಿದ್ದುಪಡಿ ಕೃಷಿ ಕಾಯ್ದೆಗಳು ಹಾಗೂ ಕಾರ್ಮಿಕ ಸಂಹಿತೆಗಳು, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ – 2020, ವಿದ್ಯುತ್ ತಿದ್ದುಪಡಿ ಮಸೂದೆ– 2020 ಹಾಗೂ ರಾಜ್ಯ ಸರಕಾರದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ – 2020, ಎಪಿಎಂಸಿ ತಿದ್ದುಪಡಿ ಕಾಯ್ದೆ – 2020, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ಗಳನ್ನು ತಕ್ಷಣ ಹಿಂಪಡೆಯಬೇಕು. ಸಾರ್ವಜನಕ ರಂಗದ ಉದ್ದಿಮೆಗಳ ಖಾಸಗೀಕರಣವನ್ನು ತಡೆಯಬೇಕು.
5) ಕನಿಷ್ಟ ಬೆಂಬಲ ಬೆಲೆ ಖಾತರಿಯ ಕಾಯ್ದೆ ಮತ್ತು ಪ್ರಕೃತಿ ವಿಕೋಪಗಳಿಂದ ರೈತರ ಸಂರಕ್ಷಣೆಗೆ ಋಣ ಮುಕ್ತ ಕಾಯ್ದೆ ಗಳನ್ನು ಜಾರಿಗೊಳಿಸಬೇಕು.
6) ಕಾರ್ಮಿಕರಿಗೆ ಲಾಕ್ ಡೌನ್ ಕಾಲಾವಧಿಯ ವೇತನ ಮತ್ತು ಉದ್ಯೋಗ ರಕ್ಷಿಸಲು ಅಗತ್ಯ ಆದೇಶ ಹೊರಡಿಸಿ ಜಾರಿಗೊಳಿಸಬೇಕು
7) ಉದ್ಯೋಗ ಖಾತ್ರಿಯನ್ನು ನಗರಗಳಿಗೆ ಹಾಗೂ 200 ದಿನಗಳಿಗೆ ವಿಸ್ತರಿಸಬೇಕು. ಕೂಲಿಯನ್ನು ಕೃಷಿ ರಂಗದ ವೇತನದಂತೆ 424 ರೂ. ಗಳಿಗೆ ಹೆಚ್ಚಿಸಬೇಕು.
8) ಕೋವಿಡ್ ಮುಂಚೂಣಿಯ ಎಲ್ಲಾ ಕಾರ್ಯಕರ್ತರಿಗೆ ವಿಮೆ ಸೌಲಭ್ಯ– ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಮಸಣ ಕೆಲಸಗಾರರು, ಮುನಿಸಿಪಲ್ ಮುಂತಾದ ಶುಚಿ ಕಾರ್ಯದಲ್ಲಿ ತೊಡಗಿದವರಿಗೂ ಸೌಲಭ್ಯಗಳನ್ನು ವಿಸ್ತರಿಸಬೇಕು.

ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಆದಿವಾಸಿ ಸಮುದಾಯಗಳ ರಕ್ಷಣೆ ಮತ್ತು ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ತುರ್ತು ಗಮನ ನೀಡಲು ಒತ್ತಾಯ

ದೇಶ ಮತ್ತು ರಾಜ್ಯದ ಜನತೆ ಕೋವಿಡ್–19 ಸೋಂಕಿನ ಮಹಾ ಪಿಡುಗಿನಿಂದ ತತ್ತರಿಸುತ್ತಿದ್ದಾರೆ. ವಿಶೇಷವಾಗಿ ಬಹುತೇಕ ಎಲ್ಲಾ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿ ಬಡತನದ ರೇಖೆಗಿಂತಲೂ ಕೆಳ ಮಟ್ಟದಲ್ಲಿ ಜೀವಿಸುತ್ತಿರುವ ನಮ್ಮ ನಾಡಿನ ಆದಿವಾಸಿ–ಬುಡಕಟ್ಟು ಸಮುದಾಯಗಳು ಜೀವ ಮತ್ತು ಜೀವನ ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ. ಅತ್ಯಂತ ಸೂಕ್ಷ್ಮ, ಪಾರಂಪಾರಿಕವಾದ ವೈಶಿಷ್ಟ್ಯಗಳನ್ನು ಹೊಂದಿರುವ ಸಮುದಾಯಗಳಾಗಿವೆ. ಕೋವಿಡ್ ಸಾಂಕ್ರಾಮಿಕ ಧಾಳಿಯಲ್ಲಿ, ಅಪೌಷ್ಠಿಕತೆ, ಅನಾರೋಗ್ಯ, ಅನಕ್ಷರತೆ, ಮೌಢ್ಯತೆ, ಅಸ್ತಿತ್ವದ ಮೇಲಿನ ಸ್ಥಾಪಿತ ಹಿತಾಸಕ್ತಿಗಳ ಹೊಡೆತಗಳಿಂದ ಜರ್ಝರಿತಗೊಂಡಿರುವ ಈ ಸಮುದಾಯಗಳನ್ನು ಯಾವುದೇ ಸೂಕ್ತ ಸಿದ್ಧತೆ, ಪರಿಹಾರದ ಕ್ರಮಗಳಿಲ್ಲದ ಅರೆ–ಬರೆ ಲಾಕ್‌ಡೌನ್ ಹೇರಿಕೆಯಲ್ಲಿ ಸರಕಾರವೂ ನಿರ್ಲಕ್ಷಿಸಿರುವುದು ಅತ್ಯಂತ ಖೇದಕರ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದೆ.

ಭೂ ಹೀನರಾಗಿರುವ ಇವರಿಗೆ ಈ ಲಾಕ್‌ಡೌನ್ ಸಮಯದಲ್ಲಿ ಯಾವುದೇ ಕೂಲಿ ಕೆಲಸಗಳು ಸಿಗದೇ ಅನ್ನಾಹಾರಕ್ಕೂ ತತ್ವಾರವಾಗಿ ಗೆಡ್ಡೆ, ಗೆಣಸುಗಳನ್ನು ಹುಡುಕಿಕೊಂಡು ಹೊರಟಿರುವ ಸಂಗತಿಗಳು ಅನೇಕ ಕಡೆಗಳಿಂದ ವರದಿಯಾಗಿವೆ. ಆದಿವಾಸಿ ಸಮುದಾಯಗಳು ಕನಿಷ್ಠ ಚಿಕಿತ್ಸೆಯನ್ನು ಪಡೆಯಲು 40–50ಕಿ.ಮೀ ಪ್ರಯಾಣ ಮಾಡಬೇಕಿದೆ. ಲಾಕ್‌ಡೌನ್‌ನಿಂದಾಗಿ ಯಾವುದೇ ವಾಹನಗಳ ಸಂಚಾರವೂ ಇಲ್ಲವಾಗಿ ಸಾವು–ಬದುಕಿನ ಹೋರಾಟ ನಡೆಸಬೇಕಿದೆ. ಅವರಿಗೆ ಅಗತ್ಯವಿರುವ ಲಸಿಕೆಗಳನ್ನು ನೀಡಲಾಗುತ್ತಿಲ್ಲ. ಸಾಂಪ್ರದಾಯಿಕ ತಿಳಿವು, 'ನಾಗರೀಕ' ಜಗತ್ತಿನ ಹೊಸ ವಿಷಯ, ವಂಚನೆಗಳ ಬಗೆಗೆ ಭೀತಿ ಹೊಂದಿರುವ ಈ ಸಮುದಾಯಗಳಲ್ಲಿನ ಅನುಮಾನಗಳನ್ನು, ತಪ್ಪು ತಿಳುವಳಿಕೆಗಳನ್ನು ಸೋಂಕಿನ ಬಗ್ಗೆ ಸೂಕ್ತ ಜಾಗ್ರತಿ ಮೂಡಿಸಲಾಗುತ್ತಿಲ್ಲ. ಈ ಶತಮಾನದಲ್ಲೇ ಅತ್ಯಂತ ಸಂಕಷ್ಟಕರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಉದ್ಭವಿಸಿರುವ ಸಂಕಟ, ಸಮಸ್ಯೆಗಳನ್ನು ಸರಕಾರ, ಆಡಳಿತ ಗಂಭೀರವಾಗಿ ಪರಿಗಣಿಸಿ ತುರ್ತು ಪರಿಹಾರಗಳನ್ನು ನೀಡಬೇಕೆಂದು, ವಿಳಂಬಿಸದೇ ಗಮನ ಹರಿಸಬೇಕೆಂದು ಇಂದು ರಾಜ್ಯದಾದ್ಯಂತ 'ಆದಿವಾಸಿಗಳ ಜೀವ ಮತ್ತು ಜೀವನವನ್ನು ಉಳಿಸಿ' ಎನ್ನುವ ಪ್ರಮುಖ ಘೋಷಣೆಯಾಧಾರದಲ್ಲಿ ನಡೆಸಲಾಗುತ್ತಿರುವ 'ಪಾರಂಪಾರಿಕ ವಾದ್ಯಗಳ ವಾದನ ಮತ್ತು ಖಾಲೀ ತಟ್ಟೆಗಳ ಪ್ರದರ್ಶನ' ನಡೆಸಿ, ಕೋವಿಡ್ ನಿಯಮಗಳನ್ನು ಪಾಲಿಸಿ ಮನೆ, ಮನೆಗಳ ಮುಂದೆ ಆಗ್ರಹದ ಪ್ರತಿಭಟನೆ ಮೂಲಕ ಈ ಮನವಿಯನ್ನು ಸೂಕ್ತ, ತುರ್ತು ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿದೆ.

ಪ್ರಮುಖ ಬೇಡಿಕೆಗಳು:

1. ಆದಿವಾಸಿಗಳಿಗೆ, ಅಲೆಮಾರಿ ಸಮುದಾಯಗಳಿಗೆ ಉಚಿತ ಪೌಷ್ಟಿಕ ಆಹಾರ ಮತ್ತು ಜೀವನಾವಶ್ಯಕ ಎಲ್ಲಾ ವಸ್ತುಗಳಿರುವ ರೇಷನ್, ಅಗತ್ಯ ದಿನಸಿ ಕಿಟ್‌ಗಳನ್ನು ಅವರು ನೆಲೆಸಿರುವ ಹಾಡಿ, ಪ್ರದೇಶಗಳಿಗೆ ಕೂಡಲೇ ನೀಡುವುದು.
2. ಎಲ್ಲಾ ಆದಿವಾಸಿಗಳಿಗೆ, ಅಲೆಮಾರಿ ಸಮುದಾಯಗಳಿಗೆ ಸಾರ್ವತ್ರಿಕ, ಉಚಿತವಾದ ಕೋವಿಡ್ ಲಸಿಕೆಯನ್ನು ನೀಡಬೇಕು.
3. ಆದಿವಾಸಿಗಳು ವಾಸಿಸುವ ಪ್ರದೇಶದ ವ್ಯಾಪ್ತಿಯಲ್ಲಿ (ಕನಿಷ್ಠ 5 ಕಿ.ಮೀ.ಒಳಗೆ) 'ಕೋವಿಡ್ ಚಿಕಿತ್ಸಾ ಕೇಂದ್ರ' ವನ್ನು ಕೂಡಲೇ ಸ್ಥಾಪಿಸಿ ಅಗತ್ಯವಿರುವ ವೈದ್ಯರು, ನರ್ಸ್‌ಗಳು ಮುಂತಾದ ಸಿಬ್ಬಂದಿಯನ್ನು ನೇಮಿಸಿ ಕಾರ್ಯಾರಂಭಿಸಬೇಕು.
4. ಆದಿವಾಸಿಗಳು ಕೆಲಸವಿಲ್ಲದೇ ಖಾಲಿ ಕುಳಿತಿದ್ದಾರೆ. ಪ್ರತಿ ಆದಿವಾಸಿ ಕುಟುಂಬಕ್ಕೆ ಪ್ರತಿ ತಿಂಗಳೂ ರೂ.10,000 ಗಳನ್ನು ಸಹಾಯ ಧನವನ್ನಾಗಿ ನೀಡಬೇಕು. ವಿಶೇಷವಾಗಿ, ನಿರುದ್ಯೋಗಿ ಯುವಜನರಿಗೆ ನಿರುದ್ಯೋಗ ಭತ್ಯೆಯನ್ನು ನೀಡಬೇಕು.
5. ಪರಿಶಿಷ್ಟ ಜಾತಿ ಮತ್ತು ಪ.ಪಂಗಡಗಳ ವಿದ್ಯಾರ್ಥಿಗಳಿಗೆ ನೀಡಬೇಕಾಗಿರುವ ವಿದ್ಯಾರ್ಥಿ ವೇತನ ಕೂಡಲೇ ನೀಡುವುದು. ಆದಿವಾಸಿ ಮಕ್ಕಳ ಶಿಕ್ಷಣದ ಪ್ರಕ್ರಿಯೆ ದುರ್ಬಲವಾಗದಂತೆ ಕ್ರಮ ವಹಿಸಬೇಕು.
6. ಅರಣ್ಯದಲ್ಲಿನ ಕಿರು ಉತ್ಪನ್ನಗಳ ಸಂಗ್ರಹದ ಮೂಲಭೂತ ಅರಣ್ಯ–ಸಮುದಾಯದ ಹಕ್ಕಿಗೆ ಮುಕ್ತ ಅವಕಾಶವನ್ನು ಕಲ್ಪಿಸಬೇಕು. ಆ ವಸ್ತುಗಳಿಗೆ ಸೂಕ್ತ ಲಾಭದಾಯಕ ಬೆಲೆಯನ್ನು ನೀಡಿ ಸರಕಾರವೇ ಖರೀದಿಸಬೇಕು.
7. ಆದಿವಾಸಿಗಳ ಸಂರಕ್ಷಣೆಗೆ ಸರಕಾರ ವಿಶೇಷವಾದ ಅನುದಾನ ಹಣವನ್ನು ನೀಡಬೇಕು. ಅಲ್ಲದೇ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ.ಯೋಜನೆಯ ಅಡಿಯಲ್ಲಿರುವ ರೂ.26,005 ಕೋಟಿ ರೂ.ಗಳ ಹಣದಲ್ಲಿ ಒಂದು ಭಾಗವನ್ನು ತುತಾಗಿ ದಲಿತರು ಮತ್ತು ಆದಿವಾಸಿಗಳಿಗೆ, ಮೇಲೆ ಕಾಣಿಸಿದ ಬೇಡಿಕೆಗಳ ಇತ್ಯರ್ಥಕ್ಕೆ ಬಳಸಬಹುದು.
8. ಪರಿಸ್ಥಿತಿಯು ಗಂಭೀರ ಇರುವ ಹಿನ್ನೆಲೆಯಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು.



ದರ ಏರಿಕೆಯ ಶಾಕ್ ಮೇಲೆ ಶಾಕ್! ರಾಜ್ಯ ಸರಕಾರದಿಂದ ಕರೆಂಟ್ ಶಾಕ್

ಗುರುರಾಜ ದೇಸಾಯಿ

ರಾಜ್ಯದ ವಿವಿಧ ವಿದ್ಯುತ್ ವಿತರಣಾ ಕಂಪನಿಗಳು 1 ರೂ 35 ಪೈಸೆಯಷ್ಟು ವಿದ್ಯುತ್ ದರ ಹೆಚ್ಚಳ ಮಾಡಬೇಕು ಹಿಂದೆಯೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದವು. ಈ ಪ್ರಸ್ತಾವಗಳನ್ನು ಕೂಲಂಕಶವಾಗಿ ಪರಿಶೀಲಿಸಿರುವ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಸರಾಸರಿ 30 ಪೈಸೆ ದರ ಹೆಚ್ಚಳಕ್ಕೆ ಅನುಮೋದನೆ ನೀಡಿದೆ.ಇದರ ಪರಿಣಾಮ ಗೃಹ ಬಳಕೆ ಗ್ರಾಹಕರಿಗೆ ಪ್ರತಿ ಯೂನಿಟ್’ಗೆ 10 ಪೈಸೆ ಹೆಚ್ಚಳವಾಗಲಿದೆ.

ಗೃಹ ಬಳಕೆದಾರರಿಗೆ ಮೊದಲ ಸ್ಲ್ಯಾಬ್ ಪರಿಷ್ಕರಣೆ ಮಾಡಲಾಗಿದ್ದು 1ರಿಂದ 30 ಯೂನಿಟ್ ವರೆಗೆ ಇದ್ದ ಮಿತಿಯನ್ನು 50 ಯೂನಿಟ್ ವರೆಗೆ ವಿಸ್ತರಿಸಲಾಗಿದೆ. ಜೊತೆಗೆ ನಿಗದಿತ ಶುಲ್ಕವನ್ನೂ ಹೆಚ್ಚಳ ಮಾಡಿದ್ದು ಪ್ರತಿ ಕಿಲೋ ವ್ಯಾಟ್’ಗೆ ರೂ.10 ಗಳಂತೆ ಪರಿಷ್ಕರಣೆ ಮಾಡಲಾಗಿದೆ. ಆರಂಭದ ರಿಯಾಯತಿ ಯೂನಿಟ್ ಗಳನ್ನು ಲೈಫ್‌ಲೈನ್ ಯೂನಿಟ್ ಅಂತ ಹೇಳಲಾಗುತ್ತೆ. ಈಗ ಅದನ್ನು 1 ದಿಂದ 30 ಬದಲಾಗಿ 1 ರಿಂದ 50 ಕ್ಕೆ ಏರಿಸಲಾಗಿದೆ.

ಕೇವಲ ತಿಂಗಳಿಗೆ 50 ಯುನಿಟ್‌ಗಳನ್ನು ಬಳಸುವವರಿಗೆ ಮಾತ್ರ ಇದು ಲಾಭವಾಗುತ್ತೆ. ಉಳಿದವರಿಗೆ ಇದರಿಂದ ಯಾವುದೇ ಪ್ರಯೋಜನ ಸಿಗೋದಿಲ್ಲ, ಯಾಕೇ ಅಂದ್ರೆ ಸಾಮಾನ್ಯವಾಗಿ ದಿನಕ್ಕೆ ಕಡಿಮೆ ವಿದ್ಯುತ್ ಬಳಸುತ್ತೇವೆ ಅಂದ್ರೂ ದಿನಕ್ಕೆ ನಾಲ್ಕು ಯುನಿಟ್ ಆದ್ರೂ ನಾವು ಬಳಸ್ತೇವೆ. ದರ ಹೆಚ್ಚಳ ಮಾಡಿರುವುದು ಗೊತ್ತಾಗಭಾರ್ದು ಅಂತಾ ಮೊದಲ ಸ್ಲಾಬ್‌ನಲ್ಲಿ ರಿಯಾಯ್ತಿ ನೀಡಿ ಜನರನ್ನು ಮೂರ್ಖರನ್ನಾಗಿಸುವ ಕೆಲಸ ಮಾಡ್ತಾ ಇದೆ.

ಒಟ್ಟು ನಾಲ್ಕು ಸ್ಲ್ಯಾಬ್‌ಗಳಲ್ಲಿ ಮೀಟರ್ ರೀಡಿಂಗ್ ನಡೆಯುತ್ತೆ. 10 ಪೈಸೆ ದರ ಹೆಚ್ಚಳ ಆಗಿದ್ದರಿಂದ ಪ್ರತಿ ಸ್ಲ್ಯಾಬ್ ದರ ಎಷ್ಟಾಗುತ್ತೆ ಅಂತಾ ನಾವು ನೋಡೋಣ. 1 ರಿಂದ 50 ಯೂನಿಟ್ ಗೆ ಮುಂಚೆ ಇದ್ದ ದರ 4 ರೂ ಆದ್ರೆ, ದರ ಹೆಚ್ಚಳದಿಂದ 4 ರೂ 10 ಪೈಸೆ ಆಗಿದೆ. 50 ಕ್ಕೆ 4 ರೂ. 10 ಪೈಸೆ ಗೆ ಲೆಕ್ಕ ಹಾಕಿದ್ರೆ 205 ರೂ ಆಗುತ್ತೆ. 50 ರಿಂದ 100 ಯೂನಿಟ್ ನ ಎರಡನೇ ಸ್ಲ್ಯಾಬ್ ದರ ಮುಂಚೆ 5 ರೂ 45 ಪೈಸೆ ಇತ್ತು. ಈಗ ಅದು 5 ರೂ 55 ಪೈಸೆ ಆಗಿದೆ. 100ಕ್ಕೆ 5 ರೂ 55 ಪೈಸೆ ಲೆಕ್ಕ ಹಾಕಿದ್ರೆ 510 ರೂ ಆಗುತ್ತೆ. 101 ರಿಂದ 200 ರ ವರೆಗಿನ ಮೂರನೆ ಸ್ಲ್ಯಾಬ್ ಗೆ ಮುಂಚೆ 7 ರೂ ಕೊಡ್ತಾ ಇದ್ವಿ ಈಗ ಅದು 7 ರೂ 10 ಪೈಸೆ ಆಗಿದೆ. 100 ಕ್ಕೆ 7 ರೂ 10 ಪೈಸೆ ಲೆಕ್ಕ ಹಾಕಿದ್ರೆ 710 ರೂ ಆಗುತ್ತೆ. 200 ಯೂನಿಟ್ ಗಿಂತ ಹೆಚ್ಚಿಗೆ ಬಳಸಿದ್ರೆ ಈ ಹಿಂದೆ 8 ರೂ 5 ಪೈಸೆ ಕೊಡ್ತಾ ಇದ್ವಿ. ಈಗ 8 ರೂ 15 ಪೈಸೆ ಆಗಿದೆ. 100 ಕ್ಕೆ 8 ರೂ 15 ಪೈಸೆ ಗೆ ಲೆಕ್ಕ ಹಾಕಿದ್ರೆ 815 ರೂ ಆಗುತ್ತೆ. ಸಾಮಾನ್ಯವಾಗಿ ಬಹುತೇಕರು ಮೂರು ಸ್ಲ್ಯಾಬ್‌ವರೆಗೆ ವಿದ್ಯುತ್ ನ್ನು ಬಳಸುತ್ತಾರೆ.

ಯೂನಿಟ್	ಮೊದಲಿನ ದರ	ದರ ಹೆಚ್ಚಳ
1ರಿಂದ 50	4 ರೂ.	4.10 ರೂ.
50ರಿಂದ 100	5.45 ರೂ.	5.55 ರೂ.
101ರಿಂದ 200	7 ರೂ.	7.10 ರೂ.
200 ಯೂನಿಟ್‌ಗಿಂತ ಹೆಚ್ಚು	8.05 ರೂ.	8.15 ರೂ.

ಇನ್ನೂ ಫಿಕ್ಸ್ ಚಾರ್ಜ್ ಅಂತಾ 150 ರೂ ಕೊಡ್ತಾ ಇದ್ವಿ. ಅಂದ್ರೆ ಮಿನಿಮಮ್ ರ್ಜ್ ಅಂತಾ ಕೂಡಾ ನಾವು ಕರೀತೆವೆ. ಈಗ 10 ರೂ ಹೆಚ್ಚಳದೊಂದಿಗೆ ಅದು 160 ರೂ ಗೆ ಏರಿಕೆ ಯಾಗಿದೆ. ಸಾಮಾನ್ಯವಾಗಿ ನಮಗೆ 1000 ರೂ ಕರೆಂಟ್ ಇಲ್ಲ ಬರ್ತಾ ಇದ್ರೆ, ಈಗ ದರ ಹೆಚ್ಚಳದಿಂದ 35 ರೂ ನಿಂದ 45 ರೂ ಹೆಚ್ಚಳವಾಗಲಿದೆ. ಅಂದ್ರೆ 1035 ರೂ ಮತ್ತು ಇದಕ್ಕೆ 60 ರಿಂದ 65 ರೂ ಟ್ಯಾಕ್ಸ್ ಸೇರಿ ಒಟ್ಟು 1100 ರೂ ಹೆಚ್ಚಳವಾಗಲಿದೆ. ಗ್ರಾಮೀಣ ಪ್ರದೇಶಕ್ಕೆ ಲೆಕ್ಕ ಹಾಕಿದ್ರೆ 300 ರೂ ಬರ್ತಾ ಇದ್ದ ಕರೆಂಟ್ ಬಿಲ್ಲ, ಸರಕಾರ ಹೆಚ್ಚಿಸಿರುವ ದರದ ಪರಿಣಾಮ 400 ರೂ ಕರೆಂಟ್ ಬಿಲ್ಲ ಕಟ್ಟ ಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ರಾಜ್ಯದಲ್ಲಿ ದರ ಏರಿಕೆಯದೇ ಸದ್ದು. ಪೆಟ್ರೋಲ್, ಅಗತ್ಯ ವಸ್ತುಗಳು, ಅಡುಗೆ ಅನಿಲ ಹೀಗೆ ಜನಸಾಮಾನ್ಯರ ದಿನಬಳಕೆಯ ಅಗತ್ಯ ವಸ್ತುಗಳ ದರ ಏರುತ್ತಲೇ ಇದೆ. ಈಗ ಆ ಸಾಲಿಗೆ ವಿದ್ಯತ್ ದರ ಹೆಚ್ಚಳ ಸೇರಿ ಕೊಳ್ಳುತ್ತಿದೆ. ರಾಜ್ಯ ಸರಕಾರ ನೀಡುತ್ತಿರುವ ದರ ಏರಿಕೆಯ ಶಾಕ್ ಗೆ ಜನ ಸಾಮಾನ್ಯವರು ಬವಣೆ ಪಡೆವಂತಾಗಿದೆ.

ಐದು ತಿಂಗಳಲ್ಲಿ ಮೂರಿ ಬಾರಿ ವಿದ್ಯುತ್ ದರ ಏರಿಕೆಯಾಗಿದೆ. ನವೆಂಬರ್ ತಿಂಗಳಲ್ಲಿ ಪ್ರತೀ ಯೂನಿಟ್‌ಗೆ 40 ಪೈಸೆ ಹೆಚ್ಚಳ ಮಾಡಿದ್ರೆ, ಡಿಸೆಂಬರ್‌ನಲ್ಲಿ 8 ಪೈಸೆ ಹೆಚ್ಚಳ ಮಾಡಲಾಗಿತ್ತು. ಈಗ 10 ಪೈಸೆ ಹೆಚ್ಚಳ ಮಾಡಲಾಗಿದೆ. ವಿದ್ಯುತ್ ದರ ಹೆಚ್ಚಳ ಮಾಡಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದು, ಹೆಚ್ಚಳ ಮಾಡಿರುವ ದರವನ್ನು ವಾಪಸ್ಸ ಪಡೆಯುವಂತೆ ಆಗ್ರಹಿಸ್ತಾ ಇದ್ದಾರೆ. ಸರಕಾರದ ಈ ದರ ಏರಿಕೆ ಸಾಮಾನ್ಯ ಜನರ ಜೊತೆ ರೈತರಿಗೂ ಹೊರೆಯಾಗಲಿದೆ. ದರ ಏರಿಕೆಗೆ ಸರಕಾರದ ಖಾಸಗೀಕರಣ ನೀತಿಯೇ ಕಾರಣ ಅಂತ ಕರ್ನಾಟಕ ಪ್ರಾಂತರೈತ ಸಂಘದ ರಾಜ್ಯಾಧ್ಯಕ್ಷ ಜಿಸಿ ಬಯ್ಯಾರೆಡ್ಡಿ ಆರೋಪಿಸಿದ್ದಾರೆ.

ವಿದ್ಯುತ್ ದರ ಹೆಚ್ಚಳಕ್ಕೆ ಸರಕಾರ ಕೊಡ್ತಾ ಇರುವ ಕಾರಣಗಳತ್ತ ನಾವು ಕಣ್ಣು ಹಾಯಿಸೋಣ, ಅದಕ್ಕೆ ಅವರು ಕೋಡ್ತಾ ಇರುವ ಕಾರಣ ಏನು ಅಂದ್ರೆ ವಿದ್ಯುತ್ ಖರೀದಿ ದರ ಏರಿಕೆ ಹೆಚ್ಚಾಗಿದೆ. ಹಾಗಾಗಿ ದರ ಹೆಚ್ಚಳ ಮಾಡ್ತಾ ಇದ್ದೀವಿ ಅಂತ ಸರಕಾರ ಹೇಳ್ತಾ ಇದೆ. ಒಟ್ಟು ರಾಜ್ಯದಲ್ಲಿ 11 ಉದ್ದಿಮೆಗಳು ವಿದ್ಯುತ್‌ನ್ನು ಉತ್ಪಾದನೆ ಮಾಡ್ತಾ ಇವೆ. ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣ 30,000 ಮೆಗಾವ್ಯಾಟ್, ನಮ್ಮಲ್ಲಿರುವ ಬೇಡಿಕೆ ಪ್ರಮಾಣ 8000 ದಿಂದ 10,500 ಮೆಗಾವ್ಯಾಟ್ ಇದೆ. ನಾವೇ ವಿದ್ಯುತ್ ಅನ್ನು ಮಾರುವಂತಹ ಸದೃಢ ಸ್ಥಿತಿಯಲ್ಲಿ ಇದ್ದೇವೆ, ಹೀಗಿದ್ದಾಗ ನಷ್ಟ ಆಗೋಕೆ ಹೇಗೆ ಸಾಧ್ಯ? ಇವರು ಎಲ್ಲಿಂದ ಖರೀಧಿ ಮಾಡ್ತಾರೆ? ಗೊತ್ತಿಲ್ಲ ಸರಕಾರವೇ ಅದಕ್ಕೆ ಉತ್ತರವನ್ನು ಕೊಡಬೇಕಿದೆ. ಉದ್ದಿಮೆಗಳು ನಷ್ಟವನ್ನು ಅನುಭವಿಸಿದ್ದರೆ ಅದಕ್ಕೆ ಸರಕಾರದ ನಿರ್ಲಕ್ಷ್ಯವೇ ಕಾರಣವಾಗಿದೆ.

ಇನ್ನು ಸಾಮಾನ್ಯ ಜನ ಕರೆಂಟ್ ಬಿಲ್ ಕಟ್ಟದೆ ಹೋದ್ರೆ ಕಣ್ಣ ಮುಚ್ಚುವದರೊಳಗೆ ಕರೆಂಟ್ ಕಟ್ಟ ಮಾಡುವ ಸರಕಾರ ಯಾವತ್ತಾದರೂ ದೊಡ್ಡ ದೊಡ್ಡ ಕಂಪನಿಗಳ ಬಿಲ್ ಕಟ್ಟದೆ ಇದ್ದಗ ಕರೆಂಟ್ ಸ್ಥಗಿತ ಗೊಳಿಸಿದ ಉದಾಹರಣೆ ಇದೆಯಾ?, ಶಾಸಕರ, ಸಚಿವರು, ಶ್ರೀಮಂತರ ಮನೆಯವರು ವರ್ಷಗಟ್ಟಲೆ ಕರೆಂಟ್ ಬಿಲ್ ಕಟ್ಟೋದಿಲ್ಲ, ಅವರಿಗ್ಯಾಕೆ ರಿಯಾಯ್ತಿ ಕೋಡ್ತೀರಿ. ಇದರಿಂದ ವಿದ್ಯುತ್ ಉತ್ಪಾದನಾ ಉದ್ದಿಮೆಗಳಿಗೆ ನಷ್ಟ ಆಗುತ್ತೆ ಅಂತಾ ನಿಮಗೆ ಅನ್ನೋದೆ ಇಲ್ವಾ? ಈ ದೋಷವನ್ನು ಸರಿ ಪಡ್ಸೋದು ಯಾವಾಗ ಯಡಿಯೂರಪ್ಪನವರೆ?

ದರ ಹೆಚ್ಚಳ ಮಾಡಿದಷ್ಟೂ ನಿಮ್ಮ ಸರಕಾರದ ಖಜಾನೆ ತುಂಬುತ್ತೆ ಅಲ್ವಾ ಯಡಿಯೂರಪ್ಪವನವರೆ? ನಿಮ್ಮ ಸರಕಾರದ ಬೊಕ್ಕಸ ತುಂಬಿಸಿಕೊಳ್ಳೋಕೆ ಯಾಕೆ ಜನ ಸಾಮಾನ್ಯರಿಗೆ ಬರೆ ಹಾಕ್ತೀರಿ. ಕೋವಿಡ್, ಕೋವಿಡ್ ನಿಂದ ಉಂಟಾದ ಲಾಕ್‌ಡೌನ್ ಗಳಿಂದಾಗಿ ಒಂದು ವರಷದಿಂದ ಜನ ಸಂಕಷ್ಟ ಅನುಭವಿಸುತ್ತಿದ್ದಾರೆ. ನೀವಿ ಇಂತಹ ಸಂಕಷ್ಟದ ಸಂದರ್ಬದಲ್ಲಿ ಜನರ ಕೂ ಹಿಡಿಬೇಕಿತ್ತು.

ಪಕ್ಕದ ರಾಜ್ಯವನ್ನು ನೋಡಿ ಕಲಿರಿ, ಕೇರಳ, ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳು ಎರಡುಮೂರು ತಿಂಗಳು ಕರೆಂಟ್ ಬಿಲ್ ಗಳಿಗೆ ರಿಯಾಯಿತಿಯನ್ನು ನೀಡಿದೆ. ನೀವು ರಿಯಾಯಿತಿಯನ್ನೂ ಕೊಡದೆ ಈಗ ದರಳ ಹೆಚ್ಚಳ ಮಾಡಿದ್ದೀರಲ್ಲ ಜನರ ಸಂಕಷ್ಟ ನಿಮ್ಮ ಕಣ್ಣಿಗೆ ಕಾಣ್ತಾ ಇಲ್ವಾ, ಈಗಲೂ ಕಾಲ ಮಿಂಚಿಲ್ಲ. ಹೆಚ್ಚಿಸಿದ ದರವನ್ನು ವಾಪಸ್ಸ ಪಡೆಯಿರಿ, ವಿದ್ಯುತ್ ಸಮಸ್ಯೆಯನ್ನು ನಿವಾರಿಸೋದಕ್ಕೆ ತಜ್ಞರು, ವಿರೋಧ ಪಕ್ಷಗಳ ಸಲಹೆಗಳನ್ನು ಕೇಳಲು ಮುಂದಾಗಬೇಕಿದೆ.

ವಿದ್ಯುತ್ ದರ ಏರಿಕೆಯನ್ನ ಮತ್ತು ಸಾರ್ವಜನಿಕ ವಿದ್ಯುತ್ ರಂಗದ ಖಾಸಗೀಕರಣವನ್ನು ತಡೆಯಲು ಒತ್ತಾಯ.... ಪುಟ 3 ರಿಂದ

ಮಾತ್ರವಲ್ಲಾ, ನಿರುದ್ಯೋಗ ಮತ್ತು ಬಡತನ ಹಾಗೂ ದಾರಿದ್ರ್ಯ ಹೆಚ್ಚಳಗೊಳ್ಳಲು ಇದು ನೆರವು ನೀಡಲಿದೆ.

ಆದರೇ, ಇದು ಕೇವಲ, ಅದಾನಿ, ಜಿಂದಾಲ್ ಮುಂತಾದ ಖಾಸಗೀ ವಿದ್ಯುತ್ ಕಂಪನಿಗಳ ಭಾರೀ ಲೂಟಿಗೆ ನೆರವಾಗಲಿದೆ.

ಹೀಗಾಗಿ, ಈ ಬೆಲೆ ಏರಿಕೆಗೆ ತಮ್ಮ ಸರಕಾರ ಏನೇ ಸಮರ್ಥನೆ ನೀಡಿದರೂ, ಅದು ಈ ಖಾಸಗೀ ಕಂಪನಿಗಳ ಲೂಟಿಕೋರ ಲಾಭದಾಸೆಯ ಒತ್ತಡದ ಕಾರಣದಿಂದ ಬಂದಿರುವುದೆಂಬುದು ಸ್ಪಷ್ಟವಿದೆ.

ಈಗಲೂ ವಿದ್ಯುತ್ ಸರಬರಾಜು ಕಂಪನಿಗಳು ಶೇ. 14 ರಷ್ಟು ಪ್ರಸರಣೆ ಮತ್ತು ವಿತರಣೆಯಲ್ಲಿನ ವಿದ್ಯುತ್ ಸೋರಿಕೆಯನ್ನು ತಡೆಯಲು ವಿಫಲವಾಗಿವೆ. ಅಂತರ ರಾಷ್ಟ್ರೀಯವಾಗಿ ವಿದ್ಯುತ್ ಪ್ರಸರಣ ಮತ್ತು ವಿತರಣೆಯ ನಷ್ಟದ ಪ್ರಮಾಣವನ್ನು ಸರಾಸರಿ ಶೇ 7.5 ಎಂದು ಗುರುತಿಸಲಾಗಿದೆ. ಪರಿಸ್ಥಿತಿ ಹೀಗಿರುವಾಗ, ಕರ್ನಾಟಕದ ಈ ನಷ್ಠದ ಸೋರಿಕೆಯ ಪ್ರಮಾಣವನ್ನು ಶೇ 5 ರಷ್ಟು ಕಡಿತ ಮಾಡಲು ಕ್ರಮವಹಿಸಿದರೂ ಮತ್ತು ಅದೇ ರೀತಿ, ಖಾಸಗೀ ಕಂಪನಿಗಳಿಂದ ಉತ್ಪಾದನಾ ವೆಚ್ಚಕ್ಕಿಂತಲೂ ದುಬಾರಿ ಬೆಲೆಗೆ ವಿದ್ಯುತ್ ಖರೀದಿಸುವುದನ್ನು ನಿಲ್ಲಿಸಿದಲ್ಲಿ, ಇಂತಹ ಬೆಲೆ ಏರಿಕೆಯ ಕ್ರಮಗಳು ಅಗತ್ಯವಿರುವುದಿಲ್ಲ.

ತಮ್ಮ ಸರಕಾರ ಈ ಕುರಿತು ಕ್ರಮ ವಹಿಸದೇ, ಸಂಕಷ್ಠದಲ್ಲಿರುವ ಗ್ರಾಹಕರನ್ನು ಲೂಟಿ ಮಾಡಲು, ಲೂಟಿಕೋರ ಕಂಪನಿಗಳಿಗೆ ನೆರವಾಗುವಂತೆ ಪದೇ ಪದೇ ಬೆಲೆ ಏರಿಕೆಗೆ ಕ್ರಮವಹಿಸಿರುವುದು ಅಕ್ಷಮ್ಯವಾಗಿದೆ.

ಬೆಲೆ ಏರಿಕೆಗೆ ಅವಕಾಶಗಳಿರದಂತೆ ತಡೆಯುವ ಅನ್ಯ ಮಾರ್ಗಗಳಿದ್ದರೂ ಆ ಕಡೆಗೆ ಗಮನ ಹರಿಸದೇ ಕೇವಲ ಲೂಟಿಕೋರ ಖಾಸಗಿ ಕಂಪನಿಗಳ ಒತ್ತಡಕ್ಕೆ ಮಣಿದು ವಿದ್ಯುತ್ ಬೆಲೆ ಏರಿಕೆಗೆ ಕ್ರಮವಹಿಸುತ್ತಿರುವುದು ವಿದ್ಯುತ್ ಕ್ಷೇತ್ರವನ್ನು ಪೂರ್ಣ ಪ್ರಮಾಣದಲ್ಲಿ ಖಾಸಗೀ ಲೂಟಿಗೆ ತೆರೆಯುವ ಸಂಚಿನ ಭಾಗವೆಂಬುದನ್ನು ಇದು ಮತ್ತೊಮ್ಮೆ ಒತ್ತಿ ಹೇಳುತ್ತದೆ.

ರಾಜ್ಯದ ದಶ ಲಕ್ಷಾಂತರ ಕೋಟಿ ರೂ ಮೌಲ್ಯದ ಸಾರ್ವಜನಿಕ ವಿದ್ಯುತ್ ಕ್ಷೇತ್ರದ ಕರ್ನಾಟಕ ವಿದ್ಯುತ್ ನಿಗಮ ಹಾಗೂ ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ಮತ್ತು ಐದು ವಿತರಣೆಯ ಭಾರೀ ಕಂಪನಿಗಳ ಆಸ್ತಿ ಹಾಗು ರಾಜ್ಯದ ಆರು ಕೋಟಿಗೂ ಅಧಿಕ ಗ್ರಾಹಕ ಸಮುದಾಯದ ಲೂಟಿಗಾಗಿ, ಲೂಟಿ ಕೋರ ಕಾರ್ಪೋರೇಟ್ ಕಂಪನಿಗಳು ಜೊಲ್ಲು ಸುರಿಸುತ್ತಾ ಕಾಯ್ದು ಕುಳಿತಿರುವುದು ಸುಳ್ಳೇನಲ್ಲಾ!

ಇದೆಲ್ಲದಕ್ಕೆ ಪೂರಕವಾಗಿ, ಅದಾಗಲೇ ವಿದ್ಯುತ್ ಉತ್ಪಾದನೆ, ಪ್ರಸರಣೆ ಮತ್ತು ವಿತರಣೆಯ ಹಂತಗಳನ್ನು ಪೂರ್ಣ ಪ್ರಮಾಣದಲ್ಲಿ ಖಾಸಗೀಯವರಿಗೆ ವಹಿಸಿ ಕೊಡುವ ವಿದ್ಯುತ್ ತಿದ್ದುಪಡಿ ಮಸೂದೆ–2020 ಪಾರ್ಲಿಮೆಂಟ್ ಮುಂದಿರುವುದರಿಂದ ಇದನ್ನು ಸರಿಯಾಗಿಯೇ ಅರ್ಥೈಸಬಹುದಾಗಿದೆ. ತಮ್ಮ ಸರಕಾರವೂ ಇದರ ವಿರುದ್ದವಾಗಿ ಮಾತನಾಡಿಯೂ ಇಲ್ಲ.

ಆದ್ದರಿಂದ, ರಾಜ್ಯದ ಸಾರ್ವಜನಿಕ ರಂಗದ ವಿದ್ಯುತ್ ಕ್ಷೇತ್ರವನ್ನು ರಕ್ಷಿಸಿ ಬಲ ಪಡಿಸಲು, ಕರ್ನಾಟಕದ 30.65 ಲಕ್ಷ ನೀರಾವರಿ ಪಂಪ್ ಸೆಟ್ ವಿದ್ಯುತ್ ಬಳಕೆದಾರರು ಹಾಗೂ 26.88 ಲಕ್ಷ ಭಾಗ್ಯ/ ಕುಠೀರ ಜ್ಯೋತಿ ಬಳಕೆದಾರರು ಮತ್ತು ಮೂರು ಲಕ್ಷ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು, ರಾಜ್ಯದ ಸುಮಾರು 26 ಸಾವಿರ ಗ್ರಾಮ ಹಾಗೂ ನಗರಗಳ ಸಾರ್ವಜನಿಕ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆ ನಿರ್ವಹಿಸುವ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಎಲ್ಲ ಗ್ರಾಹಕ ಸಮುದಾಯಗಳನ್ನು ಲೂಟಿಕೋರ ಖಾಸಗೀ ಕಾರ್ಪೊರೇಟ್ ಕಂಪನಿಗಳಿಂದ ಸಂರಕ್ಷಿಸಲು, ಸಾರ್ವಜನಿಕ ಸಂಸ್ಥೆಗಳ ಖಾಸಗೀ ಕರಣದ ದೇಶ ಹಾಗೂ ಜನ ವಿರೋಧಿ ಕ್ರಮಗಳನ್ನು ಈ ಕೂಡಲೇ ನಿಲ್ಲಿಸಬೇಕು. ಈ ಕುರಿತು ಕೇಂದ್ರ ಸರಕಾರಕ್ಕೆ ಪತ್ರವನ್ನು ಬರೆಯ ಬೇಕು ಮತ್ತು ಏರಿಸಿದ ವಿದ್ಯುತ್ ದರಗಳನ್ನು ವಾಪಾಸು ಪಡೆಯಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ರಾಜ್ಯದ ನೈಜ ಅಭಿವೃದ್ಧಿಯ ಹಾಗೂ ಸಮಸ್ಥ ಗ್ರಾಹಕರ ಪರವಾಗಿ ಒತ್ತಾಯಿಸಿದೆ.

ಬದುಕಿನ ಅಮಾನವೀಯತೆ ಮತ್ತು ಸಾವಿನ ಮಾನವೀಯತೆ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಶವಸಂಸ್ಕಾರದ ವಿಷಯದಲ್ಲಿ ಮಾನವೀಯತೆಯ ಪ್ರಶ್ನೆಯು ಮುಖ್ಯವಾಗುವಂತೆ ಬದುಕಿರುವವರ ವಿಷಯದಲ್ಲಿ ಮಾನವೀಯತೆಯು ಏಕೆ ಮುಖ್ಯವಾಗುವುದಿಲ್ಲ? ಎಲ್ಲಾ ಮನುಷ್ಯರ ಅಸ್ತಿತ್ವದ ಮೂಲ ಅಗತ್ಯಗಳಾದ ಆಹಾರ, ಆರೋಗ್ಯ, ವಸತಿ, ವಸ್ತ್ರ ಮುಂತಾದ ಜೀವನಾಗತ್ಯಗಳ ನಿರಾಕರಣೆಯನ್ನು, ಅಮಾನವೀಯತೆ ಎಂದು ಸರ್ಕಾರಗಳು, ನ್ಯಾಯಾಲಯಗಳು, ಆಳುವವರ್ಗಗಳು ಏಕೆ ಎಲ್ಲರೂ ಗುರುತಿಸುವುದಿಲ್ಲ? ಹಾಗಿದ್ದರೆ ಮಾನವೀಯತೆ ಎಂದರೇನು? ಮಾನವೀಯವಾಗಿರುವುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಹೇಗೆ?.. .. ..ಕೋವಿಡ್‌ನಿಂದಾಗಿ ಸತ್ತವರ ಶವಸಂಸ್ಕಾರದ ಸಂದರ್ಭವನ್ನು ದುರುಪಯೋಗಮಾಡಿಕೊಂಡು ಹಣ ಮಾಡುತ್ತಿರುವವವರ ಅಮಾನವೀಯತೆಯೂ ಮೇಲುನೋಟಕ್ಕೆ ತೋರುವಂತೆ ಶವಸಂಸ್ಕಾರಕ್ಕೆ ಮಾತ್ರ ಸಂಬಂಧಿಸಿದ ವಿಷಯ ಅಲ್ಲ. ಅವರ ಅಮಾನವೀಯತೆ ಇರುವುದು ಬದುಕನ್ನು ಉತ್ಪಾದಿಸುವ ಬದಲು ಕೇವಲ ಸಂಪಾದಿಸುತ್ತಿರುವ, ಶ್ರಮ ಮಾಡದ ಜೀವಿಗಳ ಅಂದರೆ ಪ್ರಾಣಿಗಳ ನಿಯಂತ್ರಣಕ್ಕೆ ಸಿಕ್ಕಿ ನರಳುತ್ತಿರುವ ಶ್ರಮ ಮಾಡುವವರ ವಿಷಯದಲ್ಲಿ. ತಮ್ಮ ಬದುಕನ್ನು ತಾವೇ ಉತ್ಪಾದಿಸಿಕೊಳ್ಳಲು ನಿತ್ಯವೂ ಹೆಣಗುತ್ತಿರುವ, ಮಾನವೀಯರಾದ ಜನಸಾಮಾನ್ಯರ ವಿಷಯದಲ್ಲಿ.

ಕೋವಿಡ್ 19 ಎರಡನೆಯ ಅಲೆಯ ಈ ಸಂದರ್ಭದಲ್ಲಿ ಲಾಕ್ ಡೌನ್ ಕಾರಣಕ್ಕಾಗಿ ನಾನಾ ಬಗೆಯ ಕಷ್ಟಗಳಿಗೆ ಜನಸಾಮಾನ್ಯರು ಸಿಕ್ಕಿದ್ದಾರೆ. ಆಕಾಶವೇ ಅಕ್ಷರಶಃ ತಲೆಯ ಮೇಲೆ ಬಿದ್ದರೆ ಹೇಗೋ ಹಾಗೆ ಕೋವಿಡ್ ಜಾಡ್ಯಕ್ಕೆ ಪಕ್ಕಾಗಿ ಔಷಧೋಪಚಾರದ ಕೊರತೆಯೂ ಸೇರಿದಂತೆ ಅನೇಕ ಕಾರಣಗಳಿಗಾಗಿ ಕುಟುಂಬದ ಸದಸ್ಯರನ್ನು ಕಳೆದುಕೊಂಡ ದುಃಖ, ಭಯ, ಹಸಿವು, ನಿರುದ್ಯೋಗ, ಹಣದ ಕೊರತೆ, ಅಸಹಾಯಕತೆಯೇ ಮೊದಲಾದ, ಹೇಳಲಾಗದಂಥ ಕಷ್ಟ–ಕಾರ್ಪಣ್ಯಗಳಿಂದ ಜನರು ನರಳುತ್ತಿದ್ದಾರೆ. ಮತ್ತೊಂದು ಕಡೆ, ಟಿವಿ ಮಾಧ್ಯಮಗಳು, 'ಕರೋನಾ ಅಟ್ಟಹಾಸ', 'ಕರೋನಾ ಕೇಕೆ', 'ಕರೋನಾ ಮರಣ ಮೃದಂಗ' ಮುಂತಾಗಿ ಕಣ್ಣಿಗೆ ರಾಚುವ ದಪ್ಪ ದಪ್ಪ ಅಕ್ಷರಗಳನ್ನೇ 'ಸುದ್ದಿ'ಯೆಂದು ಬಿಂಬಿಸಿ ಸಂಭ್ರಮ ಪಡುತ್ತಿವೆ.

ವಿವಿಧ ಪಕ್ಷಗಳ ರಾಜಕಾರಣಿಗಳು, ಅಧಿಕಾರಿಗಳು, ಧರ್ಮಾಧಿಕಾರಿಗಳು ಮತ್ತು ಜಗದ್ಗುರು – ಮಠಾಧಿಪತಿಗಳು ಪ್ರಚಾರಕ್ಕಾಗಿ ಕೇವಲ ಸಾಂಕೇತಿಕವಾಗಿ ಮಾಡುತ್ತಿರುವ 'ಸಹಾಯ'ಗಳನ್ನು ಅವರವರ ಗುಲಾಮರಾದ ಸುದ್ದಿ ಮಾಧ್ಯಮಗಳು 'ಮಾನವೀಯತೆ'ಯ ಉತ್ತಮ ನಿದರ್ಶನಗಳೆಂದು ಬಿಂಬಿಸುತ್ತಿವೆ.

ವಿವಿಧ ರಾಜಕಾರಣಿಗಳ ಮತ್ತು ಕಾರ್ಪೊರೇಟ್ ಬಂಡವಳಿಗರ ನಿಯಂತ್ರಣದಲ್ಲಿರುವ ಬಹಳಷ್ಟು ಖಾಸಗಿ ಆಸ್ಪತ್ರೆಗಳು ಅಂಬ್ಯುಲೆನ್ಸ್, ಹಾಸಿಗೆ, ಆಮ್ಲಜನಕ, ಔಷಧ, ಲಸಿಕೆ ಮುಂತಾದ ಕರೋನಾಗತ್ಯ ಪರಿಕರಗಳ ಧಂಧೆಯಲ್ಲಿ ತೊಡಗಿ, ಲಕ್ಷಾನುಗಟ್ಟಲೆ ಹಣವನ್ನು ವೈದ್ಯಕೀಯ ಸೇವೆಯ ಹೆಸರಿನಲ್ಲಿ ಜನರಿಂದ ಸುಲಿಯುತ್ತಿವೆ. ಬಿಲ್ ಪಾವತಿಸದಿದ್ದರೆ ಶವಗಳನ್ನು ಬಂಧುಗಳ ಸುಪರ್ದಿಗೆ ಕೊಡುವುದಿಲ್ಲವೆಂದು, ಸಾವಿನಲ್ಲೂ 'ಅಮಾನವೀಯತೆ'ಯನ್ನು ಪ್ರದರ್ಶಿಸುತ್ತಿವೆ.

ವಿವಿಧ ರಾಜಕೀಯ ಪಕ್ಷಗಳ ಅಧಿಕಾರಸ್ಥರು, ನೇತಾರರು ಮತ್ತು ಅವರ ಹಿಂಬಾಲಕರು ಕೋವಿಡ್ ಸಂದರ್ಭದ ಅನುದಾನ ಹಂಚಿಕೆ– ವಸ್ತುಗಳ ಖರೀದಿ– ಕಮೀಷನ್–ಭ್ರಷ್ಟಾಚಾರ–ಪ್ರಚಾರ–ರಾಜಕೀಯ ಅಧಿಕಾರ ಮುಂತಾದ 'ಲಾಭ' ಗಳಿಗಾಗಿ ಕೆಸರೆರೆಚುತ್ತಾ ಕಿತ್ತಾಡುತ್ತಿದ್ದಾರೆ. ಅವರು ಸೃಷ್ಟಿಸಿರುವ ಈ ಈ ರಾಕ್ಷಸ ವಾತಾವರಣದ 'ಅಮಾನವೀಯ'ತೆಯ ಬಗ್ಗೆ ಬುರುಡೆ ಮಾಧ್ಯಮಗಳು ಪ್ರಶ್ನಾರ್ಥಕ ಚಿನ್ಹೆಗಳೊಂದಿಗಿನ ತಮ್ಮ ಊಹೆ–ಹರಟೆಗಳನ್ನೇ ಸುದ್ದಿಯೆಂದು ಕೂಗುತ್ತಾ ಅವನ್ನೇ ತಮ್ಮ ಪ್ರಸಾರದ ಸರಕನ್ನಾಗಿ ಬಳಸುತ್ತಿವೆ.

ಈ ವಿವಿಧ ಬಗೆಯ 'ಅಮಾನವೀಯತೆಯ' ಗದ್ದಲದ ನಡುವೆಯೇ, ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯನಿಷ್ಠರಾಗಿ, ಸದ್ದಿಲ್ಲದೆ, ಪ್ರಚಾರವಿಲ್ಲದೆ, ದಣಿವು–ಅಪಾಯಗಳನ್ನು ಅನಿವಾರ್ಯವಾಗಿ ಪಕ್ಕಕ್ಕಿರಿಸಿ, ಅವಿರತವಾಗಿ ಕೋವಿಡ್ ಪೀಡಿತ ಜನರ ಸೇವೆಯಲ್ಲಿ ತೊಡಗಿದ್ದಾರೆ. ಆ ಯತ್ನದಲ್ಲಿ ನೂರಾರು, ಸಾವಿರಾರು ವೈದ್ಯರು, ದಾದಿಯರು, ಮತ್ತು ವೈದ್ಯಕೀಯ ಸೇವಾ ಸಿಬ್ಬಂದಿ ತಾವೇ ಜಾಡ್ಯಕ್ಕೆ ಬಲಿಯಾಗುತ್ತಿದ್ದಾರೆ. ಕೊರೋನಾ ದೊಂಬಿಯಲ್ಲಿ ಇವರ 'ಮಾನವೀಯತೆ'ಯು ವಿರಳವಾಗಿ ಮಾತ್ರ ಜನರ ಗಮನಕ್ಕೆ ಬರುವಂತಾಗಿದೆ. ವಿವಿಧ ಇಲಾಖೆಗಳಲ್ಲಿ, ವಿವಿಧ ಕರ್ತವ್ಯಗಳನ್ನು ನಿರ್ವಹಿಸುತ್ತಾ, ನೂರಾರು, ಸಾವಿರಾರು ನೌಕರರು ರಾಜಕಾರಣಿಗಳ ಧೂರ್ತ ಅಬ್ಬರಗಳಲ್ಲಿ 'ಕೋವಿಡ್ ಸೈನಿಕರು' ಎಂಬ ಸಗಟು ಹೆಸರನ್ನು ಪಡೆದು ಅನಾಮಧೇಯರಾಗೇ ದುಡಿಯುತ್ತಿದ್ದಾರೆ.


ಕೈಲಿರುವ ಪುಡಿಗಾಸನ್ನು ಕೋವಿಡ್ ಸತ್ರಸ್ತರಿಗಾಗಿ ಖರ್ಚುಮಾಡುವ ಎಳೆಯ ಹುಡುಗಿ – ಹುಡುಗ, ಮದುವೆಯ ಖರ್ಚಿನಲ್ಲಿ ಕಡಿತಮಾಡಿ ಅಗತ್ಯವಿರುವವರಿಗೆ ಕೊಡುವ ಅನಾಮಧೇಯ – ಅಪರಿಚಿತ ಜನರು, 'ಹಣ ಕೊಡದೆ ಹೆಣವಿಲ್ಲ' ವೆಂಬ ನೀತಿಯ ಕಾರ್ಪೊರೇಟ್ ಆಸ್ಪತ್ರೆಯ ಬಿಲ್ಲನ್ನು ಪಾವತಿಸಿ ದುಃಖ ತಪ್ತ ಬಂಧುಗಳಿಗೆ ಸಹಾಯ ಮಾಡುವ ಪೋಲೀಸ್ ಅಧಿಕಾರಿ, ಸಂಸ್ಕಾರ ಮಾಡುವವರಿಲ್ಲದ ಶವಗಳಿಗೆ ಕೋಮು ಭೇದವನ್ನು ಮಾನ್ಯಮಾಡದೆ ಸಂಸ್ಕಾರ ಮಾಡುವ ವ್ಯಕ್ತಿಗಳ ನಡವಳಿಕೆಯನ್ನು 'ಮಾನವೀಯತೆ'ಯ ವಿಶೇಷ ನಿದರ್ಶನಗಳೆಂದು ಹೇಳುವ ವರದಿಗಳೂ ಕಾಣಸಿಗುತ್ತವೆ.

ಶವವಾಗಿ ಮಲಗಿದ ತಂದೆಯ ಕಳೆಬರವನ್ನು ಆಸ್ಪತ್ರೆಯಿಂದ ಪಡೆಯಲು ಹಣವಿಲ್ಲದೆ, ಶವವನ್ನು ನೀವೇ ಇಟ್ಟುಕೊಳ್ಳಿ ಎಂದು ಫೋನಿನಲ್ಲಿ ಹೇಳಿ, 'ತಂದೆಯ ಬಳಿ ಹಣದ ಗಂಟಿದೆ' ಎಂದು ಯಾರೋ ಸುಳ್ಳು ಹೇಳಿದಾಗ ತಕ್ಷಣವೇ ಸಂಸ್ಕಾರಕ್ಕೆ ಮುಂದಾದನೆಂದು ಹೇಳಲಾಗುವ ಯುವಕನ ನಡವಳಿಕೆಯನ್ನು 'ಅಮಾನವೀಯತೆ' ಎಂದು ಸುದ್ಧಿ ಮಾಧ್ಯಮಗಳು ದೂಷಿಸುತ್ತವೆ. ಆದರೆ, ಆಸ್ಪತ್ರೆಯ ಧನದಾಹಿ ನಡವಳಿಕೆಯನ್ನು 'ಅಮಾನವೀಯ' ಎನ್ನುವುದಿಲ್ಲ.

ಇವುಗಳ ಜೊತೆಗೆ ಯಾವುದು ಮಾನವೀಯ, ಯಾವುದು ಅಮಾನವೀಯ ಎಂದು ನಡುವೆ ಗೆರೆ ಎಳೆಯಲಾಗದ ದಾರುಣ ಸಂದರ್ಭಗಳು ಎದುರಾಗುತ್ತಿವೆ. ಉದಾಹರಣೆಗೆ, ತನ್ನ ತಂದೆಯ ಶವವನ್ನು ಪಡೆಯಲು ಪ್ರತ್ಯಕ್ಷವಾಗಿ ಮುಂದಾಗಿ, ಆಸ್ಪತ್ರೆಯು ಆಗ್ರಹಿಸಿದ ಹಣವನ್ನು ಪಾವತಿಸಲಾಗದೆ, ತಂದೆಯ ಶವಕ್ಕೆ ನಮಸ್ಕರಿಸಿ, ಅಂತ್ಯಸಂಸ್ಕಾರವನ್ನು ನೀವೇ ಮಾಡಿ' ಎಂದು ಹೊರಟು ಹೋದ ಯುವಕನ ನಡವಳಿಕೆಯನ್ನು 'ಅಮಾನವೀಯ'ವೋ, 'ಮಾನವೀಯ'ವೋ ಎಂದು ಹೇಳುವುದು ಹೇಗೆ? ಹಾಗೆ ತೀರ್ಮಾನಿಸಲು ಬೇಕಾದ ಮಾನದಂಡ ಯಾವುದು?

ಎಲ್ಲಾ ಮಾನವರಿಗೂ ಅವರು 'ಸತ್ತಾಗ ಗೌರವಯುತ ಅಂತ್ಯಸಂಸ್ಕಾರದ ಹಕ್ಕು' (ಡೀಸೆಂಟ್ ಬರೀಯಲ್) ಇದೆಯೆಂದು ನ್ಯಾಯಾಲಯವು ಹೇಳಿತೆಂದು, ಪತ್ರಿಕಾ ವರದಿಗಳು ಹೇಳುತ್ತವೆ. ಹಾಗೆ ಹೇಳಿದ ನ್ಯಾಯಾಲಯದ ಮಾನವ ಮುಖಗಳಾದ ಗೌರವಾನ್ವಿತ ಮತ್ತು ಜ್ಞಾನವಂತ (ಆನರೆಬಲ್ ಅಂಡ್ ಲರ್ನೆಡ್) ನ್ಯಾಯಾಧೀಶರ ಅಭಿಪ್ರಾಯವು 'ಮಾನವೀಯ'ವಾದುದೆಂದು ಅನೇಕರು ಪ್ರಶಂಸಿಸುತ್ತಾರೆ. ಅಂದರೆ ಮನುಷ್ಯರು ಸತ್ತಾಗ ಅವರ ಶವಗಳನ್ನು ಗೌರವಯುತವಾಗಿ ಸಂಸ್ಕಾರ ಮಾಡಲು ಸಹಾಯ ಮಾಡಿದರೆ ಅದನ್ನು 'ಮಾನವೀಯತೆ' ಎನ್ನಬೇಕಾದ್ದೇ. ಆದರೆ ಎಲ್ಲಾ ಮಾನವರಿಗೂ, ಅವರು ಬದುಕಿದ್ದಾಗಲೂ ಸಹ 'ಗೌರವಯುತವಾಗಿ ಜೀವಿಸುವ ಹಕ್ಕು' ಇದೆಯೆಂದು ಹೇಳುವ ಮಾನವೀಯತೆಯನ್ನು ಎಲ್ಲಿ ಅರಸಬೇಕು?

ಶವ ಸಂಸ್ಕಾರದಲ್ಲಿ ಕಳೇಬರವನ್ನು ಹೂಳುವುದು ಮತ್ತು ಸುಡುವುದು ಹಿಂದಿನಿಂದಲೂ ಜನರು



ಅನುಸರಿಸುತ್ತಾ ಗೌರವಯುತ ವಿಧಾನಗಳು. ಆದರೆ ಅದಕ್ಕಾಗಿ ಹಣ ಖರ್ಚಾಗುತ್ತದೆ. ಹೂಳುವುದಾದರೆ, ಸ್ವಂತ ಸ್ಥಳ ಇರಬೇಕು. ಅಥವಾ ಸಮುದಾಯದ ಭೂಮಿಯಲ್ಲಿ ಸ್ಥಳ ಪಡೆಯುವ ಏರ್ಪಾಡಿರಬೇಕು.

ಸುಡುವುದಾದರೆ ನಗರಗಳಲ್ಲಿ ನಿಗದಿತ ಶುಲ್ಕವನ್ನು ಪಾವತಿಸಿ ಸೌದೆ, ಗ್ಯಾಸ್ ಅಥವಾ ವಿದ್ಯುತ್ ಚಿತಾಗಾರದಲ್ಲಿ ಸಂಸ್ಕಾರ ಮಾಡುವ ಅವಕಾಶವಿದೆ. ಸಣ್ಣ ಊರುಗಳು ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ಸೌದೆ ಖರೀದಿಸಿ ಶವವನ್ನು ಸುಡಬೇಕು. ಚೆನ್ನಾಗಿ ಒಣಗಿದ ಮತ್ತು ಹತ್ತಿಸಿದೊಡನೆ ಬೇಗ ಆರದೆ ಧಗಧಗನೆ ಉರಿಯುವ ಗಟ್ಟಿ ಸೌದೆಗೆ ಹೆಚ್ಚು ಬೆಲೆ. ಬೆಂಡುಸೌದೆ ಅಥವಾ ಹಸೀಸೌದೆಗೆ ಕಡಿಮೆ ಬೆಲೆ. ಅಧಿಕಾರಸ್ಥರಿಗೆ ಮತ್ತು ಶ್ರೀಮಂತರಿಗಾದರೆ ತುಂಬಾ ಬೆಲೆ ಬಾಳುವ ಸುಗಂಧಭರಿತ ಸೌದೆ ಬೇಕಾದರೂ ಸಿಗುತ್ತದೆ. ಬದುಕಿದ್ದಾಗ ಹೇಗೋ ಹಾಗೆ ಸತ್ತಾಗಲೂ ಅನಾಮಧೇಯರಾಗೇ ಸಾಯುವ ದಿಕ್ಕಿಲ್ಲದ ಜನರ ಅನಾಥ ಶವಗಳ ಸಂಸ್ಕಾರ ಹೇಗಾಗಬಹುದು ಎಂಬುದು ಊಹೆಗೆ ಬಿಟ್ಟ ವಿಷಯ.

ಸತ್ತವರ ಶವಗಳನ್ನು ಕನಿಷ್ಠ ಅಥವಾ ಗರಿಷ್ಠ ಗೌರವದೊಂದಿಗೆ ಹೂಳಿದ ಮೇಲೆ ಅಥವಾ ಸುಟ್ಟಮೇಲೆ ಸತ್ತ ವ್ಯಕ್ತಿಗಳ ಮತ್ತು ಅವರ ಕುಟುಂಬದವರ ಆರ್ಥಿಕ ಹಿನ್ನೆಲೆ ಮತ್ತು ಸಾಮಾಜಿಕ ಅಂತಸ್ತುಗಳನ್ನು ಆಧರಿಸಿ, ಸಣ್ಣ ದಿಬ್ಬದಿಂದ ಹಿಡಿದು ಅಮೃತಶಿಲೆಯ ಸಮಾಧಿಯವರೆಗೆ ಬಗೆ ಬಗೆಯ ಸ್ಮಾರಕಗಳನ್ನು ನಿರ್ಮಿಸುವ ಪರಿಪಾಠ ಇದೆ. ಇದು ವಿವಿಧ ಮತ– ಧರ್ಮಗಳಲ್ಲಿ ವಿಶ್ವಾಸವಿರಿಸಿದ ಎಲ್ಲಾ ಜನಾಂಗಗಳು ಮತ್ತು ದೇಶಗಳಲ್ಲಿಯೂ ಇದೆ. ನಾಸ್ತಿಕರು ಸಾಯುವ ಮೊದಲೇ ತಮ್ಮ ದೇಹವನ್ನು, ಇತರರಿಗೆ ಉಪಯುಕ್ತವಾಗಬಹುದಾದ ಕಣ್ಣು ಮುಂತಾದ ಅವಯುವಗಳೊಂದಿಗೆ ವೈದ್ಯಕೀಯ ಕಾಲೇಜು – ಆಸ್ಪತ್ರೆಗಳಿಗೆ ದಾನಮಾಡಲು ಅವಕಾಶವಿರುವ ವಿರಳ ಸಂಖ್ಯೆಯ ಜನರ ಮಾನವೀಯತೆಯೂ ಇದೆ. ಬದುಕಿದ್ದಾಗ ಮಾತ್ರವಲ್ಲದೆ ಗತಿಸಿದ ಮೇಲೂ ತಾವು ಯಾರಿಗೂ ಹೊರೆಯಾಗಬಾರದೆಂಬ ದೃಷ್ಟಿಯಿಂದ ತಮ್ಮ ಸಂಸ್ಕಾರದ ಏರ್ಪಾಡನ್ನು ತಾವೇ ಮಾಡಿಟ್ಟುಕೊಳ್ಳುವ ವೃದ್ಧ ದಂಪತಿಗಳ 'ಮಾನವೀಯತೆ' ಯೂ ಇಂಥದ್ದೇ.

ಕೆಲವು ಜನಾಂಗಗಳಲ್ಲಿ ಸತ್ತ ಬಂಧುಗಳ ಶವಗಳನ್ನು ನಿಗದಿತ ನಿರ್ಜನ ಪ್ರದೇಶದ ಮರದ ಕೆಳಗೋ, ಬಂಡೆಯ ಪಕ್ಕದಲ್ಲೋ ಕುಳ್ಳಿರಿಸಿ ಶವದ ಪಕ್ಕದಲ್ಲಿ ಅವರಿಗೆ ಪ್ರಿಯವಾದ ವಸ್ತುಗಳನ್ನು, ತಿಂಡಿ ತಿನಿಸುಗಳನ್ನು, ಜೊತೆಗೆ ಕುಡಿಯುವ ನೀರನ್ನು ಇಟ್ಟುಬರುವ ಸಂಸ್ಕಾರದ ವಿಧಾನವಿದೆ. (ಇದು ಈಜಿಪ್ಟಿನ ರಾಜರ ಪಿರಮಿಡ್ ಸಮಾಧಿಯಂತೆ ಅಲ್ಲ.) ಅವರ ದೃಷ್ಟಿಯಲ್ಲಿ ಪ್ರೀತಿ ಪಾತ್ರರು ಬದುಕಿದ್ದಾಗ ಜೀವ ಸಂಕುಲಕ್ಕೆ ಅವರು ಪರೋಪಕಾರಿ ಹೇಗೋ ಸತ್ತಮೇಲೂ ಕಡೆಯಪಕ್ಷ ಪಶು – ಪಕ್ಷಿ – ಪ್ರಾಣಿಗಳಿಗಾದರೂ ಉಪಯೋಗವಾಗಲಿ ಎಂಬ ಈ ಶವಸಂಸ್ಕಾರ ವಿಲಕ್ಷಣ ಬಗೆಯ 'ಮಾನವೀಯತೆ'ಯನ್ನು ಪ್ರದರ್ಶಿಸುವಂಥದ್ದು. ಇದು 'ಶಿಷ್ಟ, ನಾಗರಿಕ–ಸಮಾಜ'ಕ್ಕೆ, ಸಮ್ಮತವಲ್ಲದ 'ರೂಕ್ಷ'ವಾದ, 'ಅಮಾನವೀಯ'ವಾದ ಶವಸಂಸ್ಕಾರ.

ಹಿಮಾಲಯದ ಹಿಮಬೆಟ್ಟಗಳ ಕಣಿವೆಗಳ ಮೂಲಕ ಹರಿಯುತ್ತಾ, ಹರಿದ್ವಾರದ ಬಯಲು ಭೂಮಿಯನ್ನು ತಲುಪುವ ಗಂಗಾನದಿಯ ಹರಿವಿನ ಉದ್ದಕ್ಕೂ ಆಸು–ಪಾಸಿನ ಸ್ಥಳಗಳಲ್ಲಿ ಸಣ್ಣ – ಪುಟ್ಟ 'ಗುಹೆ', ಕುಟೀರ ಅಥವಾ ಆಶ್ರಮಗಳನ್ನು ನಿರ್ಮಿಸಿಕೊಂಡು ಜಪ – ತಪ – ಧ್ಯಾನಗಳಲ್ಲಿ ಕನಿಷ್ಠತಮ ಜೀವನಾಧಾರದ ಬಲದಿಂದ ಬದುಕುವ ಹಿಂದೂ ವಿರಾಗಿಗಳಲ್ಲಿ 'ಜಲಸಮಾಧಿ' ಎಂಬ ಮತ್ತೊಂದು ಬಗೆಯ ಶವಸಂಸ್ಕಾರ ವಿಧಾನವಿದೆ. ಇಂಥ ವಿರಾಗಿಗಳಲ್ಲಿ ಕೆಲವರು ವೃಧ್ಯಾಪ್ಯದಿಂದ ತೀರಾ ಕೃಶರಾದಾಗ, ಅಥವಾ ಬದುಕು ಇನ್ನು ಸಾಕೆನಿಸಿದಾಗ, ಸಾವಿನಲ್ಲೂ ಮತ್ತೊಬ್ಬರಿಗೆ ಶವಸಂಸ್ಕಾರದ ಕಷ್ಟ ಕೊಡಬಾರದೆಂಬ ಮತ್ತು ಸತ್ತಮೇಲೆ ತಮ್ಮ ಶವವು ವ್ಯರ್ಥವಾಗದೆ ಜಲಚರಗಳ ಹಸಿವನ್ನು ಇಂಗಿಸಲೆಂಬ ಉದ್ದೇಶದಿಂದ ಕೈಕಾಲುಗಳಿಗೆ ಕಲ್ಲುಗಳನ್ನು ಕಟ್ಟಿಕೊಂಡು ಗಂಗಾನದಿಗೆ ಧುಮುಕಿಬಿಡುತ್ತಾರೆಂಬ ಪ್ರತೀತಿ ಇದೆ. ಸ್ವಇಚ್ಛೆಯಿಂದ ಅನ್ನ ನೀರುಗಳನ್ನು ಬಿಟ್ಟು ಮರಣಹೊಂದುವ ಜೈನ ಮುನಿಗಳ ಸಲ್ಲೇಖ ವ್ರತವನ್ನು ಹೇಗೆ ಆತ್ಮಹತ್ಯೆ ಎನ್ನುವುದಿಲ್ಲವೋ ಹಾಗೆಯೇ ಈ ವಿರಾಗಿಗಳ ಜಲಸಮಾಧಿಯೂ ಆತ್ಮಹತ್ಯೆ ಎನ್ನಲಾಗದು. ಇಂಥ ಸಂಸ್ಕಾರದ ಹಿಂದಿರುವ 'ಮಾನವೀಯತೆ'ಯನ್ನು ಮಾನವೀಯತೆ ಎನ್ನಬಹುದೆ?

ಅಪರೂಪಕ್ಕೊಮ್ಮೆ ಇಂಥ ದೇಹಗಳು ಕಟ್ಟುಗಳು ಜಾರಿ ಗಂಗಾನದಿಯಲ್ಲಿ ತೇಲುವುದೂ ಉಂಟು. ಜೊತೆಗೆ್ಲ ಸ್ನಾನಮಾಡುವಾಗ ನದಿಯಲ್ಲಿ ಕಾಲುಜಾರಿ ಬಿದ್ದ ವಿರಾಗಿಗಳ ದೇಹಗಳೂ ಹೀಗೆ ತೇಲುತ್ತಾ ಜಲಚರಗಳಿಗೆ ಆಹಾರವಾಗುವ ಬದಲು ಒಂದು ನಿರ್ದಿಷ್ಟ ಅಧ್ಯಾತ್ಮಿಕ ಪಂಥದ ಸಾಧಕರಿಗೆ ಆಹಾರವಾಗುವುದೂ ಉಂಟು.

ಪರಮಹಂಸ ಯೋಗಾನಂದರು ತಮ್ಮ 'ಯೋಗಿಯೊಬ್ಬನ ಆತ್ಮಕತೆ' ಯಲ್ಲಿ ಇಂಥದ್ದೊಂದು ಪ್ರಸಂಗವನ್ನು ದಾಖಲಿಸಿದ್ದಾರೆ. ಹಿಮಾಲಯದ ಗುಹೆಯೊಂದರಲ್ಲಿ ವಾಸಿಸುವ ಸಾಧಕನೊಬ್ಬ, ತನ್ನನ್ನು ನೋಡಲು ಬಂದ ಯೋಗಾನಂದರಿಗೆ, ಕಣಿವೆಯಲ್ಲಿಳಿದು ನದಿಯ ತಿರುವಿನಲ್ಲಿ ತೇಲುತ್ತಿರುವ ಶವದ ಮಾಂಸವನ್ನು ಅಗತ್ಯವಿದ್ದಷ್ಟು ಕೊಯ್ದು ತರಲು ಹೇಳುತ್ತಾನೆ. ನಿರಾಕರಿಸುವ ಧೈರ್ಯವಿಲ್ಲದೆ ಯೋಗಾನಂದರು ಸಾಧಕ ಹೇಳಿದಂತೆಯೇ ಮಾಡುತ್ತಾರೆ. ಹಾಗೆ ತಂದ ಮಾಂಸವನ್ನು ಸಾಧಕನು ಪಾತ್ರೆಯಲ್ಲಿ ಹಾಕಿ ಒಲೆಯ ಮೇಲಿಟ್ಟು ಅದಕ್ಕೊಂದು ಕಲ್ಲು ಮುಚ್ಚಿ ಮಾತಿಗೆ ತೊಡಗುತ್ತಾನೆ. ಅವರ ಮಾತು ಮುಗಿಯುವ ಹೊತ್ತಿಗೆ ಆ ಶವದ ಮಾಂಸವು 'ರಸಗುಲ್ಲಾ' ಆಗಿ ಪರಿವರ್ತನೆಗೊಂಡಿತ್ತು ಎಂದು ಪರಮಹಂಸ ಯೋಗಾನಂದರು ಹೇಳುತ್ತಾರೆ. ಇದು

ಪುಟ 10 ಕ್ಕೆ



ಸರ್ವಾಧಿಕಾರಶಾಹಿ ಕೇಂದ್ರೀಕರಣಕ್ಕೆ ಎದುರಾಗಿ

ಕೋವಿಡ್ ಸಾಂಕ್ರಾಮಿಕದ ನಂತರ ವಿಪತ್ತು ನಿರ್ವಹಣಾ ಕಾಯ್ದೆ ಮತ್ತು ಸಾಂಕ್ರಾಮಿಕ ರೋಗಗಳ ಕಾಯ್ದೆಯನ್ನು ಬಳಸಲು ಕೇಂದ್ರ ಸರಕಾರಕ್ಕೆ ಅವಕಾಶ ಸಿಕ್ಕನಂತರ ದೇಶದ ಒಕ್ಕೂಟ ಸ್ವರೂಪದ ಮೇಲೆ ದಾಳಿ ನಡೆಯದ ಹಾಗೂ ರಾಜ್ಯಗಳ ಹಕ್ಕುಗಳನ್ನು ದಮನಿಸದ ಒಂದು ದಿನವೂ ಇಲ್ಲ ಎನ್ನುವಂತಾಗಿದೆ. ಒಕ್ಕೂಟತತ್ವ ಮತ್ತು ಇಂತಹ ವ್ಯವಸ್ಥೆಯ ಜೀವಾಳವಾದ ವೈವಿಧ್ಯತೆಯ ಮೇಲಿನ ಈ ದಾಳಿಯು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಮೇಲಿನ ಒಟ್ಟಾರೆ ಆಕ್ರಮಣದ ಭಾಗವಾಗಿದೆ. ಹೀಗಾಗಿ ಇದನ್ನೆಲ್ಲ ವಿರೋಧಿಸಿ ಹೋರಾಡಬೇಕಿದೆ. ಪ್ರತಿಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರಗಳು ಈ ಹೋರಾಟದ ಮುಂಚೂಣಿಯಲ್ಲಿ ಇರಬೇಕು.



ಪ್ರಕಾಶ ಕಾರಟ್

ಭಾರತದಲ್ಲಿ ಒಕ್ಕೂಟ ಸ್ವರೂಪದ ಮೇಲೆ ದಾಳಿ ನಡೆಯದ ಹಾಗೂ ರಾಜ್ಯಗಳ ಹಕ್ಕುಗಳನ್ನು ದಮನಿಸದ ಒಂದು ದಿನವೂ ಇಲ್ಲ ಎನ್ನುವಂತಾಗಿದೆ.

ಒಂದು ದಿನ, ಕೇಂದ್ರ ಸರ್ಕಾರ ಕೋವಿಡ್ ಲಸಿಕೆ ನೀತಿಯನ್ನು ಏಕಪಕ್ಷೀಯವಾಗಿ ಪ್ರಕಟಿಸುತ್ತದೆ. ರಾಜ್ಯಗಳು ಕೇಂದ್ರದಿಂದ ಲಸಿಕೆ ಪಡೆದು ಅದಕ್ಕೆ ಹಣ ಪಾವತಿಸಬೇಕು ಎಂಬುದು ಅದರ ನಿರ್ದೇಶನ. ಇನ್ನೊಂದು ದಿನ, ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಯನ್ನು ದೆಹಲಿಗೆ ಕರೆಸಿಕೊಂಡು ಅವರ ನಿವೃತ್ತಿಯ ದಿನವೇ ಕೆಲಸಕ್ಕೆ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗುತ್ತದೆ. ಇನ್ನೊಂದು ಸಲ, ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ದೆಹಲಿ ಸರ್ಕಾರದ 'ಮನೆ ಬಾಗಿಲಿಗೆ ರೇಷನ್' ಯೋಜನೆಯ ಜಾರಿಯನ್ನು ಸ್ಥಗಿತಗೊಳಿಸುತ್ತದೆ. ಇದ್ದಕ್ಕಿದ್ದಂತೆ, ಗ್ರಾಮೀಣ ಅಭಿವೃದ್ಧಿ ನಿಧಿಯಡಿ ನೂರಾರು ಕೋಟಿ ರೂಪಾಯಿ ಪಾವತಿಯನ್ನು ತಡೆ ಹಿಡಿದಿರುವ ಪ್ರಸಂಗವೊಂದು ಪಂಜಾಬ್ ಸರ್ಕಾರದ ಅರಿವಿಗೆ ಬರುತ್ತದೆ. ಅದು ಹೊಸ ರೈತ-ವಿರೋಧಿ ಕೃಷಿ ಕಾನೂನುಗಳಿಗೆ ಪಂಜಾಬ್ ಸರ್ಕಾರ ವಿರೋಧ ದಾಖಲಿಸಿದ್ದಕ್ಕೆ ಶಿಕ್ಷೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಸತತ ಎರಡು ದಿನ 19 ರಾಜ್ಯಗಳ ಜಿಲ್ಲಾಧಿಕಾರಿಗಳ ಸಭೆಗಳನ್ನು ನಡೆಸಿದರು. ರಾಜ್ಯ ಸರ್ಕಾರಗಳನ್ನು ಬದಿಗೊತ್ತಿ ಅವರು ಈ ಸಭೆಗಳನ್ನು ನಡೆಸಿದರು. ಇದಕ್ಕೆ ನಾನೇನೂ ಕಮ್ಮಿಯಿಲ್ಲ ಎನ್ನುವಂತೆ ಕೇಂದ್ರ ಶಿಕ್ಷಣ ಸಚಿವರು ಹೊಸ ಶಿಕ್ಷಣ ನೀತಿ ಜಾರಿ ಕುರಿತು ರಾಜ್ಯಗಳ ಶಿಕ್ಷಣ ಮಂತ್ರಿಗಳ ಪಾಲ್ಗೊಳ್ಳುವಿಕೆ ಇಲ್ಲದೇ ರಾಜ್ಯಗಳ ಶಿಕ್ಷಣ ಕಾರ್ಯದರ್ಶಿಗಳ ಸಭೆಯನ್ನು ನಡೆಸಿದ್ದಾರೆ.

ಈ ರೀತಿಯಾಗಿ ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಕೇಂದ್ರ-ರಾಜ್ಯ ಸಂಬಂಧ ಕುರಿತ ಸಾಂವಿಧಾನಿಕ ಕ್ರಮಗಳೇ ಇರಬಹುದು, ರಾಜ್ಯಗಳ ಹಣಕಾಸು ಸಂಪನ್ಮೂಲಗಳ ಲೂಟಿಯೇ ಇರಬಹುದು ಅಥವಾ ರಾಜ್ಯ ಸರ್ಕಾರಗಳ ವಿಚಾರದಲ್ಲಿ ರಾಜ್ಯಪಾಲರು ಅಥವಾ ಉಪ ರಾಜ್ಯಪಾಲರ 'ರಾಜಕೀಯ' ಹಸ್ತಕ್ಷೇಪವೇ ಇರಬಹುದು- ಈ ಪಟ್ಟಿ ಬಹಳ ದೊಡ್ಡದಿದೆ.

ಸರ್ವಾಧಿಕಾರಶಾಹೀ ಕೇಂದ್ರೀಕರಣ

ಇವೆಲ್ಲವೂ ಅಪರೂಪ ಎನ್ನಬಹುದಾದ ಪ್ರಕರಣಗಳಲ್ಲ ಅಥವಾ ಹಾದಿ ತಪ್ಪಿದ ಅಪವಾದದ ಪ್ರಕರಣಗಳೂ ಅಲ್ಲ. ಇವೆಲ್ಲವೂ ಸಂವಿಧಾನದ ಒಕ್ಕೂಟ ತತ್ವದ ಮೇಲಿನ ವ್ಯವಸ್ಥಿತ ದಾಳಿಯಾಗಿವೆ ಹಾಗೂ ಸರ್ವಾಧಿಕಾರಶಾಹೀ ಕೇಂದ್ರೀಕರಣದ ಮೂಲಕ ರಾಜ್ಯಗಳ ಹಕ್ಕುಗಳನ್ನು ತುಳಿಯುವ ದುಷ್ಟ ಕ್ರಮವೂ ಆಗಿವೆ. ಕೋವಿಡ್ ಸಾಂಕ್ರಾಮಿಕದ ನಂತರ ವಿಪತ್ತು ನಿರ್ವಹಣಾ ಕಾನೂನು ಮತ್ತು ಸಾಂಕ್ರಾಮಿಕ ರೋಗಗಳ ಕಾಯ್ದೆಯ ಜರೂರಿನ ಉಪಬಂಧಗಳನ್ನು ಬಳಸಲು ಅವಕಾಶ ಸಿಕ್ಕನಂತರ ಇದು ತ್ವರಿತಗೊಂಡಿದೆ.

ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ಮೇಲಿನ ಗಂಭೀರ ದಾಳಿ ಮೋದಿ ಸರ್ಕಾರದ ಎರಡನೇ ಅವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿ ಸಂವಿಧಾನದ 370ನೇ ವಿಧಿಯನ್ನು ತೆಗೆದು ಹಾಕುವುದರೊಂದಿಗೆ ಈ ಪ್ರಕ್ರಿಯೆ ಆರಂಭವಾಗಿದೆ. ಈ ಪ್ರವೃತ್ತಿ ಈಗ ಸರ್ವೇಸಾಮಾನ್ಯವಾಗಿದ್ದು ಕೇಂದ್ರ-ರಾಜ್ಯ ಸಂಬಂಧಗಳ ಎಲ್ಲ ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತಿದೆ.

ಮುಖ್ಯವಾಗಿ ಮೂರು ಕ್ಷೇತ್ರಗಳಲ್ಲಿ

ಒಕ್ಕೂಟವಾದದ ಸಾಂವಿಧಾನಿಕ ತತ್ವ, ಅದರ ಹಣಕಾಸು ಅಂಶಗಳು ಮತ್ತು ಕೇಂದ್ರ-ರಾಜ್ಯ ಸಂಬಂಧಗಳ ರಾಜಕೀಯ ಆಧಾರ, ಹೀಗೆ ಈ ಮೂರು ಕ್ಷೇತ್ರಗಳಲ್ಲಿ ಮುಖ್ಯವಾಗಿ ದಾಳಿ ಕೇಂದ್ರಿತವಾಗಿದೆ.

ರಾಜ್ಯಪಟ್ಟಿಯಲ್ಲಿರುವ ವಿಷಯಗಳೆಂದು ಸಂವಿಧಾನ ನಿರ್ದಿಷ್ಟಪಡಿಸಿರುವ ವಿಷಯದ ಮೇಲೆ ಕೇಂದ್ರದ ಅತಿಕ್ರಮಣವು ಮೂರು ಕೃಷಿ ಕಾನೂನುಗಳನ್ನು ಅಂಗೀಕರಿಸಿದ ರೀತಿಯಲ್ಲಿ ಪ್ರತಿಫಲನಗೊಳ್ಳುತ್ತದೆ. ಕೇಂದ್ರದ ನಡೆ, ಕೃಷಿ ಮತ್ತು ಕೃಷಿ ಮಾರುಕಟ್ಟೆ ಕುರಿತ ರಾಜ್ಯಗಳ ವಿಷಯಗಳ ಮೇಲಿನ ದಾಳಿಯಾಗಿದೆ. ದಿಲ್ಲಿ ರಾಷ್ಟ್ರ ರಾಜಧಾನಿ ಪ್ರದೇಶ (ತಿದ್ದುಪಡಿ) ಕಾನೂನನ್ನು ಈ ವರ್ಷ ಮಾರ್ಚ್‌ನಲ್ಲಿ ಅಂಗೀಕರಿಸಿದ್ದು ಸಂವಿಧಾನದಲ್ಲಿ ಅಡಕವಾಗಿರುವ ರಾಜ್ಯಗಳ ಹಕ್ಕುಗಳ ವ್ಯವಸ್ಥೆಯ ಮೇಲಿನ ನಗ್ನ ದಬ್ಬಾಳಿಕೆಯಾಗಿದೆ. ಈ ಪ್ರಕರಣದಲ್ಲಿ ಉಪ ರಾಜ್ಯಪಾಲರೇ 'ದೆಹಲಿಯ ಸರ್ಕಾರ' ಎಂದು ಬಿಂಬಿಸಲಾಯಿತು. ರಾಜ್ಯ ಶಾಸಕಾಂಗದ ಅಧಿಕಾರ ಮತ್ತು ವ್ಯಾಪ್ತಿಗಳನ್ನು ಇನ್ನಷ್ಟು ಹೊಸಕಿ ಹಾಕಲಾಯಿತು. ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿಯಂಥ ವಿಚಾರಗಳಲ್ಲಿ ರಾಜ್ಯಗಳ ನೀತಿ ನಿರೂಪಣೆ ಪ್ರಕ್ರಿಯೆಯ ಮೇಲೆ ದಾಳಿಗೆ ಮೋದಿ ಸಕಾರ ಕೇಂದ್ರ-ಪ್ರಾಯೋಜಿತ ಯೋಜನೆಗಳನ್ನು ಬಳಸಿಕೊಳ್ಳುತ್ತಿದೆ. ಈ ಪ್ರಕ್ರಿಯೆಯಂತೂ ರಭಸವಾಗಿ ಸಾಗುತ್ತಿದೆ.

ಕುಂಠಿತಗೊಂಡ ರಾಜ್ಯಗಳ ಆರ್ಥಿಕ ಅವಕಾಶ

ರಾಜ್ಯಗಳ ಆರ್ಥಿಕ ಅವಕಾಶಗಳು ಇನ್ನಷ್ಟು ಕುಂಠಿತಗೊಂಡಿವೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು ತೆರಿಗೆ ವಿಚಾರದಲ್ಲಿ ರಾಜ್ಯಗಳು ಹೊಂದಿದ್ದ ಅಲ್ಪಸ್ವಲ್ಪ ಅಧಿಕಾರವನ್ನೂ ಕಸಿದು ಕೊಂಡಿದೆ. ಇವೆಲ್ಲದರ ಮೇಲೆ, ಕಳೆದೆರಡು ವರ್ಷಗಳಿಂದ ರಾಜ್ಯಗಳಿಗೆ ಅವುಗಳ ಪರಿಹಾರದ ಪಾಲನ್ನು ಕೊಡಲು ಕೇಂದ್ರ ಸಕಾರ ನಿರಾಕರಿಸುತ್ತಿದೆ. ಜಿಎಸ್‌ಟಿ ಆದಾಯ ಕುಸಿದಿದೆ ಎಂಬ ಕುಂಟು ನೆಪವೊಡ್ಡಿ ಕೇಂದ್ರ ಹೀಗೆ ಮಾಡುತ್ತಿದೆ. ಕಳೆದ ಎರಡು ಹಣಕಾಸು ಆಯೋಗಗಳು ಕೇಂದ್ರ ಸರ್ಕಾರ ಪರಿಚಯಿಸಿದ ಬಾಹ್ಯ ಷರತ್ತುಗಳ ಅಡಿ ಕೆಲಸ ಮಾಡಿವೆ. ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಪನ್ಮೂಲಗಳ ವಿಭಜನೆಗೆ ಸಂವಿಧಾನ ದತ್ತವಾದ ಕ್ರಮಕ್ಕೆ ವ್ಯತಿರಿಕ್ತವಾಗಿ ಇನ್ನಷ್ಟು ಷರತ್ತುಗಳನ್ನು ಕಾನೂನುಬಾಹಿರವಾಗಿ ಅದು ವಿಧಿಸಿದೆ.

ಸಾಂಕ್ರಾಮಿಕದಿಂದಾಗಿ ರಾಜ್ಯಗಳ ಆರ್ಥಿಕ ಬಿಕ್ಕಟ್ಟು ತುತ್ತತುದಿ ತಲುಪಿದೆ. ರಾಜ್ಯಗಳ ಸಾಲ ತರುವ ಮಿತಿಯನ್ನು ಗಣನೀಯವಾಗಿ ಸಡಿಲಿಸಲು ಕೇಂದ್ರ ಸರ್ಕಾರ ನಿರಾಕರಿಸಿದ್ದು ಹಾಗೂ ಆರೋಗ್ಯ, ಜಿಎಸ್‌ಟಿ ಪರಿಹಾರ ಬಾಕಿ ಮತ್ತಿತರ ರಾಜ್ಯಗಳಿಗೆ ಸಲ್ಲಬೇಕಾದ ಹಣವನ್ನು ಕೊಡಲು ಕೇಂದ್ರ ನಿರಾಕರಿಸಿದ್ದರಿಂದ ಈ ಸನ್ನಿವೇಶ ನಿರ್ಮಾಣಗೊಂಡಿದೆ. ಆರೋಗ್ಯ; ಮತ್ತು ಸಾಂಕ್ರಾಮಿಕದಿಂದಾಗಿ ಹಳಿ ತಪ್ಪಿದ ಆರ್ಥಿಕತೆಯನ್ನು ಸರಿದಾರಿಗೆ ತಂದು ಸಾಮಾಜಿಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಅಧಿಕ ಹೊರೆ ರಾಜ್ಯಗಳ ಹೆಗಲಿಗೇರಿರುವ ಈ ಸಂದರ್ಭದಲ್ಲಿ ಈ ಪರಿಸ್ಥಿತಿ ಸೃಷ್ಟಿಯಾಗಿದೆ.

ಪ್ರತಿಪಕ್ಷ ಸರ್ಕಾರಗಳತ್ತ ವಕ್ರ ದೃಷ್ಟಿ

ರಾಜಕೀಯವಾಗಿ ನೋಡಿದರೆ, ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ಸರ್ಕಾರಗಳಿರುವ ರಾಜ್ಯಗಳತ್ತ ಸತತವಾಗಿ ವೈರತ್ವದ ಧೋರಣೆಯನ್ನು ಪ್ರದರ್ಶಿಸುತ್ತಾ ಬಂದಿದೆ. ಪಶ್ಚಿಮ ಬಂಗಾಳದ ಜಗದೀಪ್ ಧನ್‌ಕರ್‌ರಂಥ ರಾಜ್ಯಪಾಲರು ಕೇಂದ್ರದ ಆಳುವ ಪಕ್ಷದ ಕೈಗೊಂಬೆಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯಪಾಲರಾಗಿ ಕೆಲಸ ಮಾಡುತ್ತಿರುವ ಆರ್‌ಎಸ್‌ಎಸ್ ಮಂದಿ, ರಾಜ್ಯಪಾಲರ ಸಾಂವಿಧಾನಿಕ ಪಾತ್ರದ ಬಗ್ಗೆ ಅನಕ್ಷರಸ್ಥರಾಗಿದ್ದು ಹಿಂದುತ್ವ ಅಜೆಂಡಾ ಮುಂದೊತ್ತುವುದರಲ್ಲೇ ಹೆಚ್ಚು ಆಸಕ್ತರಾಗಿದ್ದಾರೆ.

ಕೇಂದ್ರಾಡಳಿತ ಪ್ರದೇಶಗಳ ಪಾಡಂತೂ ಇನ್ನೂ ಹೇಳತೀರದಂತಾಗಿದೆ. ಪುದುಚೇರಿಯ ಉಪ ರಾಜ್ಯಪಾಲರಾಗಿದ್ದ ಕಿರಣ್ ಬೇಡಿ, ವೈಸ್‌ರಾಯ್ ಥರ ವರ್ತಿಸುತ್ತಿದ್ದರು ಹಾಗೂ ಚುನಾಯಿತ ಸರ್ಕಾರದೊಂದಿಗೆ ಸತತವಾಗಿ ಸಂಘರ್ಷ ನಡೆಸಿದ್ದರು. ಹಿಂದಿನ ಎರಡೂ ಅಸೆಂಬ್ಲಿಗಳು ಮತ್ತು ಹೊಸ ವಿಧಾನ ಸಭೆಯಲ್ಲಿ ಉಪ ರಾಜ್ಯಪಾಲರು ನೇಮಿಸಿದ ಮೂವರೂ ಶಾಸಕರು ಬಿಜೆಪಿಯವರೇ ಆಗಿದ್ದು ಬಿಜೆಪಿ ಪಕ್ಷವನ್ನು ಮೇಲಿನಿಂದ ಕಟ್ಟುತ್ತಿರುವುದಕ್ಕೆ ಒಂದು ಉದಾಹರಣೆಯಾಗಿದೆ.

ಸರ್ವಾಧಿಕಾರಶಾಹೀ ಕೇಂದ್ರೀಕರಣದ ಹುಚ್ಚಾಟಕ್ಕೆ ಲಕ್ಷದ್ವೀಪದ ಪ್ರಸಕ್ತ ವಿದ್ಯಮಾನ ಉತ್ತಮ ಉದಾಹರಣೆಯಾಗಿದೆ. ಅಲ್ಲಿನ ಆಡಳಿತಾಧಿಕಾರಿ ಆಗಿರುವ ಬಿಜೆಪಿಗ ಅನೇಕ ಆಡಳಿತ ಕ್ರಮಗಳನ್ನು ಘೋಷಿಸಿದ್ದಾರೆ. ಅವುಗಳು ಅನುಷ್ಠಾನಗೊಂಡರೆ, ಲಕ್ಷದ್ವೀಪದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬಂಧ ನಾಶವಾಗುತ್ತದೆ. ಅಲ್ಲಿನ ಮುಸ್ಲಿಮರನ್ನು ಬಹುಸಂಖ್ಯಾತರ ದಬ್ಬಾಳಿಕೆಗೆ ಒಳಪಡಿಸಲಾಗುತ್ತದೆ.

ಒಕ್ಕೂಟತತ್ವ ಮತ್ತು ಇಂತಹ ವ್ಯವಸ್ಥೆಯ ಜೀವಾಳವಾದ ವೈವಿಧ್ಯತೆಯ ಮೇಲಿನ ಈ ದಾಳಿಯು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ಮೇಲಿನ ಒಟ್ಟಾರೆ ಆಕ್ರಮಣದ ಭಾಗವಾಗಿದೆ. ಹೀಗಾಗಿ ಇದನ್ನೆಲ್ಲ ವಿರೋಧಿಸಿ ಹೋರಾಡಬೇಕಿದೆ. ಪ್ರತಿಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರಗಳು ಈ ಹೋರಾಟದ ಮುಂಚೂಣಿಯಲ್ಲಿ ಇರಬೇಕು. ವಿನಾಶಕಾರಿ ಲಸಿಕೆ ನೀತಿಯ ವಿರುದ್ಧ ಬಹುತೇಕ ಪ್ರತಿಪಕ್ಷ ಆಡಳಿತದ ರಾಜ್ಯಗಳು ದನಿಯೆತ್ತಿವೆ. ಇದು ಮೋದಿ ಸರ್ಕಾರ ಲಸಿಕೆ ನೀತಿಯನ್ನು ಬದಲಾಯಿಸಿಕೊಳ್ಳುವಂತೆ ಒತ್ತಡ ಹೇರುವಲ್ಲಿ ಯಶಸ್ವಿಯಾಗಿದೆ. ಜಿಎಸ್‌ಟಿ ಪರಿಹಾರದ ವಿಚಾರದಲ್ಲಿ ಕೂಡ ಪ್ರತಿಪಕ್ಷಗಳ ಸರ್ಕಾರಗಳು ಸಮನ್ವಯದಿಂದ ಕೆಲಸ ಮಾಡುವುದು ಅಗತ್ಯವಾಗಿದೆ.

ಆದರೆ ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ರಕ್ಷಣೆಗೆ ಪ್ರತಿಪಕ್ಷಗಳ ರಾಜ್ಯ ಸರ್ಕಾರಗಳ ನಡುವೆ ಹೆಚ್ಚಿನ ಸಮನ್ವಯ ಬೇಕಾಗುತ್ತದೆ. ಈಗಲೂ ಒಡಿಶಾ, ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಸರ್ಕಾರಗಳು ಅರೆ ಮನಸ್ಸಿನಿಂದಿದ್ದು ಒಂದು ದೃಢ ನಿಲುವು ತಳೆಯಲು ಹಿಂಜರಿಯುತ್ತಿವೆ. ಒಕ್ಕೂಟತತ್ವದ ನಾಶ ಮತ್ತು ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸುವುದು ಈ ಪಕ್ಷಗಳ ಹಿತಕ್ಕೇ ಮಾರಕವಾಗುತ್ತದೆ ಎನ್ನುವುದನ್ನು ಈ ಮೂರು ಸರ್ಕಾರಗಳನ್ನು ಮುನ್ನಡೆಸುತ್ತಿರುವ ಪ್ರಾದೇಶಿಕ ಪಕ್ಷಗಳು ಮನವರಿಕೆ ಮಾಡಿಕೊಳ್ಳಬೇಕಿದೆ.

ಒಕ್ಕೂಟತತ್ವ ಎಂಬುದು ಅವಿಭಾಜ್ಯ ಕೂಡ. ದೆಹಲಿಯನ್ನು ಒಂದು ವೈಭವೀಕೃತ ಮುನಿಸಿಪಾಲಿಟಿಯ ಮಟ್ಟಕ್ಕೆ ಇಳಿಸಲು ಕಾನೂನನ್ನು ತಿದ್ದುಪಡಿ ಮಾಡಿದಾಗ, ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿದ ಕೇಂದ್ರ ಸರ್ಕಾರದ ಕ್ರಮಕ್ಕೆ ನೀಡಿದ್ದ ಬೆಂಬಲ ತಪ್ಪು ಎನ್ನುವುದನ್ನು ಅರವಿಂದ್ ಕೇಜ್ರಿವಾಲ್ ಹಾಗೂ ಆಮ್ ಆದ್ಮಿ ಪಕ್ಷ ಮನವರಿಕೆ ಮಾಡಿಕೊಳ್ಳಬೇಕಿತ್ತು. ಅದೇ ರೀತಿ, ಕಾಂಗ್ರೆಸ್ ರಾಜ್ಯ ಸರ್ಕಾರಗಳು ಕೂಡ ದಾಳಿಗೆ ತುತ್ತಾಗುತ್ತಿದ್ದು ಆ ಪಕ್ಷ ಕೂಡ ಹಿಂದೆಲ್ಲ ಚುನಾಯಿತ ಸರ್ಕಾರಗಳನ್ನು ಉರುಳಿಸಲು ಸಂವಿಧಾನದ 356ನೇ ವಿಧಿಯನ್ನು ತಾನು ದುರುಪಯೋಗ ಪಡಿಸಿಕೊಂಡಿದ್ದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಹಾಗೂ ಪಾಠ ಕಲಿಯಬೇಕಿದೆ.

ಇನ್ನೂ ವಿಶಾಲ ತಳಹದಿಯಲ್ಲಿ ನೋಡಿದರೆ, ಪ್ರತಿಪಕ್ಷಗಳ ರಾಜ್ಯ ಸರ್ಕಾರಗಳು ಮಾತ್ರವಲ್ಲದೆ ಎಲ್ಲ ಪ್ರತಿಪಕ್ಷಗಳು ಒಗ್ಗಟ್ಟಾಗಿ ಒಕ್ಕೂಟತತ್ವದ ರಕ್ಷಣೆ, ರಾಜ್ಯಗಳ ಹಕ್ಕುಗಳ ರಕ್ಷಣೆ ಮತ್ತು ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಗೆ ಕೇಂದ್ರ-ರಾಜ್ಯಗಳ ಸಂಬಂಧ ಕುರಿತ ಶ್ರೀನಗರ ಸಮಾವೇಶದ ನಿರ್ಣಯದಂತಿರುವ ಒಂದು ವೇದಿಕೆಯನ್ನು ರೂಪಿಸಿಕೊಳ್ಳಬೇಕಾಗಿದೆ. ಇದು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಸಮಕಾಲಿಕಗೊಳಿಸಿ ಕೊಂಡಿರಬೇಕು. ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ರಕ್ಷಣೆ ಸರ್ವಾಧಿಕಾರಶಾಹಿಗೆ ವಿರೋಧ ಮತ್ತು ಪ್ರಜಾಪ್ರಭುತ್ವಕ್ಕಾಗಿನ ಹೋರಾಟದ ಅವಿಭಾಜ್ಯ ಅಂಗವಾಗಿದೆ.

ಅನು: ವಿಶ್ವ

ಬ್ಲ್ಯಾಕ್ ಫಂಗಸ್ ಸುತ್ತ ಹಲವು ಪ್ರಶ್ನೆಗಳು



ಬ್ಲ್ಯಾಕ್ ಫಂಗಸ್ ಯಾ ಕಪ್ಪು ಶಿಲೀಂಧ್ರ (ಮ್ಯುಕೋರ್ ಮೈಕೋಸಿಸ್) ಎಂಬ ಸೋಂಕು – ಹತೋಟಿ ಮೀರಿದ ಸಕ್ಕರೆ ಕಾಯಿಲೆ ರಕ್ತದ ಕ್ಯಾನ್ಸರ್, ಅಸ್ಥಿ ಮಜ್ಜೆ, ಕಿಡ್ನಿಯಾ ಇತರ ಅಂಗಗಳ ಕಸಿ, ಯುದ್ಧದಲ್ಲಿ ಗಾಯಗೊಂಡಿದ್ದ ಅಥವಾ ಇತರ ಯಾವುದೇ ಕಾರಣಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ, ದೀರ್ಘಕಾಲದ ತನಕ ಉಪಯೋಗಿಸುವ ‘ಸ್ಟೀರೊಯ್ಡ್, ಕ್ಯಾನ್ಸರ್ ಕಾಯಿಲೆಯ ಚಿಕಿತ್ಸೆಗೆ ನೀಡುವ ‘ಕೀಮೊಥಿರಪಿ’ – ಮೊದಲಾದವುಗಳಿಂದ ದೇಹದ ರೋಗನಿರೋಧಕ ಶಕ್ತಿ ಕುಗ್ಗಿದವರಲ್ಲಿ ಪತಿಶತ 0.1 ರಿಂದ 2 ರಷ್ಟು ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಕೋವಿಡ್–19 ರ ಎರಡನೇ ಅಲೆಯೊಂದಿಗೆ ಈ ಸೋಂಕಿನ ಸಂಖ್ಯಾ ಪ್ರಮಾಣ ಒಮ್ಮೆಗೇ ಉಲ್ಬಣಿಸಿದೆ. ಹಾಗಾದರೆ ಇದಕ್ಕೆ ಕಾರಣಗಳೇನು? ಈ ಕಾಯಿಲೆಯ ಗುಣ ಲಕ್ಷಣಗಳೇನು? ಈ ಸೋಂಕನ್ನು ಪತ್ತೆ ಹಚ್ಚುವುದು ಹೇಗೆ? ಚಿಕಿತ್ಸೆ ಏನು? ಈ ಪ್ರಶ್ನೆಗಳಿಗೆ ಉತ್ತರಿಸುವುದರೊಂದಿಗೆ, ಈ ಸೋಂಕು ಹರಡದು ಎನ್ನುವುದನ್ನು ಈ ಲೇಖನ ತಿಳಿಸುತ್ತದೆ.

—ಡಾ. ಸುಶೀಲಾ ಕೆ.

‘ಮ್ಯುಕೋರ್’ ಎನ್ನುವುದು ಫಂಗಸ್ ಜಾತಿಗೆ ಸೇರಿದ ಒಂದು ಸೂಕ್ಷ್ಮಾಣು ಜೀವಿ. ವಾತಾವರಣದಲ್ಲಿನ ಗಾಳಿ, ಮಣ್ಣು, ಕೊಳೆಯುತ್ತಿರುವ ಎಲೆ, ಗಿಡ, ಹಣ್ಣು ತರಕಾರಿ, ಗೊಬ್ಬರ ಮೊದಲಾವುದರಲ್ಲಿ ಹರಡಿಕೊಂಡಿರುವ ಇವುಗಳು ಮಾನವನ ಸಂಪರ್ಕಕ್ಕೆ ನಿರಂತರವಾಗಿ ಬರುತ್ತಿರುತ್ತವೆ. ಮುಖ್ಯವಾಗಿ ಉಸಿರಾಡುವ ಗಾಳಿಯ ಮೂಲಕ ಮಾನವನ ದೇಹ ಪ್ರವೇಶಿಸುವ ಇವುಗಳು, ಇವುಗಳಿಂದ ಕಲುಷಿತಗೊಂಡ ಆಹಾರದ ಮೂಲಕವೂ ದೇಹದ ಗಾಯದ ಮೂಲಕವೂ ದೇಹ ಪ್ರವೇಶಿಸುವ ಸಾಧ್ಯತೆ ಇದೆ. ಆರೋಗ್ಯವಂತ ದೇಹಕ್ಕೆ ನಿರುಪದ್ರವಿಗಳಾಗಿರುವ ಇವುಗಳು ರೋಗ ನಿರೋಧಕ ಶಕ್ತಿ ಕುಸಿದ ದೇಹದಲ್ಲಿ ತೀವ್ರತರದ ಸೋಂಕನ್ನುಂಟು ಮಾಡಿ ಪ್ರಾಣಾಪಾಯ ಉಂಟುಮಾಡಬಹುದು.

ಬ್ಲ್ಯಾಕ್ ಫಂಗಸ್ ಯಾ ಕಪ್ಪು ಶಿಲೀಂಧ್ರ (ಮ್ಯುಕೋರ್ ಮೈಕೋಸಿಸ್) ಎಂಬ ಈ ಸೋಂಕು – ಹತೋಟಿ ಮೀರಿದ ಸಕ್ಕರೆ ಕಾಯಿಲೆ ರಕ್ತದ ಕ್ಯಾನ್ಸರ್, ಅಸ್ಥಿ ಮಜ್ಜೆ, ಕಿಡ್ನಿಯಾ ಇತರ ಅಂಗಗಳ ಕಸಿ, ಯುದ್ಧದಲ್ಲಿ ಗಾಯಗೊಂಡಿದ್ದ ಅಥವಾ ಇತರ ಯಾವುದೇ ಕಾರಣಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ, ಧೀರ್ಘಕಾಲದ ತನಕ ಉಪಯೋಗಿಸುವ ‘ಸ್ಟೀರೊಯ್ಡ್, ಕ್ಯಾನ್ಸರ್ ಕಾಯಿಲೆಯ ಚಿಕಿತ್ಸೆಗೆ ನೀಡುವ ‘ಕೀಮೊಥಿರಪಿ’ – ಮೊದಲಾದವುಗಳಿಂದ ದೇಹದ ರೋಗನಿರೋಧಕ ಶಕ್ತಿ ಕುಗ್ಗಿದವರಲ್ಲಿ, ಪತಿಶತ 0.1 ರಿಂದ 2 ರಷ್ಟು ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಸಮಾಜದ ಇತರರಲ್ಲಿ ಈ ಸೋಂಕಿನ ಪ್ರಮಾಣ ಇರುತ್ತಿದ್ದದ್ದು ಬಹಳ ನಗಣ್ಯ, ಸಾಧಾರಣ ಹತ್ತು ಸಾವಿರಕ್ಕೆ 1.4 ಪ್ರಮಾಣದಲ್ಲಿ. ಮೊದಲನೆಯ ಅಲೆಯ ಕಾಲದಲ್ಲಿ ಆಮ್ಲಜನಕ ಪಡೆದು ತೀವ್ರ ನಿಗಾ ಘಟಕದಲ್ಲಿದ್ದು ಗುಣಮುಖರಾದ ಕೋವಿಡ್–19 ರೋಗಿಗಳಲ್ಲಿ ಕೆಲವೇ ಕೆಲವರು ಕಣ್ಣಿನ ದೃಷ್ಟಿ ಕಳೆದುಕೊಂಡು ನಂತರ ಮರಣ ಹೊಂದಿದ್ದರೂ, ಆಗ ಈ ಸೋಂಕು ಮ್ಯುಕೋರ್ ಫಂಗಸ್‌ನಿಂದ ಆಗಿರಬಹುದೆಂದು ತಿಳಿದಿರಲಿಲ್ಲ. ಆದರೆ ಕೋವಿಡ್–19 ರ ಎರಡನೇ ಅಲೆಯೊಂದಿಗೆ ಈ ಸೋಂಕಿನ ಸಂಖ್ಯಾ ಪ್ರಮಾಣ ಒಮ್ಮೆಗೇ ಉಲ್ಬಣಿಸಿದೆ.

ಕಾರಣಗಳೇನು?

ಹಾಗಾದರೆ ಇದಕ್ಕೆ ಕಾರಣಗಳೇನು? ಎನ್ನುವ ಪ್ರಶ್ನೆ ಮೂಡುವುದು ಸಹಜ.

1) ಕೋವಿಡ್–19ರ ಕಾಯಿಲೆಯಲ್ಲಿ ಚಿಕಿತ್ಸೆಯಲ್ಲಿ ಉಪಯೋಗಿಸುವ ಸ್ಟೀರೋಯ್ಡ್ ಇದಕ್ಕೆ ಕಾರಣವಾಗಿರಬಹುದೆ? – ಇದಕ್ಕೆ ಉತ್ತರ ‘ಹೌದು’ ಹಾಗೂ ‘ಇಲ್ಲ’. ಕೋವಿಡ್–19ರ ರೋಗಿಗಳಲ್ಲಿ ರೋಗಿಗಳಲ್ಲಿ ಮೊದಲ ವಾರದಲ್ಲಿ ವೈರಸ್‌ಗಳು ದೇಹದಲ್ಲಿ ಶೀಘ್ರವಾಗಿ ಅಭಿವೃದ್ಧಿ ಹೊಂದುವ ಕಾಲ. ಅಂತಹ ಸಮಯದಲ್ಲಿ ಉಸಿರಾಟದ ತೊಂದರೆ ಕಾಣಿಸಿಕೊಳ್ಳದಿದ್ದಾಗ, ರಕ್ತದಲ್ಲಿನ ಆಮ್ಲಜನಕದ ಸಾಂದ್ರತೆ ಕುಸಿಯದಿದ್ದಾಗ ಅನಾವಶ್ಯಕವಾಗಿ ಈ ಸ್ಟೀರೋಯ್ಡ್ ರೋಗಿಗೆ ನೀಡುವುದು ವೈರಸ್‌ಗಳ ಸಂಖ್ಯಾಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತದೆ. ಆದರೆ ವೈರಸ್‌ಗಳ ಅಭಿವೃದ್ಧಿ ಕುಂಠಿತವಾಗುವ ಮುಂದಿನ ದಿನಗಳಲ್ಲಿ ಉಸಿರಾಟದ ತೊಂದರೆ ಕಾಣಿಸಿಕೊಂಡು, ಆಮ್ಲಜನಕದ ಸಾಂದ್ರತೆ ಕುಸಿದಾಗ ಜೀವ ಉಳಿಸಲು ಕಡಿಮೆ ಪ್ರಮಾಣದ 5 ರಿಂದ 10 ದಿನಗಳ ಕಾಲದ ಈ ಸ್ಟೀರೋಯ್ಡ್‌ಗಳ ಉಪಯೋಗ ಅವಶ್ಯಕ. ಬರೀ ಕಡಿಮೆ ಪ್ರಮಾಣದ ಅಲ್ಪಕಾಲದ ಸ್ಟೀರೋಯ್ಡ್‌ಗಳ ಉಪಯೋಗ ಅವಶ್ಯಕ. ಕಡಿಮೆ ಪ್ರಮಾಣದ ಅಲ್ಪಕಾಲದ ಸ್ಟೀರೋಯ್ಡ್‌ಗಳ ಉಪಯೋಗದಿಂದ ದೇಹದ ರೋಗ ನಿರೋಧಕ ಶಕ್ತಿ ಕುಸಿಯದು. ಆದರೆ ರೋಗಿಯ ಸ್ಥಿತಿ ಗಂಭೀರವಾದಾಗ ಹೆಚ್ಚಿನ ಪ್ರಮಾಣದಲ್ಲಿ ಸ್ಟೀರೋಯ್ಡ್ ಬಳಸಬೇಕಾಗಬಹುದು. ಆದರೆ ಇದರೊಂದಿಗೆ ಇತರ ಹಲವು ಕಾರಣಗಳೂ ಸೇರಿಕೊಂಡಾಗ ದೇಹದ ರೋಗನಿರೋಧಕ ಶಕ್ತಿ ಕುಗ್ಗುವುದು ಸಹಜ.



2) ಹತೋಟಿಗೆ ಮೀರಿದ ಸಕ್ಕರೆ ಕಾಯಿಲೆ ಕೋವಿಡ್ ರೋಗಕ್ಕೆ ಕಾರಣವಾದ ಸಾರ್ಸ್ ಕೋವ್–2 ವೈರಾಣು, ರಕ್ತದಲ್ಲಿ ಸಕ್ಕರೆ ಅಂಶವನ್ನು ಹತೋಟಿಯಲ್ಲಿಡುವ ‘ಇನ್ಸುಲಿನ್’ ಹಾರ್ಮೋನ್ ತಯಾರಿಸುವ ‘ಪ್ಯಾಂಕ್ರಿಯಸ್’ ಗ್ರಂಥಿಯ ಕೋಶಗಳನ್ನು ನಾಶಗೊಳಿಸುವುದು ಕಂಡು ಬಂದಿದೆ. ಇದರಿಂದಾಗಿ ಕೋವಿಡ್ ಸೋಂಕಿಗಿಂತ ಮೊದಲೇ ಸಕ್ಕರೆ ಕಾಯಿಲೆ ಇದ್ದರೆ, ಅದು ಕೋವಿಡ್ ಕಾಲದಲ್ಲಿ ಉಲ್ಬಣಗೊಳಬಹುದು ಹಾಗೂ ಸಕ್ಕರೆ ಕಾಯಿಲೆ ಸಮಸ್ಯೆಯೇ ಇರದಿದ್ದ ಕೋವಿಡ್ ರೋಗಿಗಳಲ್ಲಿ, ಸಕ್ಕರೆ ಕಾಯಿಲೆ ಮೊದಲ ಬಾರಿ ಕಂಡು ಬರಬಹುದು. ರಕ್ತದಲ್ಲಿ ಸಕ್ಕರೆ ಪ್ರಮಾಣ ಹೆಚ್ಚಿದಾಗ ದೇಹ ಸುಲಭವಾಗಿ ಮ್ಯುಕೋರ್ ಮೈಕೋಸಿಸ್ ಸಹಿತ ಎಲ್ಲಾ ತರಹದ ಸೋಂಕಿಗೆ ಒಳಗಾಗುತ್ತದೆ.

3) ಕೋವಿಡ್ ಕಾಯಿಲೆಯ ದೇಹದ ರೋಗ ನಿರೋಧಕ ಶಕ್ತಿಯಲ್ಲಿ ಪ್ರಮುಖ ಪಾತ್ರ ವಹಿಸುವ ‘ಲಿಂಫ್’ ಕಣಗಳ ಉತ್ಪಾದನೆಯನ್ನು ಕುಂಠಿತಗೊಳಿಸುವುದು ಕಂಡುಬಂದಿದೆ.

4) ಕೋವಿಡ್ ಬಂದಾಗ ಕೆಲವರ ದೇಹದಲ್ಲಿ ಅಂಗಾಂಗಗಳಲ್ಲಿ ‘ಫೆರಟೀನ್’ ಎನ್ನುವ ಕಬ್ಬಿಣದ ಪ್ರೊಟೀನಿನ ಅಂಶದ ಹೆಚ್ಚಳವಾಗಬಹುದು. ಇದು ಮೈಕರ್ ಮ್ಯುಕೊಸಿಸ್‌ಗೆ ಅತ್ಯುತ್ತಮ ಆಹಾರವಾಗಿದ್ದು ಅದರ ಸಂಖ್ಯಾಭಿವೃದ್ಧಿಗೆ ಸಹಕರಿಸುತ್ತದೆ.

5) ಕೋವಿಡ್–19 ರೋಗಿಗಳಲ್ಲಿ ಆಮ್ಲಜನಕದ ಕೊರತೆ ಕಾಣಿಸಿಕೊಂಡಾಗ ನೀಡುವ ಆಮ್ಲಜನಕದೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇರಿಕೊಂಡ ಈ ಫಂಗಸ್ ಮೊದಲೇ ರೋಗ ನಿರೋಧಕ ಶಕ್ತಿ ಕುಗ್ಗಿದ ರೋಗಿಗಳಲ್ಲಿ ಮ್ಯುಕರ್ ಮೈಕೋಸಿಸ್ ಸೋಂಕಿಗೆ ಕಾರಣವಾಗಿರಬಹುದೆ? ನಮ್ಮ ನಲ್ಲಿಗಳಲ್ಲಿ ಸರಬರಾಜಾಗುತ್ತಿರುವ ನೀರಿನ ಗುಣಮಟ್ಟ ಚೆನ್ನಾಗಿಲ್ಲದಿರುವುದು ತಿಳಿದ ವಿಚಾರ. ರೋಗಿಗೆ ನೀಡುವ ಆಮ್ಲಜನಕವನ್ನು ತೇವಾಂಶಭರಿತಗೊಳಿಸಲು ಶುದ್ಧ ನೀರಿನ ಬದಲು, ನಳ್ಳಿ ನೀರಿನ ಉಪಯೋಗ, ಅಶುದ್ಧವಾದ ಆಮ್ಲಜನಕದ ಸಿಲಿಂಡರ್ ಹಾಗೂ ಸರಿಯಾಗಿ ಶುಚಿಗೊಳಿಸದ ಆಮ್ಲಜನಕ ನೀಡುವ ಮೂಗಿನ ನಳಿಗೆಗಳು, ಮಾಸ್ಕ್ ಗಳು, ವೆಂಟಿಲೇಟರ್‌ಗಳು ‘ಮ್ಯುಕೋರ್’ ಫಂಗಸ್ಸನ್ನು ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ರೋಗಿಯ ದೇಹಕ್ಕೆ ನೀಡುತ್ತಿರಬಹುದೆ? ಹಾಗೂ ಹೆಚ್ಚಿನ ಸಾಂದ್ರತೆಯಿಂದ ಮೂಗಿನೊಳಗೆ ಪ್ರವೇಶಿಸುವ ಆಮ್ಲಜನಕ ಮೂಗಿನ ಒಳಭಾಗದ ಮೇಲ್ಪದರನ್ನು ಘಾಸಿಗೊಳಿಸಿ ಈ ಫಂಗಸ್‌ಗಳ ದಾಳಿಗೆ ಸಹಕರಿಸುತ್ತಿರಬಹುದೆ? ಇದೇ ಕೋವಿಡ್–19 ರ 2ನೇ ಅಲೆಯಲ್ಲಿ ರೋಗದ ತೀವ್ರತೆಯಿಂದಾಗಿ ಸ್ಟೀರೋಯ್ಡ್ ಹಾಗೂ ಆಮ್ಲಜನಕದ ಉಪಯೋಗ ಹೆಚ್ಚಿರುವುದು ಕಂಡುಬಂದಿದೆ. ಹಾಗಾಗಿ ಮೇಲೆ ಹೇಳಿದ ಕಾರಣಗಳೆಲ್ಲಾ ‘ಮ್ಯುಕೊರ್ ಮೈಕೋಸಿಸ್’ ಕಾಯಿಲೆಯ ಹೆಚ್ಚಳಕ್ಕೆ ಕಾರಣವಾಗಿರಬಹುದೆ ಅಥವಾ ಇನ್ನೇನಾದರು ಪ್ರಬಲ ಕಾರಣಗಳು ಇವುಗಳೊಂದಿಗೆ ಸೇರಿಕೊಂಡಿವೆಯೋ ಎನ್ನುವುದು, ಈ ವಿಚಾರದಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ಅಧ್ಯಯನದಿಂದ ಬೆಳಕಿಗೆ ಬರಬೇಕಾಗಿದೆ.

ಆದರೆ ಮ್ಯುಕೋರ್ ಮೈಕೋಸಿಸ್ ರೋಗಿಗಳಿಂದ ಇತರ ಆರೋಗ್ಯವಂತ ವ್ಯಕ್ತಿಗಳಿಗೆ ಈ ಸೋಂಕು ಹರಡದು ಎನ್ನುವುದು ಗಮನಿಸಬೇಕಾದ ವಿಷಯ.

ಕಾಯಿಲೆಯ ಗುಣ ಲಕ್ಷಣಗಳೇನು?

ಉಸಿರಾಟದ ಗಾಳಿಯ ಮೂಲಕ ಮೂಗೊಳಗೆ ಪ್ರವೇಶಿಸುವ ಈ ಫಂಗಸ್ – ಮೂಗಿನ ಒಳಭಾಗ, ಸೈನಸ್‌ಗಳು, ಬಾಯಿ, ಕಣ್ಣುಗಳಿಗೆ – ಹರಡುತ್ತಾ ಅಲ್ಲಿ ಸೋಂಕನ್ನುಂಟು ಮಾಡುತ್ತವೆ. ಮುಂದೆ ಅಲ್ಲಿಂದ ಮಿದುಳಿಗೆ ಲಗ್ಗೆ ಇಡುತ್ತವೆ. ಹೆಚ್ಚಿನ ರೋಗಿಗಳಲ್ಲಿ ಈ ಸೋಂಕು ಹರಡುವ ಪ್ರಮುಖ ವಿಧಾನ–ಇದಾಗಿದೆ.

ಮೂಗಿನಲ್ಲಿ ಉಸಿರಾಟಕ್ಕೆ ತೊಂದರೆ, ಅಲ್ಪ ಸ್ವಲ್ಪ ರಕ್ತಸ್ರಾವ, ತಲೆ ನೋವು, ಮುಖದ ಒಂದು ಭಾಗದಲ್ಲಿ ನೋವು, ಹಲ್ಲು ನೋವು, ಹಲ್ಲುಗಳು ಸಡಿಲಗೊಳ್ಳುವಿಕೆ, ದೃಷ್ಟಿ ಮಸಕಾಗುವಿಕೆ; ಒಂದು ವಸ್ತು ಎರಡಾಗಿ ಕಾಣಿಸುವುದು. ಪ್ರಾರಂಭದ ಲಕ್ಷಣ. ಮುಂದೆ ಮುಖದ ಒಂದು ಭಾಗ ಊದಿಕೊಳ್ಳುವುದು, ಅಲ್ಲಿಗೆ ಚರ್ಮ ಕಂದು ಬಣ್ಣಕ್ಕೆ ತಿರುಗುವುದು, ಕಣ್ಣು ಗುಡ್ಡೆಗಳು ಊದಿಕೊಳ್ಳುವುದು ಹಾಗೂ ಅವುಗಳ ಚಲನೆಯಲ್ಲಿ ತೊಂದರೆ, ಕಣ್ಣು ರೆಪ್ಪೆಗಳ ಮರಗಟ್ಟುವಿಕೆ (ptosis), ಮೂಗಿನಿಂದ ಕಂದು ಬಣ್ಣದ ಸ್ರಾವ ಕಾಣಿಸಿಕೊಳ್ಳುವುದು ಹಾಗೂ ಮಾನಸಿಕ ಗೊಂದಲಕ್ಕೊಳಗಾಗುವುದು ಮುಂದುವರಿಯುತ್ತಿರುವ ಈ ಕಾಯಿಲೆಯ ಲಕ್ಷಣ. ಮುಂದೆ ರಕ್ತಕ್ಕೆ ಸೇರುವ ಈ ಸೋಂಕು ಹಲವರಲ್ಲಿ ಶ್ವಾಸಕೋಶ ಮತ್ತಿತರ ಅಂಗಗಳಿಗೆ ವ್ಯಾಪಿಸಬಹುದು. ಎದೆನೋವು, ಉಸಿರಾಟದ ತೊಂದರೆ, ಉಸಿರು ಕಟ್ಟುವುದು, ಇವು ಶ್ವಾಸಕೋಶಕ್ಕೆ ಈ ಸೋಂಕು ತಗಲಿದಾಗ ಕಾಣಿಸುವ ರೋಗ ಲಕ್ಷಣಗಳು. ಈ ಸೋಂಕು ಚರ್ಮ ಹಾಗೂ ಜೀರ್ಣಾಂಗಗಳನ್ನೂ ಕಾಡಬಹುದಾದರೂ ಇಂತಹ ಸಾಧ್ಯತೆ ಬಹಳ ಕಡಿಮೆ. ದೇಶದಲ್ಲೇ ಪ್ರಪ್ರಥಮ ಬಾರಿ ಕರ್ನಾಟಕದಲ್ಲಿನ ವ್ಯಕ್ತಿಯೊಬ್ಬರಲ್ಲಿ ಚರ್ಮಕ್ಕೆ ಈ ಸೋಂಕು ತಾಗಿರುವ ಬಗ್ಗೆ ಇತ್ತೀಚೆಗೆ ವರದಿಯಾಗಿದೆ.

ಈ ರೋಗವನ್ನು ಪತ್ತೆ ಹಚ್ಚುವುದು ಹೇಗೆ?

ಈ ರೋಗ ಪತ್ತೆಹಚ್ಚಲು ರೋಗಿಗಳಲ್ಲಿ ಈ ಕಾಯಿಲೆಯ ವಿವರವಾದ ಗುಣ ಲಕ್ಷಣಗಳ ಮಾಹಿತಿ ಪಡೆಯುವುದು; ಮೂಗಿನೊಳಗಿನಿಂದ ತೆಗೆದ ಮಾದರಿಯ ಪರೀಕ್ಷೆ, ಹಲವಾರು ವಿಧದ ರಕ್ತ ಪರೀಕ್ಷೆಗಳು, ಮೂಗಿನ ‘ಎಂಡೊಸ್ಕೊಪಿ’, ‘ಬಯೋಪ್ಸಿ’ ಮೊದಲಾದವುಗಳು ಅಗತ್ಯ. ಕೆಲವೊಮ್ಮೆ ‘ಎಮ್.ಆರ್.ಐ’ ಸ್ಕ್ಯಾನ್ ಯಾ ಮೂಗು ಮತ್ತದರ ಅಕ್ಕಪಕ್ಕದಲ್ಲಿರುವ ‘ಸೈನಸ್’ ನ ‘ಸಿ.ಟಿ.’(C.T.) ಸ್ಕ್ಯಾನ್‌ನ ಅವಶ್ಯಕತೆ ಬರಬಹುದು.

ಚಿಕಿತ್ಸೆ, ಮುಂಜಾಗ್ರತಾ ಕ್ರಮಗಳು:

ರೋಗ ನಿರೋಧಕ ಶಕ್ತಿಯನ್ನು ಕುಂಠಿತ ಕಡಿತಗೊಳಿಸುವ ಔಷಧಿ ನೀಡುತ್ತಿದ್ದರೆ ಅದರ ಉಪಯೋಗ ನಿಲ್ಲಿಸುವುದು. ಸೂಕ್ತ ವಿಧದ ಶಸ್ತ್ರ ಚಿಕಿತ್ಸೆ ಹಾಗೂ ಅದರೊಂದಿಗೆ 4 ರಿಂದ 6 ವಾರಗಳ ತನಕ ಹೆಚ್ಚಿದ ಪ್ರಮಾಣದಲ್ಲಿ ನೀಡುವ ಆ್ಯಂಪೋಟೆರಿಸಿನ್–ಬಿ ಎನ್ನುವ ಔಷಧದ ಉಪಯೋಗ, ಸಕ್ಕರೆ ಕಾಯಿಲೆಯ ಹತೋಟಿ, ಯಾವುದೇ ಕಾರಣಕ್ಕಾಗಿ ದೇಹದ ಈ ಕಾಯಿಲೆ ವಾಸಿಯಾಗಲು ನೀಡಬೇಕಾದ ಚಿಕಿತ್ಸೆ. ಸೂಕ್ತ ಚಿಕಿತ್ಸೆ ದೊರೆತರೆ ಪ್ರತಿಶತ 50 ರೋಗಿಗಳು ಈ ಕಾಯಿಲೆಯಿಂದ ಗುಣಮುಖರಾಗುವ ಸಾಧ್ಯತೆ ಇದೆ.

ಆದರೆ ನಮ್ಮ ದೇಶದಲ್ಲಿ ಆ್ಯಂಪೊಟೆರಿಸಿನ್–ಬಿ ಔಷಧದ ಕೊರತೆ ಬಹಳ ಗಂಭೀರವಾಗಿದೆ. ಹಾಗೂ ಇದು ಅತ್ಯಂತ ದುಬಾರಿ ಬೆಲೆಯುಳ್ಳದ್ದಾಗಿದೆ.

‘ಮ್ಯುಕರ್’ ಸೋಂಕು ಬಾರದಂತೆ ತಡೆಗಟ್ಟುವುವಲ್ಲಿ ತೆಗೆದುಕೊಳ್ಳುವ ಮುಂಜಾಗ್ರತಾ ಕ್ರಮಗಳು–

ಕೋವಿಡ್ ರೋಗಿಗಳು ಕಾಯಿಲೆಯ ಸಮಯದಲ್ಲಿ ಹಾಗೂ ಕಾಯಿಲೆ ವಾಸಿಯಾದ 2 ರಿಂದ 4 ವಾರಗಳ ತನಕ ಕೆಲವು ಜಾಗರೂಕತೆಗಳನ್ನು ಅನುಸರಿಸಬೇಕು.

1) ಕೋವಿಡ್–19 ರೋಗಿಗಳನ್ನು ಧೂಳು, ಕಸ ಮೊದಲಾದವುಗಳಿಲ್ಲದ ಶುಚಿಯಾದ ಜಾಗದಲ್ಲಿ ಇರಿಸಬೇಕು. ಅವರು ಹಾಸಲು, ಹೊದಿಕೊಳ್ಳಲು, ತೊಡಲು ಉಪಯೋಗಿಸುವ ಬಟ್ಟೆಗಳನ್ನು ದಿನಂಪ್ರತಿ ಬದಲಿಸಬೇಕು. ಉತ್ತಮ ಹಾಗೂ ಶುಚಿಯಾದ ಮಾಸ್ಕ್ ಗಳನ್ನು ಅವರು ಧರಿಸಿರಬೇಕು.

2) ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ಉತ್ತಮವಾಗಿ ಹತೋಟಿಯಲ್ಲಿಡಲು ಬೇಕಾದ ಸೂಕ್ತ ಚಿಕಿತ್ಸೆ ನೀಡಬೇಕು.

3) ಮನೆಯಲ್ಲೇ ಪ್ರತ್ಯೇಕವಾಗಿ ವಾಸಿಸುವ ಹಾಗೂ ಹತೋಟಿ ಮೀರಿದ ಸಕ್ಕರೆ ಕಾಯಿಲೆಯಿಂದ ಬಳಲುವ ರೋಗಿಗಳಿಗೆ ರಕ್ತದಲ್ಲಿ ಕುಸಿದ ಆಮ್ಲಜನಕದ ಮಟ್ಟ ಹಾಗೂ ಉಸಿರಾಟದ ತೊಂದರೆ ಮೊದಲಾದ ಪ್ರಾಣಾಪಾಯದ

ಪುಟ 10 ಕ್ಕೆ

"ಎಲ್ಲರಿಗೂ ಉಚಿತ ಕೊವಿಡ್ ಲಸಿಕೆ"

ಯೂ-ಟರ್ನ್....ಅಥವ ಇನ್ನೊಂದು ಜುಮ್ಲಾ?



ಕೊನೆಗೂ ಪ್ರಧಾನ ಮಂತ್ರಿಗಳು ಪತ್ರಿಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಒತ್ತಡಗಳಿಗೆ ಮತ್ತು ಸರ್ವೋಚ್ಚ ನ್ಯಾಯಾಲಯದ ತೀಕ್ಷ್ಣ ಪ್ರಶ್ನೆಗಳಿಗೆ ಮಣಿಯಬೇಕಾಗಿ ಬಂದಿದೆ. "ಎಲ್ಲರಿಗೂ ಉಚಿತ ಲಸಿಕೆ" ಎಂದು ಹೇಳಬೇಕಾಗಿ ಬಂದಿದೆ. ಆದರೂ ಇದು ತಮ್ಮದೇ ಗೆಲುವು ಎಂದು ಬಿಂಬಿಸಲು ಪ್ರಧಾನಿಗಳ ಭಾಷಣದಲ್ಲಿ ನಡೆದಿರುವ ಪ್ರಯತ್ನ ಇದೂ ಕೂಡ ಇನ್ನೊಂದು ಜುಮ್ಲಾ ಆಗುತ್ತದೆಯೇ ಎಂಬ ಸಂದೇಹವನ್ನೂ ಉಂಟುಮಾಡಿದೆ.

ಗುರುರಾಜ ದೇಸಾಯಿ

ಕೇಂದ್ರ ಸರಕಾರದ ಲಸಿಕೆ ನೀತಿಯಲ್ಲಿ ಮೇಲ್ನೋಟಕ್ಕೆ ಮತ್ತೆ ಯೂ ಟರ್ನ್ ಕಾಣ ಬಂದಿದೆ. ಜೂನ್ 7ರ ಸಂಜೆ 5 ಗಂಟೆಗೆ ಬಹು ಪ್ರಚಾರಿತ ಭಾಷಣದಲ್ಲಿ ಪ್ರಧಾನಿ ಮೋದಿಯವರು ಎಲ್ಲರಿಗೂ ಲಸಿಕೆಯನ್ನು ಉಚಿತವಾಗಿ ಕೇಂದ್ರ ಸರಕಾರವೇ ನೀಡುವುದಾಗಿ ಹೇಳಿದ್ದಾರೆ.

ಬಿಹಾರ ಚುನಾವಣೆಯ ಪ್ರಚಾರದ ಸಮಯದಲ್ಲಿ ಅಲ್ಲಿನ ಮತದಾರರಿಗೆ ಉಚಿತ ಲಸಿಕೆ ಕೊಡುವುದಾಗಿ ಚುನಾವಣಾ ಭರವಸೆ ಕೊಡಲಾಯಿತು. ಇದಕ್ಕೆ ವ್ಯಾಪಕ ಆಕ್ಷೇಪಗಳು ಬಂದವು-ಉಚಿತ ಲಸಿಕೆ ಕೊಡುವ ಬಗ್ಗೆ ಅಲ್ಲ. ಇದುವರೆಗೂ ಲಸಿಕೆ ನೀಡಿಕೆ ಒಂದು ರಾಷ್ಟ್ರೀಯ ಕಾರ್ಯಕ್ರಮ-ಅದನ್ನು ಒಂದು ಪಕ್ಷ ಅಥವ ಮೈತ್ರಿಕೂಟ ಒಂದು ರಾಜ್ಯಕ್ಕೆ ಸೀಮಿತಗೊಳಿಸುವುದಾಗಿ ಹೇಳಲು ಸಾಧ್ಯವೇ ಎಂದು.

2021 ಆರಂಭವಾಗುವ ವೇಳೆಗೆ ಸಾರ್ವತ್ರಿಕ ಲಸಿಕೆ ಅಭಿಯಾನದ ಪ್ರಶ್ನೆ ಮೂಲೆ ಸೇರಿತು. ನಾವು ಕೊರೊನ ವಿರುದ್ಧ ಸಮರವನ್ನು ಗೆದ್ದಿದ್ದೇವೆ ಎಂದು ಜನವರಿ ತಿಂಗಳಲ್ಲಿ ಪ್ರಧಾನ ಮಂತ್ರಿಗಳು ಸಾರಿದರು.

ಆದರೆ ಮಾರ್ಚ್ ತಿಂಗಳಲ್ಲಿ ಪ್ರಧಾನ ಮಂತ್ರಿಗಳು ಸೇರಿದಂತೆ ಆಳುವ ಪಕ್ಷದ ಮುಖಂಡರು ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಮುಳುಗಿದ್ದಾಗ ಎರಡನೇ ಕೊವಿಡ್ ಅಲೆ ದೇಶವನ್ನು ಅಪ್ಪಳಿಸಿತು. ಆಗ ಎಚ್ಚೆತ್ತ ಕೇಂದ್ರ ಸರಕಾರ ಮೊದಲಿಗೆ, ಈ ಮಹಾಸೋಂಕನ್ನು ಎದುರಿಸುವಲ್ಲಿ ಮುಂಚೂಣಿಯಲ್ಲಿರುವ ಡಾಕ್ಟರುಗಳು, ನರ್ಸ್‌ಗಳು ಮತ್ತು ಇತರ ಸಿಬ್ಬಂದಿಗೆ ಆದ್ಯತೆಯ ಮೇಲೆ ಲಸಿಕೆ ನೀಡಲಾಗುವದು, ನಂತರ 60ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ, 45 ವರ್ಷ ದಾಟಿದವರಿಗೆ, ಅಮೇಲೆ 18ರಿಂದ 44 ವಯೋಗುಂಪಿನವರಿಗೆ ಲಸಿಕೆ ಒದಗಿಸುವುದಾಗಿ ಹೇಳಲಾಯಿತು. ಈ ನಡುವೆ ಪ್ರಧಾನ ಮಂತ್ರಿಗಳು 'ಟೀಕಾ ಉತ್ಸವ್'ಗೂ ಕರೆ ನೀಡಿದರು. ಪ್ರಧಾನ ಮಂತ್ರಿಗಳು ಮತ್ತು ಅವರ ಸರಕಾರದ ಅಬ್ಬರದ ಮಾತುಗಳ ಟೊಳ್ಳುತನವನ್ನು ಮತ್ತೊಮ್ಮೆ ಬಯಲಿಗೆ ತಂದ ಕರೆಯಿದು. ಏಕೆಂದರೆ ಟೀಕಾಉತ್ಸವ್‌ನಲ್ಲಿ ಭಾಗವಹಿಸಲು ಬಂದವರಿಗೆ ಹಾಕಲು ಲಸಿಕೆಗಳೇ ಇರಲಿಲ್ಲ.

'ಉದಾರೀಕೃತ ಮತ್ತು ತ್ವರಿತಗೊಳಿಸಿದ ಘಟ್ಟ 3ರ ರಣತಂತ್ರ'

ಇಂತಹ ಸಮಯದಲ್ಲೇ ಎಪ್ರಿಲ್ 19 ರಂದು ಕೇಂದ್ರ ಸರಕಾರ ತನ್ನ ಹೊಸ ಲಸಿಕೆ ನೀತಿಯನ್ನು ಪ್ರಕಟಿಸಿತು. ಇದಕ್ಕೆ ಕೊಟ್ಟ ಹೆಸರು 'ಉದಾರೀಕೃತ ಮತ್ತು ತ್ವರಿತಗೊಳಿಸಿದ ಘಟ್ಟ 3ರ ರಣತಂತ್ರ'. ಇದರ ಪ್ರಕಾರ ಮೇ 1ರಿಂದ ಕೇಂದ್ರ ಸರಕಾರ ಲಸಿಕೆಯನ್ನು 45 ವರ್ಷದ ಮೇಲ್ಪಟ್ಟವರಿಗೆ ಮಾತ್ರ ನೀಡುತ್ತದೆ. ಅಂದರೆ 18ರಿಂದ 44ರ ವಯೋಗುಂಪಿನವರಿಗೆ ಲಸಿಕೆ ಒದಗಿಸುವ ಜವಾಬ್ದಾರಿಯನ್ನು ರಾಜ್ಯ ಸರಕಾರಗಳಿಗೆ ದಾಟಿಸಲಾಯಿತು.

ಈ 'ಉದಾರೀಕೃತ' ಲಸಿಕೆ ನೀತಿಯ ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಲಸಿಕೆಗಳ ಖರೀದಿಯನ್ನು ಖಾಸಗಿಯವರಿಗೆ ತೆರೆದು ಕೊಟ್ಟದ್ದು. 'ಟೀಕಾ ಉತ್ಸವ್' ಬಯಲಿಗೆ ತಂದ ಲಸಿಕೆಗಳ ಕೊರತೆಯನ್ನು ನೀಗಿಸಲು ಈ 'ಉದಾರೀಕರಣ' ಎನ್ನಲಾಯಿತು. ಮೇ 1 ದೇಶದ ಎರಡು ಲಸಿಕೆ ಉತ್ಪಾದಕರು 50%ದಷ್ಟನ್ನು ಕೇಂದ್ರ ಸರಕಾರಕ್ಕೆ ಕೊಡಬೇಕು, ಉಳಿದ 50%ವನ್ನು ಅವರು ರಾಜ್ಯ ಸರಕಾರಗಳಿಗೆ, ತಾವೇ ನಿರ್ಧರಿಸುವ ಪೂರ್ವ ಘೋಷಿತ ಬೆಲೆಗಳಲ್ಲಿ ಮಾರಿಕೊಳ್ಳಬಹುದು! ಮರುದಿನ ಪ್ರಧಾನ ಮಂತ್ರಿಗಳು ದೇಶವನ್ನು ಉದ್ದೇಶಿಸಿ ಈ ಬಗ್ಗೆ ಪ್ರಸಾರ ಭಾಷಣ ಮಾಡಿದರು.

ಅಂತಿಮವಾಗಿ, ರಾಜ್ಯ ಸರಕಾರಗಳು ಕೊವಿಶೀಲ್ಡ್ ಉತ್ಪಾದಕರಿಂದ ಅವರ ಉತ್ಪಾದನೆಯ 25%ವನ್ನು 300ರೂ. ದರದಲ್ಲಿ, ಮತ್ತು ಕೊವ್ಯಾಕ್ಸಿನನ್ನು 400ರೂ. ದರದಲ್ಲಿ ಖರೀದಿಸಬಹುದು. ಉಳಿದ 25%ವನ್ನು ಖಾಸಗಿಯವರು ಅನುಕ್ರಮವಾಗಿ 600ರೂ. ಮತ್ತು 1200ರೂ. ದರದಲ್ಲಿ ಖರೀದಿಸಬಹುದು ಎಂದು ಹೇಳಲಾಯಿತು.

ದೇಶದಲ್ಲಿ ಎರಡನೇ ಕೊವಿಡ್ ಅಲೆಯಿಂದಾಗಿ ಸೋಂಕಿತರ ಸಂಖ್ಯೆ ಪ್ರತಿದಿನ 2ಲಕ್ಷ ದಾಟುತ್ತಿದ್ದಾಗ, ಸಾವುಗಳ ಸಂಖ್ಯೆ ಪ್ರತಿದಿನ 4ಸಾವಿರವನ್ನು ದಾಟುತ್ತಿದ್ದಾಗ, ಜನಗಳನ್ನು ರಕ್ಷಿಸುವ ಪ್ರಧಾನ ಅಸ್ತ್ರವಾದ ಲಸಿಕೆಗಳ ತೀವ್ರ ಕೊರತೆಯ ಸಂದರ್ಭದಲ್ಲಿ ಈ "ಉದಾರೀಕೃತ' ಲಸಿಕೆ ನೀತಿಗೆ ವ್ಯಾಪಕ ವಿರೋಧಗಳು ವ್ಯಕ್ತವಾದವು.

ಕೇಂದ್ರ ಸರಕಾರ ಪ್ರಕಟಿಸಿರುವ ಲಸಿಕೆ ಧೋರಣೆಯು ಮತ್ತೊಮ್ಮೆ ತಾವು ಸೃಷ್ಟಿಸಿದ ಅಗಾಧ ಸ್ವರೂಪದ ಆರೋಗ್ಯ ಬಿಕ್ಕಟ್ಟಿನಿಂದ ಹೊಣೆ ಜಾರಿಸಿಕೊಳ್ಳುವ ಕೇಂದ್ರ ಸರಕಾರದ ಪ್ರಯತ್ನವಾಗಿದೆ, ಸಮಸ್ತ ಜವಾಬ್ದಾರಿಯನ್ನು ರಾಜ್ಯ ಸರಕಾರಗಳ ಮೇಲೆ ದಾಟಿಸುವ ಒಂದು ಪ್ರಯತ್ನ ನಡೆದಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಟೀಕಿಸಿತು. ಈ ಧೋರಣೆ ಲಸಿಕೆಗಳ ಪೂರೈಕೆಯನ್ನು ಹೆಚ್ಚಿಸದೆಯೇ, ಅವುಗಳ ಮಾರಾಟವನ್ನು ಉದಾರೀಕರಿಸುವ ಮತ್ತು ಬೆಲೆಗಳನ್ನು ನಿಯಂತ್ರಣ-ಮುಕ್ತಗೊಳಿಸುವ ಒಂದು ಪ್ರಯತ್ನವೇ ಆಗಿದೆ. ಕೇಂದ್ರ ಸರಕಾರ ಒಂದು ವರ್ಷದಿಂದ ಲಸಿಕೆ ಪೂರೈಕೆಗಳನ್ನು ಸಾಕಷ್ಟು ಮತ್ತು ಅಗತ್ಯ ಪ್ರಮಾಣದಲ್ಲಿ ಹೆಚ್ಚಿಸಲು ಏನೂ ಮಾಡದೇ ವಿಫಲವಾಗಿತ್ತು. ಇದು ಈ ಜೀವರಕ್ಷಕ ಲಸಿಕೆಯನ್ನು ಕೋಟ್ಯಂತರ ಜನಗಳ ಕೈಗೆಟುಕದಂತೆ ಮಾಡಿ ಅವರನ್ನು ಇದರಿಂದ ಹೊರಗಿಡುವ ಸೂತ್ರವಾಗಿದೆ ಎಂದು ಅದು ಹೇಳಿತು. .ಒಂದು ಸಾಮೂಹಿಕ ಸಾರ್ವತ್ರಿಕ ಲಸಿಕೀಕರಣ ಕಾರ್ಯಕ್ರಮ ಮಾತ್ರವೇ ಈ ಆರೋಗ್ಯ ತುರ್ತು ಪರಿಸ್ಥಿತಿಯ ಅಗತ್ಯಗಳನ್ನು ಈಡೇರಿಸ ಬಲ್ಲುದು ಎಂದು ಅದು ಎಚ್ಚರಿಸಿತು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಎಲ್ಲ ರಾಜ್ಯ ಸರಕಾರಗಳಿಗೆ ಉಚಿತವಾಗಿ ಲಸಿಕೆಗಳನ್ನು ಪೂರೈಸಬೇಕು ಎಂದು ಆಗ್ರಹಿಸಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದರು. ರಾಜ್ಯ ಸರಕಾರಗಳು ಈಗಾಗಲೇ ಮಹಾಸೋಂಕಿನ ಪರಿಣಾಮವಾಗಿ ಹೆಚ್ಚುವರಿ ಹಣಕಾಸು ಒದಗಿಸಬೇಕಾಗಿ ಬಂದಿದೆ. ಮತ್ತು ಈ ಲಸಿಕೆಗಳನ್ನು ತಮ್ಮ ರಾಜ್ಯದ ಜನರಿಗೆ ಉಚಿತವಾಗಿ ಕೊಡಬೇಕಾಗಿದೆ. ಇದು ಈಗಾಗಲೇ ಹಣಕಾಸು ಸಮಸ್ಯೆಗಳನ್ನು ಎದುರಿಸುತ್ತಿರುವ ರಾಜ್ಯ ಸರಕಾರಗಳ ಮೇಲೆ ಅಗಾಧ ಹೊರೆಯನ್ನು ಹೇರುತ್ತದೆ ಎಂಬ ಸಂಗತಿಯನ್ನು ಕೇರಳ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದರು. ಹೊಸದಾಗಿ ರಚನೆಗೊಂಡ ಕೇರಳ ವಿಧಾನಸಭೆ ಈ ಕುರಿತು ಒಂದು ಸರ್ವಾನುಮತದ ನಿರ್ಣಯವನ್ನೂ ಅಂಗೀಕರಿಸಿತು. ಮತ್ತು ಕೇರಳ ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ಕೇಸಿನಲ್ಲಿ ಈ ಲಸಿಕಾ ನೀತಿಯು "ಕಾಳ ಸಂತೆಯನ್ನು ಉತ್ತೇಜಿಸುತ್ತಿದೆ " ಎಂದು ಎಲ್‌ಡಿಎಫ್ ಸರಕಾರ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದೆ.

ಮೇ 2ರಂದು ಎಡಪಕ್ಷಗಳು, ಕಾಂಗ್ರೆಸ್ ಸೇರಿದಂತೆ 13 ಪಕ್ಷಗಳ ಮುಖಂಡರು ಒಂದು ಜಂಟಿ ಹೇಳಿಕೆ ನೀಡಿ ತಕ್ಷಣವೇ ದೇಶಾದ್ಯಂತ ಒಂದು ಉಚಿತ ಸಾಮೂಹಿಕ ಲಸಿಕೀಕರಣ ಕಾರ್ಯಕ್ರಮವನ್ನು ಆರಂಭಿಸಬೇಕು ಮತ್ತು ಇದಕ್ಕೆ ಲಸಿಕೀಕರಣ ಕಾರ್ಯಕ್ರಮಕ್ಕೆಂದು ಬಜೆಟ್ ನಲ್ಲಿ ನೀಡಿರುವ ರೂ.35,000 ಕೋಟಿಯನ್ನು ಬಳಸಬೇಕು ಎಂದು ಆಗ್ರಹಿಸಿದರು.

ಮೇ 12ರಂದು 12 ಪ್ರತಿಪಕ್ಷಗಳ ಮುಖಂಡರು ಈ ಕುರಿತು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದರು. ಆದರೂ ಪ್ರಧಾನ ಮಂತ್ರಿಗಳ ದಿವ್ಯ ಮೌನ ಮತ್ತು ಕೇಂದ್ರ ಸರಕಾರದ ದಿವ್ಯ ನಿರ್ಲಕ್ಷ್ಯ ಮುಂದುವರೆಯಿತು.

ಈ ನಡುವೆ, ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಸ್ವಯಂಪ್ರೇರಣೆಯಿಂದ ಈ ಪ್ರಶ್ನೆಯನ್ನು ಎತ್ತಿಕೊಂಡು ಸರಕಾರವನ್ನು ಅದರ ಲಸಿಕೆ ನೀತಿಯ ಬಗ್ಗೆ ಹಲವು ಪ್ರಶ್ನೆಗಳಿಗೆ ಉತ್ತರ ಕೇಳುತ್ತ ಪುನರ್ವಿಮರ್ಶೆ ಮಾಡುವಂತೆ ತಾಕೀತು ಮಾಡಿತು. ಮೋದಿ ಸರಕಾರದ 'ಉದಾರೀಕೃತ ಲಸಿಕೆ ನೀತಿ'ಯ ಬಗ್ಗೆ, ಮುಖ್ಯವಾಗಿ 18-44 ವಯೋಗುಂಪಿನವರಿಗೆ ಲಸಿಕೆ ಕೊಡುವ ಹೊಣೆಯನ್ನು ಲಸಿಕೆ ತಯಾರಕರಿಗೆ ಹೆಚ್ಚಿನ ಬೆಲೆ ತೆರಬೇಕಾಗಿರುವ ರಾಜ್ಯ ಸರಕಾರಗಳು ಮತ್ತು ಖಾಸಗಿಯವರಿಗೆ ದಾಟಿಸಿದಂತಿರುವ ನಿಲುವು ಮೇಲ್ನೋಟಕ್ಕೆ ನಿರಂಕುಶ ಮತ್ತು ತರ್ಕಹೀನವಾಗಿ ಕಾಣುತ್ತದೆ ಎಂದು ಟಿಪ್ಪಣಿ ಮಾಡಿತು.

ವಿಫಲತೆಯನ್ನು ಮುಚ್ಚಿಕೊಳ್ಳಲು ಸುಳ್ಳುಗಳು

ಸುಪ್ರೀಂ ಕೋರ್ಟ್‌ನ ತೀಕ್ಷ್ಣ ಪ್ರಶ್ನೆಗಳು, ಚುನಾವಣೆಯಲ್ಲಿನ ಸಾಲು ಸಾಲು ಸೋಲುಗಳು, ಕೋವಿಡ್ ನಿರ್ವಹಣೆಯ ಬಗ್ಗೆ ಹಲವಾರು ಹೈಕೋರ್ಟ್‌ಗಳ ಕಟು ಟಿಪ್ಪಣಿಗಳು, ಇದರಿಂದಾಗಿ ಕುಸಿಯುತ್ತಿದ್ದ ಜನಪ್ರಿಯತೆಯನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ಮೋದಿ ಸರಕಾರ ಕೊನೆಗೂ ಯೂ ಟೂರ್ನ್ ಹೊಡೆಯಬೇಕಾಯಿತು.

ಆದರೆ ತನ್ನ ತಪ್ಪುಗಳನ್ನು, ವಿಫಲತೆಗಳನ್ನು ಒಪ್ಪಿಕೊಳ್ಳುವ ಬದಲು, ಅದು ಮತ್ತೆ ಸುಳ್ಳುಗಳ ಮೊರೆ ಹೊಕ್ಕಿದೆ.

ರಾಜ್ಯ ಸರಕಾರಗಳು ತಾವಾಗಿಯೇ ಒತ್ತಾಯಿಸಿದ್ದರಿಂದ, ಅವು ತಾವಾಗಿಯೇ ಲಸಿಕೆಗಳನ್ನು ಖರೀದಿಸಿ ಹಂಚಲು ಅವಕಾಶವಾಗಲೆಂದು ಎಪ್ರಿಲ್ 19 ರ 'ಉದಾರೀಕೃತ' ನೀತಿಯನ್ನು ಪ್ರಕಟಿಸಲಾಯಿತು ಎಂದು ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು. ಈಗ ರಾಜ್ಯ ಸರಕಾರಗಳಿಂದ ಇದು ಸಾಧ್ಯವಿಲ್ಲವೆಂದು ಗೊತ್ತಾದ ಮೇಲೆ ಅದನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಬಿಜೆಪಿ ಮುಖಂಡರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಇದು ಕೇವಲ ಸಬೂಬು ಎಂಬುದು ಮೇಲೆ ಹೇಳಿದ ಪ್ರತಿಪಕ್ಷಗಳ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.


ಮೇಲೆ ಹೇಳಿದ ಎಪ್ರಿಲ್ 20ರ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ಈ ಬಗ್ಗೆ ಏನೂ ಹೇಳಿರಲಿಲ್ಲ. ಅಲ್ಲದೆ ಸುಪ್ರಿಂ ಕೋರ್ಟ್ ತಾನಾಗಿ ಎತ್ತಿಕೊಂಡ ವಿಚಾರಣೆಯಲ್ಲಿ ಸಲ್ಲಿಸಲು ಹೇಳಿದ ಅಫಿಡವಿಟ್‌ನಲ್ಲಿಯೂ ಇದರ ಪ್ರಸ್ತಾಪವೇ ಇಲ್ಲ ಏಕೆ ಎಂದು ಹಲವು ವಿಶ್ಲೇಷಕರು ಪ್ರಶ್ನಿಸಿದ್ದಾರೆ.

ಕೇಂದ್ರ ಸರಕಾರ ತನ್ನ ಅಫಿಡವಿಟ್ ನಲ್ಲಿ ತನ್ನ ಲಸಿಕೆ ನೀತಿ ಸಂವಿಧಾನದ ಕಲಮು 14 ಮತ್ತು 21ಕ್ಕೆ ಅನುಗುಣವಾಗಿದೆ, ಆದ್ದರಿಂದ ಅದರಲ್ಲಿ ನ್ಯಾಯಾಂಗದ ಹಸ್ತಕ್ಷೇಪ ಅನಗತ್ಯ, ಇಷ್ಟೊಂದು ಬೃಹತ್ ಪ್ರಮಾಣದ ಸಾಂಕ್ರಾಮಿಕವನ್ನು ನಿಭಾಯಿಸುವಲ್ಲಿ ಕಾರ್ಯಾಂಗಕ್ಕೆ ಮುಕ್ತವಾಗಿ ಕೆಲಸ ಮಾಡುವ ಅವಕಾಶವಿರಬೇಕು ಎಂದು ಹೇಳಿತ್ತು ಎಂಬುದು ಇಲ್ಲಿ ಗಮನಾರ್ಹ.

ಸುಪ್ರಿಂ ಕೋರ್ಟ್ ಇದನ್ನು ಪ್ರಸ್ತಾಪಿಸುತ್ತ "ನಮ್ಮ ಸಂವಿಧಾನ,

ಪುಟ 12 ನೋಡಿ

ಎರಡನೇ ಅಲೆಯ ನಾಲ್ಕು ಘಟ್ಟಗಳಲ್ಲಿ



ಕೃಪೆ: ಮಂಜುಲ್, ಫೇಸ್‌ಬುಕ್

ಎಲ್ಲರಿಗೂ ಲಸಿಕೆ !– 56 ಅಂಗುಲ



ಕೃಪೆ: ಸತೀಶ ಆಚಾರ್ಯ, ಫೇಸ್‌ಬುಕ್

ಬದುಕಿನ ಅಮಾನವೀಯತೆ ಮತ್ತು ಸಾವಿನ ಮಾನವೀಯತೆ.............

ಪುಟ 6 ರಿಂದ

ಅಮಾನವೀಯವಲ್ಲವೆ? ಎಂಬ ಯೋಗಾನಂದರ ಪ್ರಶ್ನೆಗೆ, ನಾವು ಜೀವಂತ ಮನುಷ್ಯರನ್ನು ಕೊಂದು ತಿಂದರೆ ಅಮಾನವೀಯ. ಅದು ಖಂಡಿತವಾಗಿಯೂ ಕ್ರೌರ್ಯ. ಆದರೆ ಯಾರಿಗೂ ಬೇಡವಾಗಿ ವ್ಯರ್ಥವಾಗುವ ಶವದ ಮಾಂಸವನ್ನು ಜೀವಧಾರಣೆಗಾಗಿ ತಿಂದರೆ ಹೇಗೆ ಅಮಾನವೀಯವಾಗುತ್ತದೆ? ಎಂದು ಸಾಧಕ ಕೇಳುತ್ತಾನೆ.

ಯೋಗಿ ಆದಿತ್ಯನಾಥರು ಆಳುವ ಉತ್ತರಪ್ರದೇಶದ ಕಾಶಿಯ ಪವಿತ್ರ ನದಿಯಲ್ಲಿ ತೇಲಿಬಂದ ಕೋವಿಡ್ ಶವಗಳನ್ನು ತಮ್ಮದೇ ಕಾರಣಗಳಿಗಾಗಿ ನದಿಗೆ ಎಸೆದಿರಬಹುದಾದ ಜನರ ಕೃತ್ಯವನ್ನು ಯಾರ 'ಅಮಾನವೀಯತೆ' ಎನ್ನಬೇಕು? ಕಾಶಿಯ ಹರಿಶ್ಚಂದ್ರ ಘಾಟ್ ಮುಂತಾದ ಕಡೆಗಳಲ್ಲಿ ಅರ್ಧ ಸುಟ್ಟ ಶವಗಳನ್ನು ನದಿಗೆ ಎಸೆಯುವ ಕೃತ್ಯದಲ್ಲಿರುವ 'ಅಮಾನವೀಯತೆ'ಯತೆಗೆ ಯಾರನ್ನು ಹೊಣೆಮಾಡಬೇಕು?

ಶವಸಂಸ್ಕಾರದ ವಿಷಯದಲ್ಲಿ ಮಾನವೀಯತೆಯ ಪ್ರಶ್ನೆಯು ಮುಖ್ಯವಾಗುವಂತೆ ಬದುಕಿರುವವರ ವಿಷಯದಲ್ಲಿ ಮಾನವೀಯತೆಯು ಏಕೆ ಮುಖ್ಯವಾಗುವುದಿಲ್ಲ? ಎಲ್ಲಾ ಮನುಷ್ಯರ ಅಸ್ತಿತ್ವದ ಮೂಲ ಅಗತ್ಯಗಳಾದ ಆಹಾರ, ಆರೋಗ್ಯ, ವಸತಿ, ವಸ್ತ್ರ ಮುಂತಾದ ಜೀವನಾಗತ್ಯಗಳ ನಿರಾಕರಣೆಯನ್ನು, ಅಮಾನವೀಯತೆ ಎಂದು ಸರ್ಕಾರಗಳು, ನ್ಯಾಯಾಲಯಗಳು, ಆಳುವವರ್ಗಗಳು ಏಕೆ ಎಲ್ಲರೂ ಗುರುತಿಸುವುದಿಲ್ಲ? ಜನಸಾಮಾನ್ಯರ ಆಹಾರ ಭದ್ರತೆಯ ಅಡುಗೆ ಮನೆಗಳ ಬದಲು ಕಕ್ಕಸುಗಳ ನಿರ್ಮಾಣಕ್ಕೆ ಕೊಡುವ ಆದ್ಯತೆಯಂತೆ ಇದೊಂದು ತಲೆಕೆಳಗಾದ ಆದ್ಯತೆಯಲ್ಲವೆ? ಹೀಗಾಗಿ ಅಮಾನವೀಯವಲ್ಲವೆ?

ಹಾಗಿದ್ದರೆ ಮಾನವೀಯತೆ ಎಂದರೇನು? ಮಾನವೀಯವಾಗಿರುವುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಹೇಗೆ?

ತುಂಬಾ ಸರಳವಾಗಿ ಹೇಳುವುದಾದರೆ ಮಾನವರಿಗೆ ಸಂಬಂಧಿಸಿದ್ದು ಮಾನವೀಯತೆ. ಮಾನವರಂತೆ ಬದುಕಿ ಬಾಳುವುದು ಮಾನವೀಯತೆ. ಹಾಗೆಂದರೆ ಏನು? ಮಾನವರೆಂದರೆ ಯಾರು?

ಮಾನವರಾಗಿ, ದಾನವರಾಗಬೇಡಿ ಎಂದು ಎಲ್ಲಾ ಧಾರ್ಮಿಕ ನೇತಾರರೂ, ಆಧ್ಯಾತ್ಮಿಕ ಗುರುಗಳೂ ವೇದಿಕೆಗಳ ಮೇಲಿಂದ ಕರೆಕೊಡುತ್ತಲೇ ಇರುತ್ತಾರೆ. ಮಾನವರೆಂದರೆ ಯಾರು? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಮಾನ (ಅಳತೆ) ಇರುವವರು ಮಾನವರು ಎಂಬ ನಿರ್ವಚನವನ್ನು ಕೊಡುತ್ತಾರೆ. ಪ್ರಾಣಿಗಳಿಗಿಂತಾ ಬೇರೆ, ಇತರ ಜೀವಿಗಳಿಗಿಂತಾ ಉತ್ತಮೋತ್ತಮರು ಎಂದು ಘೋಷಿಸುತ್ತಲೇ ಬಂದಿದ್ದಾರೆ.

ಹೀಗೆಯೇ ಬೇರೆ ಬೇರೆ ದೃಷ್ಟಿಕೋನದ ವಿದ್ವಾಂಸರು, ತತ್ವಜ್ಞಾನಿಗಳು ಮತ್ತು ಚಿಂತಕರು ಹೇಳುವುದೇನೆಂದರೆ, ಮಾನವರೆಂದರೆ ಪ್ರಜ್ಞೆಯುಳ್ಳವರು, ಆದರೆ (ಪ್ರಾಣಿಗಳಿಗೆ ಪ್ರಜ್ಞೆ ಇಲ್ಲ.) ಮನುಷ್ಯರು ಪ್ರಾಣಿಗಳಂತೆ ಇರಬಾರದು. ಮಾನವರೆಂದರೆ ವಿವೇಚನಾ ಶಕ್ತಿ ಇರುವವರು, ಮೌಲ್ಯಪ್ರಜ್ಞೆ ಇರುವವರು, ತಾರತಮ್ಯ ಜ್ಞಾನ ಇರುವವರು. ಪ್ರಾಣಿಗಳಿಗೆ ಇದ್ಯಾವುದೂ ಇಲ್ಲ.

ಪ್ರಾಣಿಗಳಿಗೂ ಮನುಷ್ಯರಿಗೂ ಸಮಾನವಾಗಿರುವ ಅಂಶಗಳು ಯಾವುವು? ಇಬ್ಬರೂ ಪ್ರಕೃತಿಯ ಬಾಗವಾಗಿರುವ ಜೀವಿಗಳು. ಈ ಎರಡು ಬಗೆಯ ಜೀವಿಗಳಲ್ಲೂ ಸಮಾನವಾಗಿರುವುದು ಆಹಾರ ಸೇವನೆ, ಮತ್ತು ಸಂತಾನೋತ್ಪತ್ತಿಯ ಅಭಿಲಾಶೆ. ಇವುಗಳಿಂದ ಹುಟ್ಟಿದ ಕ್ರಿಯೆಗಳು ಆಹಾರದ ಸಂಪಾದನೆ ಮತ್ತು ನೈಸರ್ಗಿಕ ಪ್ರವೃತ್ತಿ ಮೂಲದ ಗಂಡು–ಹೆಣ್ಣಿನ ಕೂಟ. ಆದರೆ ಮಾನವರು ಪ್ರಾಣಿಗಳಿಂದ ಭಿನ್ನವಾದದ್ದು ಆಹಾರದ ಸಂಪಾದನೆಯ ಸರಳ ಮಾರ್ಗಗಳಾದ ಬೇಟೆ ಮತ್ತು ಮೀನುಗಾರಿಕೆ ಅಂಟಿಕೊಳ್ಳದೆ, ಮಾನವರಿಗೆ ಮಾತ್ರ ವಿಶಿಷ್ಟವಾದ ಶ್ರಮ ಮತ್ತು ಉಪಕರಣಗಳ ಬಳಕೆಯ ವಸ್ತು ಉತ್ಪಾದನೆಯ ಮೂಲಕ. ತಮ್ಮ ಆಹಾರ ಮತ್ತಿತರ ಜೀವನಾಧಾರವನ್ನು ಸಾಮಾಜಿಕ ಶ್ರಮದಿಂದ ಪಡೆದುಕೊಳ್ಳಲು ಪ್ರಾರಂಭಿಸಿದ ಶ್ರಮಸಂಬಂಧದ ಮೂಲಕ. ಹೀಗಾಗಿಯೇ ಪ್ರಾಣಿಗಳಲ್ಲಿನ ಸಂಬಂಧಕ್ಕೆ ಸೀಮಿತವಾಗಿರುವ ರಕ್ತಸಂಬಂಧವು ಮಾನವರಲ್ಲಿ ಸಾಮುದಾಯಿಕ, ಅಂದರೆ ಸಾಮಾಜಿಕ ಶ್ರಮಸಂಬಂಧಕ್ಕೆ ವಿಸ್ತರಣೆಗೊಂಡು ಬದುಕಿನ ಸರಳ ಉತ್ಪಾದನೆಯಿಂದ ಸಂಕೀರ್ಣ ಉತ್ಪಾದನೆಯ ಸ್ವರೂಪವನ್ನು ಪಡೆದುಕೊಂಡಿದೆ.

ಹೀಗೆ, ಮನುಷ್ಯನನ್ನೂ ಒಳಗೊಂಡಂತೆ ಪ್ರಕೃತಿಯ ಭಾಗವಾಗಿರುವ ಪ್ರಾಣಿಗಳು, ಸಸ್ಯಗಳನ್ನು ತಿಂದು ಬದುಕಲಿ ಅಥವಾ ಇತರೆ ಪ್ರಾಣಿಗಳನ್ನು ಕೊಂದು–ತಿಂದು ಬದುಕಲಿ ಅವು ತಮ್ಮ ಆಹಾರವನ್ನು ಬಿಡಿ ಬಿಡಿಯಾಗಿ ಅಥವಾ ಗುಂಪುಗಳಾಗಿ ಸಂಪಾದಿಸುತ್ತವೆಯೇ ಹೊರತು ಮನುಷ್ಯರಂತೆ ಸಾಮಾಜಿಕವಾಗಿ ಉತ್ಪಾದಿಸುವುದಿಲ್ಲ. ವ್ಯವಸಾಯವಾಗಲಿ, ಮೀನುಗಾರಿಕೆಯಾಗಲಿ ಅಥವಾ ಪಶುಸಂಗೋಪನೆ ಯಾಗಲಿ ಆಹಾರದ ಸಾಮಾಜಿಕ ಉತ್ಪಾದನಾ ಕ್ರಮಗಳೇ ಹೊರತು ಸಂಪಾದನಾ ಕ್ರಮಗಳಲ್ಲ. ಪ್ರಾಣಿಗಳ ಆಹಾರ ಸಂಪಾದನೆಗೆ ಕೊಂಬು, ಉಗುರು, ಹಲ್ಲು, ಕಾಲು, ಮೈಬಲ ಮತ್ತು ಹೇಗೆ ಸಂಪಾದಿಸಬೇಕೆಂಬ 'ಹುಟ್ಟುಗುಣ' ಇದ್ದರೆ ಸಾಕು.

ಆದರೆ, ಯಾವುದೇ ಉತ್ಪಾದನೆಗೆ ಇವಿಷ್ಟೇ ಸಾಕಾಗುವುದಿಲ್ಲ, ಏನಿಲ್ಲದಿದ್ದರೂ, ಮೈಬಲ ಮತ್ತು ಬುದ್ಧಿಬಲಗಳನ್ನು, ಸೃಜನಾತ್ಮಕವಾಗಿ ಜೀವನಾಧಾರವನ್ನು ಉತ್ಪಾದಿಸುವ ಮೊದಲು ಅಂದರೆ ಶ್ರಮವನ್ನು ಬಳಸುವ ಜೈವಿಕ ಕರಣಗಳ ಜೊತೆಗೆ ತಾಂತ್ರಿಕ ಉಪಕರಣಗಳನ್ನು ಅಥವಾ ಸಲಕರಣೆಗಳನ್ನು ಹಾಗೂ ಕಚ್ಚಾವಸ್ತುಗಳನ್ನು ಉತ್ಪಾದಿಸಿಕೊಳ್ಳಬೇಕು. ಅವುಗಳಲ್ಲಿ ಸಂಚಿತವಾದ ಹಳೆಯ ಶ್ರಮದೊಂದಿಗೆ ಹೊಸ ಜೀವಂತ ಶ್ರಮ ಸೇರಿದಾಗ ಮಾತ್ರ ಜೀವನಾಧಾರದ ಉತ್ಪಾದನೆ ಸಾಧ್ಯವಾಗುತ್ತದೆ. ಪ್ರಕೃತಿಯಲ್ಲಿ, ಆಹಾರದ ಸಂಪಾದನಾ ಜೀವಿಗಳೆಂದರೆ ಪ್ರಾಣಿಗಳು. ಜೀವನಾಧಾರದ ಉತ್ಪಾದನಾ ಜೀವಿಗಳೆಂದರೆ ಮನುಷ್ಯರು. ಹೀಗೆ ಶ್ರಮದಿಂದ ಬದುಕನ್ನು ಉತ್ಪಾದಿಸಿಕೊಂಡು ಪ್ರಾಣಿಗಳಿಂದ ಪ್ರತ್ಯೇಕವಾಗಿ ಮನುಷ್ಯರಾಗಿರುವ ಗುಣವೇ ಮನುಷ್ಯತ್ವ. ಆ ಉತ್ಪಾದನಾ ಗುಣವನ್ನು ಹೊಂದಿರುವುದು, ಮತ್ತು ಸುತ್ತಲಿನ ತನ್ನಂಥ ಜೀವಿಗಳನ್ನು ತನ್ನಂತೆಯೇ ಕಾಣುವುದು ಮಾನವೀಯತೆ. ಕಷ್ಟ ಕಾಲದಲ್ಲಿ ಸಹಜೀವಿಗಳಿಗೆ ತೋರಿಸುವ ಸಾನುಕಂಪ, ದಯೆ, ಕರುಣೆ, ಸಹಾಯಮಾಡುವ ಮನೋವೃತ್ತಿ, ಸಹಕಾರ ಮುಂತಾದವು ಮಾನವೀಯತೆ ಪದಕ್ಕಿರುವ ಮೇಲ್ಪದರದ ಅರ್ಥಗಳು.

ಕೆಲವರು, ಮನುಷ್ಯ ಎಂದರೆ ಉಪಕರಣವನ್ನು ಮಾಡುವ ಮತ್ತು ಬಳಸುವ ವಿಶಿಷ್ಟ ಪ್ರಾಣಿ (ಟೂಲ್ ಮೇಕಿಂಗ್ ಅಂಡ್ ಟೂಲ್ ಯೂಸಿಂಗ್ ಆನಿಮಲ್) ಆದ್ದರಿಂದ ತಾವು 'ಮನುಷ್ಯ'ರಾಗಿ 'ಪ್ರಾಣಿಗಳಿಗಿಂತ ಭಿನ್ನ' ಎಂದು ಹೆಮ್ಮೆಪಟ್ಟುಕೊಳ್ಳುತ್ತಾರೆ. ತಾವು ಜೀವಿಗಳಲ್ಲೆಲ್ಲಾ ಶ್ರೇಷ್ಠ ಜೀವಿಗಳೆಂದು ಬೀಗುತ್ತಾರೆ. ಅವರು ಶ್ರೇಷ್ಠರಾಗಿಲ್ಲದೆಯೂ, ಪ್ರಾಣಿಗಳಿಗಿಂತಾ ಖಂಡಿತವಾಗಿಯೂ ಭಿನ್ನ. ಏಕೆಂದರೆ ಅವರು ತಮ್ಮ ಬದುಕಿನ ಉತ್ಪಾದನೆಗಾಗಿ, ಪ್ರಾಣಿಗಳು ಬದುಕಿನ 'ಸಂಪಾದನೆಗೆ' ಮಾಡುವಂತೆ, ಮಾನವಜೀವಿಗಳಾಗಿ ಬದುಕಿನ ಉತ್ಪಾದನೆಗೆ ತಾವೇ ಸ್ವತಹ ಶ್ರಮ ಮಾಡುವುದಿಲ್ಲ. ತಮ್ಮ ಪಾಲಿನ ಸಾಮಾಜಿಕ ಶ್ರಮವನ್ನು ಇತರರಿಂದ ಬಲಾತ್ಕಾರವಾಗಿ ಮಾಡಿಸುತ್ತಾರೆ. ಯಾವ ಪ್ರಾಣಿಯೂ, ಜೀವಿಯೂ ತನ್ನ ಆಹಾರ ಸಂಪಾದನೆಗಾಗಿ ಇತರ ಜೀವಿಗಳನ್ನು ತನಗಾಗಿ ಆಹಾರ ಸಂಪಾದಿಸೆಂದು ಬಲಾತ್ಕರಿಸುವುದಿಲ್ಲ. ಅಥವಾ ಅವು ಸಂಪಾದಿಸಿದ್ದನ್ನು ಕಾನೂನಿನ ಮೂಲಕ ವಶಪಡಿಸಿಕೊಳ್ಳುವುದಿಲ್ಲ. ಬಲಿಷ್ಠ ಜೀವಿಯು ದುರ್ಬಲ ಜೀವಿಯು ಸಂಪಾದಿಸಿದ ಆಹಾರವನ್ನು ಕಿತ್ತುಕೊಳ್ಳಬಹುದು. ಅದಕ್ಕೆ ಕಾಣದಂತೆ ವಶಪಡಿಸಿಕೊಳ್ಳಬಹುದು. ಅದನ್ನು ಮೋಸ, ಕಳ್ಳತನ ಮುಂತಾದ ನೈತಿಕ ಶಬ್ದಗಳಲ್ಲಿ ಕರೆಯಲಾಗುವುದಿಲ್ಲ. ಏಕೆಂದರೆ ಮಾನವರುನ್ನುಳಿದು ಇತರ ಜೀವಿಗಳಲ್ಲಿ ನೈತಿಕತೆ, ಪ್ರಾಮಾಣಿಕತೆ ಮುಂತಾದ ಮೌಲ್ಯಗಳಿಲ್ಲ. ಬಲಿಷ್ಠ ಜೀವಿಯು ದುರ್ಬಲ ಜೀವಿಯನ್ನು ಕೊಂದು ತಿನ್ನುವುದಂತೂ ಸ್ವಾಭಾವಿಕ.

ತಮ್ಮ ಬದುಕನ್ನು ಮತ್ತೊಬ್ಬರ ಶ್ರಮದಿಂದ ಉತ್ಪಾದಿಸಿಕೊಳ್ಳುವ ಮನುಷ್ಯರು ಮನುಷ್ಯತನ ಅಥವಾ ಮನುಷ್ಯತ್ವ ಅಥವಾ ಮಾನವೀಯತೆ, ಇಲ್ಲದವರು. ಹಾಗಾಗಿ ಪ್ರಾಣಿಗಳೇ. ಏಕೆಂದರೆ, ಅವರು ಮತ್ತೊಬ್ಬರ ಶ್ರಮದಿಂದ ತಮ್ಮ ಬದುಕನ್ನು ಸಂಪಾದಿಸಿಕೊಳ್ಳುತ್ತಾರೆ, ಮನುಷ್ಯರಂತೆ ಉತ್ಪಾದಿಸುವುದಿಲ್ಲ. ಇದರಿಂದಾಗಿ ಮಾನವರಲ್ಲೇ ಶ್ರಮಮಾಡುವ ಮನುಷ್ಯರು ಮತ್ತು ಶ್ರಮಮಾಡದ ಮನುಷ್ಯರು ಎಂಬ ಎರಡು ಬಗೆಯ ಜೀವಿಗಳಾಗಿದ್ದಾರೆ. ಪ್ರಾಣಿಗಳಲ್ಲಿ ಬೇಟೆಗಾರ ಮತ್ತು ಬೇಟೆ ಎಂಬ ಎರಡು ಬಗೆ ಇದೆಯೇ ಹೊರತು, ಸಂಪಾದಿಸುವ ಪ್ರಾಣಿ ಮತ್ತು ಸಂಪಾದಿಸದ ಪ್ರಾಣಿ ಎಂಬ ಎರಡು ಬಗೆಯ ಪ್ರಾಣಿಗಳಿಲ್ಲ. ಅವು ತಮ್ಮ ಬೇಟೆಯನ್ನು ಕೊಂದು ತಿನ್ನಲು, ಕೊಂಬು, ಉಗುರು, ಹಲ್ಲು ಮುಂತಾದ ನೈಸರ್ಗಿಕ ದೇಹಭಾಗಗಳನ್ನು ಬಳಸುತ್ತವೆ. ಆದರೆ ಶ್ರಮ ಮಾಡದ ಮನುಷ್ಯರು ಶ್ರಮ ಮಾಡುವ ಮನುಷ್ಯರ ಮೇಲೆ ದಬ್ಬಾಳಿಕೆ ಮಾಡಲು ಪ್ರಾಣಿಗಳ ಕೊಂಬು, ಉಗುರು, ಹಲ್ಲುಗಳಿಗಿಂತಲೂ ಹೆಚ್ಚು ಕ್ರೂರವಾದ ಆಯುಧಗಳು, ಮತ್ತು ಕಾನೂನಾತ್ಮಕ ಬಲಾತ್ಕಾರದ ವಿಧಾನಗಳನ್ನು ಬಳಸುತ್ತಾರೆ. ಸಾಲದ್ದಕ್ಕೆ ಅವರವರಲ್ಲೇ ಪ್ರಾಣಿಗಳಂತೆ, ಪರಸ್ಪರ ಆಕ್ರಮಣ ಮಾಡುವ ಅಮಾನುಷ ಕ್ರಮಗಳು ಮತ್ತು ಪೈಪೋಟಿ ಕಾಣಿಸುತ್ತದೆ.

ಕೋವಿಡ್ ಸಾಂಕ್ರಾಮಿಕದ ನಿಯಂತ್ರಣದ ಸಂದರ್ಭದಲ್ಲಿ ಅಗತ್ಯವಾಗಿರುವ ಸಂಪನ್ಮೂಲಗಳು, ಉಪಕರಣಗಳು, ಆಸ್ಪತ್ರೆ, ಹಾಸಿಗೆ, ಆಮ್ಲಜನಕ, ಔಷಧ, ಲಸಿಕೆ, ಆಂಬುಲೆನ್ಸ್ ಎಲ್ಲವೂ ಜೀವನಾಧಾರಕ್ಕೆ ಪೂರಕವಾಗಿ ಅನೇಕ ಮನುಷ್ಯರ ಶ್ರಮದಿಂದ ಉತ್ಪಾದನೆಗೊಂಡಿರುವ ಮಾನವೀಯ ವಸ್ತುಗಳು. ಆದರೆ ಅವು ಜೀವನಾಧಾರವನ್ನು ಉತ್ಪಾದಿಸುವ ಮನುಷ್ಯರ ನಿಯಂತ್ರಣದಲ್ಲಿರದೆ ಅದನ್ನು ಸಂಪಾದಿಸುವವರ ಅಂದರೆ ಪ್ರಾಣಿಗಳ ನಿಯಂತ್ರಣದಲ್ಲಿ ಇರುವುದರಿಂದಾಗಿ ಅವುಗಳ ಬಳಕೆಯಲ್ಲಿ ಮನುಷ್ಯತ್ವ ಕಾಣಿಸುತ್ತಿಲ್ಲ. ಮಾನವೀಯತೆ ಎಂಬುದು ಶ್ರಮಮಾಡದವರಿಗೆ ಸಂಬಂಧಿಸಿಲ್ಲದ ನಡವಳಿಕೆ ಎಂಬುದು ಈಗ ನಿಚ್ಚಳವಾಗಿದೆ.

ಕೋವಿಡ್‌ನಿಂದಾಗಿ ಸತ್ತವರ ಶವಸಂಸ್ಕಾರದ ಸಂದರ್ಭವನ್ನು ದುರುಪಯೋಗಮಾಡಿಕೊಂಡು ಹಣ ಮಾಡುತ್ತಿರುವವವರ ಅಮಾನವೀಯತೆಯೂ ಮೇಲುನೋಟಕ್ಕೆ ತೋರುವಂತೆ ಶವಸಂಸ್ಕಾರಕ್ಕೆ ಮಾತ್ರ ಸಂಬಂಧಿಸಿದ ವಿಷಯ ಅಲ್ಲ. ಅವರ ಅಮಾನವೀಯತೆ ಇರುವುದು ಬದುಕನ್ನು ಉತ್ಪಾದಿಸುವ ಬದಲು ಕೇವಲ ಸಂಪಾದಿಸುತ್ತಿರುವ, ಶ್ರಮ ಮಾಡದ ಜೀವಿಗಳ ಅಂದರೆ ಪ್ರಾಣಿಗಳ ನಿಯಂತ್ರಣಕ್ಕೆ ಸಿಕ್ಕಿ ನರಳುತ್ತಿರುವ ಶ್ರಮ ಮಾಡುವವರ ವಿಷಯದಲ್ಲಿ. ತಮ್ಮ ಬದುಕನ್ನು ತಾವೇ ಉತ್ಪಾದಿಸಿಕೊಳ್ಳಲು ನಿತ್ಯವೂ ಹೆಣಗುತ್ತಿರುವ, ಮಾನವೀಯರಾದ ಜನಸಾಮಾನ್ಯರ ವಿಷಯದಲ್ಲಿ. ಶ್ರಮ ಮಾಡಿ ಬದುಕನ್ನು ಉತ್ಪಾದಿಸಿಕೊಳ್ಳುವ ಮನುಷ್ಯರಿಗೆ ಮಾತ್ರ ಮಾನವೀಯತೆ ಸಾಧ್ಯ. ಆದ್ದರಿಂದ ಕೋವಿಡ್‌ನಿಂದಾಗಿ ಬಂದಿರುವ ಈ ಕಷ್ಟಕಾಲದಲ್ಲಿ ಮತ್ತು ಕೋವಿಡ್ ಕಳೆದ ಮೇಲೂ ಮಾನವೀಯತೆ ಸಾಧ್ಯವಾಗಬೇಕಾದರೆ ಮನುಷ್ಯರು ಅಂದರೆ ಶ್ರಮಮಾಡುವ ಜನಸಾಮಾನ್ಯ ಮನುಷ್ಯರು, ಪ್ರಾಣಿಗಳ ಮೇಲೆ ಅಂದರೆ, ಶ್ರಮ ಮಾಡದ ಮನುಷ್ಯ ರೂಪದ ಪ್ರಾಣಿಗಳ ಮೇಲೆ ನಿಯಂತ್ರಣ ಪಡೆಯಬೇಕು. ಅದು ಮಾನವೀಯತೆಯ ಅರಿವನ್ನು ಪಡೆದ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಂಘಟಿತರಾದ ಮನುಷ್ಯರಿಂದ ಸಾಧಿಸಬಹುದಾದ ಕಾರ್ಯ.



ಬ್ಲ್ಯಾಕ್ ಫಂಗಸ್ ಸುತ್ತ ಹಲವು ಪ್ರಶ್ನೆಗಳು....

ಪುಟ 8 ರಿಂದ

ಲಕ್ಷಣಗಳಿಲ್ಲದಿದ್ದರೆ ಯಾವುದೇ ಕಾರಣಕ್ಕೆ ಅನವಶ್ಯಕವಾಗಿ ಕೋವಿಡ್ ಕಾಯಿಲೆಯ ಮೊದಲ ವಾರದಲ್ಲಿ ಸ್ಟೀರೋಯ್ಡ್ ಚಿಕಿತ್ಸೆ ನೀಡಬಾರದು. ಹಾಗೂ ಈ ಚಿಕಿತ್ಸೆ ನೀಡಬೇಕಾದ ಸಂದರ್ಭ ಬಂದಾಗಲೂ ವೈದ್ಯಕೀಯ ಮೇಲ್ತನಿಖೆ ಇಲ್ಲದೇ ಇದನ್ನು ನೀಡಬಾರದು.

4) ಆಮ್ಲಜನಕದಲ್ಲಿ ತೇವಾಂಶ ಬರಲು ಭಟ್ಟಿ ಇಳಿಸಿದ ಅಥವಾ ಶುದ್ಧ ನೀರನ್ನು ಉಪಯೋಗಿಸಬೇಕು ಹಾಗೂ ಕೋವಿಡ್ ರೋಗಿಗೆ ವೈದ್ಯಕೀಯ ಮೇಲ್ತನಿಖೆ ಇಲ್ಲದೆ ಮನೆಯಲ್ಲೇ ಆಮ್ಲಜನಕ ನೀಡುವುದನ್ನು ಆದಷ್ಟು ಕಡಿಮೆ ಮಾಡಬೇಕು. ಆಮ್ಲಜನಕ ನೀಡುವ ಪರಿಕರಗಳಾದ ಸಿಲಿಂಡರ್, ನಳಿಕೆಗಳು, ವೆಂಟಿಲೇಟರ್, ಮಾಸ್ಕ್ ಮೊದಲಾದವುಗಳನ್ನು ಪ್ರತೀ ಭಾರಿ ಉಪಯೋಗಿಸುವ ಮೊದಲು ಶುದ್ಧಿಕರಿಸುವುದು ಅಗತ್ಯ.

5) ಕೋವಿಡ್ ಕಾಯಿಲೆ ಬಾರದಂತೆ ತಡೆಗಟ್ಟಲು ಬಂದರೆ ಗುಣಪಡಿಸಲು, ವೈಜ್ಞಾನಿಕವಾಗಿ ಸಾಬೀತಾಗದ ಮದ್ದುಗಳನ್ನು ಮೂಗಿನಲ್ಲಿ ಸುರಿಯಬಾರದು. ಅಥವಾ ಉಪಯೋಗಿಸಬಾರದು. ಹಲವು ವಿಟಮಿನ್ ಝಿಂಕ್ ಸಹಿತ ಇತರ ಲವಣ, ಮನೆ ಮದ್ದು ಇನ್ನಿತರ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹಲವರು ಕೋವಿಡ್ ಬಾರದಂತೆ ತಡೆಗಟ್ಟಲು ಉಪಯೋಗಿಸುತ್ತಾರೆ. ಇದರಿಂದ ಹಲವಾರು ಗಂಭೀರ ಅಡ್ಡ ಪರಿಣಾಮಗಳನ್ನು ಎದುರಿಸಬೇಕಾಗಬಹುದು. ಹಾಗು ದೇಹದಲ್ಲಿನ ಹೆಚ್ಚಿನ 'ಝಿಂಕ್' (Zinc) ಪ್ರಮಾಣ 'ಮ್ಯುಕರ್' ಫಂಗಸ್‌ಗಳ ಅಭಿವೃದ್ಧಿಗೆ ಸಹಕಾರಿ ಎನ್ನುವುದು ಈಗ ಅಧ್ಯಯನಗಳಿಂದ ತಿಳಿದು ಬಂದಿದೆ.

ಇನ್ನು ಕೋವಿಡ್ ತಡೆಗಟ್ಟಲು ಗೋಮೂತ್ರ ಪಾನ, ಇಡೀ ಶರೀರಕ್ಕೆ ಸೆಗಣಿಯ ಲೇಪನ ಮಾಡಿಕೊಳ್ಳುವ ವಿಷಯ ಕೇಳುತ್ತಿರುತ್ತೇವೆ. ಗೋಮೂತ್ರ, ಸೆಗಣಿ ಮ್ಯುಕರ್ ಫಂಗಸ್ಸಿನ ವಾಸಸ್ಥಾನ. ಇದರಿಂದ ಮ್ಯುಕರ್ ಮೈಕೋಸಿಸ್ ಸೋಂಕು ಬರುವ ಸಾಧ್ಯತೆ ಹೆಚ್ಚುತ್ತದೆ. ಈ ಸೋಂಕು ಪತ್ತೆ ಹಚ್ಚಲು ಪ್ರಾರಂಭವಾದ ಕೆಲವೇ ವಾರದಲ್ಲಿ ಅಂದರೆ ಮೇ 31 ರ ಒಳಗೆ ಕರ್ನಾಟಕದಲ್ಲಿ ಕಂಡು ಬಂದ ರೋಗಿಗಳ ಸಂಖ್ಯೆ 1371 ಹಾಗೂ ಮರಣ ಹೊಂದಿದವರ ಸಂಖ್ಯೆ 51.

ಆದರೆ ಆಶಾದಾಯಕ ಸಮಾಚಾರವೆಂದರೆ ಈ ಸೋಂಕಿನ ಸಂಖ್ಯೆ ಕೊಂಚ ಇಳಿಮುಖವಾಗುತ್ತಿದೆ ಎನ್ನುವ ವೈದ್ಯರ ಅಭಿಪ್ರಾಯ.

ರಾಷ್ಟ್ರೀಯ ರಂಗದ ಸರ್ಕಾರ, ಮತ್ತು ಕಾರ್ಮಿಕರ ಪರಿಸ್ಥಿತಿ 1989-1991



ಮೂಲ ಲೇಖಕರು: **ಸುಕೋಮಲ್ ಸೇನ್**
ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ್

1989 ರ ಅಂತ್ಯದ ವೇಳೆಗೆ ಅಧಿಕಾರಕ್ಕೆ ಬಂದ ರಾಷ್ಟ್ರೀಯ ರಂಗ ಸರಕಾರ ಜನರಿಗೆ ಹಲವಾರು ಸ್ವಾಗತಾರ್ಹ ಭರವಸೆಗಳನ್ನು ನೀಡಿತು. ಜನರ ಸಂಕಷ್ಟವನ್ನು ಹೆಚ್ಚಿಸಿದ್ದ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿತು. ಟ್ರೇಡ್ ಯೂನಿಯನ್ ಆಂದೋಲನದ ಬಾಕಿ ಉಳಿದಿದ್ದ ಕೆಲವು ಪ್ರಮುಖ ವಿಷಯಗಳ ಕುರಿತು ಸರ್ಕಾರವು ಹಲವಾರು ವಿಚಾರ ಸಂಕಿರಣಗಳನ್ನು ಕೂಡ ಆಯೋಜಿಸಿತು. ಉದ್ಯೋಗದ ಹಕ್ಕನ್ನು ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಪ್ರತಿಷ್ಠಾಪಿಸುವ ವಿಷಯವನ್ನು ಪರಿಶೀಲಿಸಲು ಸಂಪುಟ ಉಪಸಮಿತಿಯನ್ನು ನೇಮಿಸಿತು. 31 ಡಿಸೆಂಬರ್ 1980 ರಂದು ಬಿ.ಪಿ ಮಂಡಲ್ ಅಧ್ಯಕ್ಷತೆಯ, ಎರಡನೇ ಹಿಂದುಳಿದ ವರ್ಗ ಆಯೋಗ ಸಲ್ಲಿಸಿದ ಶಿಫಾರಸುಗಳ ಬಗ್ಗೆ ಧೀರ ನಿರ್ಧಾರ ಕೈಗೊಂಡಿತು. ಆದರೆ, ನವೆಂಬರ್ 1990 ರಲ್ಲಿ ರಾಷ್ಟ್ರೀಯ ರಂಗದ ಸರ್ಕಾರದ ಪತನದೊಂದಿಗೆ ಪರಿಸ್ಥಿತಿ ಶೀಘ್ರದಲ್ಲೇ ಬದಲಾಯಿತು. ಅಕ್ಟೋಬರ್ 1990 ರಲ್ಲಿ ದೇಶವು ಕೋಮು ಭಾವೋದ್ರೇಕಗಳ ಪುನರುತ್ಥಾನಕ್ಕೆ ಸಾಕ್ಷಿಯಾಯಿತು.

ಒಂಬತ್ತನೇ ಸಾರ್ವತ್ರಿಕ ಚುನಾವಣೆಯು ಕಾಂಗ್ರೆಸ್ (ಐ)ನ ಸೋಲಿನೊಂದಿಗೆ ಕೊನೆಗೊಂಡಿತು. ಯಾವುದೇ ಪಕ್ಷವು ಸಂಪೂರ್ಣ ಬಹುಮತವನ್ನು ಗಳಿಸಲು ಸಾಧ್ಯವಾಗಲಿಲ್ಲ. ಆದರೆ, ಜನತಾದಳವನ್ನು ಒಳಗೊಂಡಿದ್ದ ರಾಷ್ಟ್ರೀಯ ರಂಗ, ಆಂಧ್ರಪ್ರದೇಶದ ತೆಲುಗು ದೇಶಂ, ತಮಿಳುನಾಡಿನ ಡಿಎಂಕೆ ಮತ್ತು ಇತರ ಒಂದೆರಡು ಪ್ರಾದೇಶಿಕ ಪಕ್ಷಗಳು, 52 ಸದಸ್ಯರ ಎಡ ಪಕ್ಷಗಳ ಬೆಂಬಲದೊಂದಿಗೆ ಸರ್ಕಾರವನ್ನು ರಚಿಸಿದವು. ಬಿಜೆಪಿ ಮತದಾರರಲ್ಲಿ ಕೋಮುವಾದೀಕರಣದ ಲಾಭವನ್ನು ಅನುಭವಿಸಿ 88 ಸ್ಥಾನಗಳನ್ನು ಗೆದ್ದಿತು, ಅದು ಸಹ ರಾಷ್ಟ್ರೀಯ ರಂಗದ ಸರ್ಕಾರಕ್ಕೆ ಬೆಂಬಲವನ್ನು ನೀಡಿತು.

ಹೊಸ ಸರ್ಕಾರವು 1989 ರ ಡಿಸೆಂಬರ್ 20 ರಂದು ಸಂಸತ್ತಿನ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿಗಳ ಭಾಷಣದ ಮೂಲಕ ಜನರಿಗೆ ಹಲವಾರು ಸ್ವಾಗತಾರ್ಹ ಭರವಸೆಗಳನ್ನು ನೀಡಿತು. ಜನರ ಸಂಕಷ್ಟವನ್ನು ಹೆಚ್ಚಿಸಿದ್ದ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಸರ್ಕಾರ ಭರವಸೆ ನೀಡಿತು.

ಬೋಫೋರ್ಸ್ ಭ್ರಷ್ಟಾಚಾರದ ಹಗರಣದ ಬಗ್ಗೆ ಶೀಘ್ರ ತನಿಖೆ ನಡೆಸುವ ಭರವಸೆಯೊಂದಿಗೆ, ಅಂಚೆ ಮಸೂದೆಗಳಂತಹ ಕೆಲವು ಪ್ರಜಾಪ್ರಭುತ್ವ ವಿರೋಧಿ ಮಸೂದೆಗಳನ್ನು ಹಿಂತೆಗೆದುಕೊಳ್ಳುವುದು, ಅಧಿಕೃತ ಗೌಪ್ಯತೆ ಕಾಯ್ದೆಗೆ ತಿದ್ದುಪಡಿ. ಜನರಿಂದ ಮಾಹಿತಿಯನ್ನು ತಡೆಹಿಡಿಯಲು ಪ್ರಯತ್ನಿಸುವ ಆಯೋಗಕ್ಕೆ ತಿದ್ದುಪಡಿಗಳು, ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಹೆಚ್ಚಿನ ಸ್ವಾಯತ್ತತೆಯನ್ನು ಒದಗಿಸುವುದು, ಆರ್ಥಿಕ ರಂಗದಲ್ಲಿ ಉತ್ಪಾದಕ ಉದ್ಯೋಗಾವಕಾಶಗಳ ವಿಸ್ತರಣೆ, ದುಡಿಯುವ ಹಕ್ಕು, ಭೂಮಿ ವಿತರಣೆಮಾಡುವ ಭೂ ಸುಧಾರಣೆಗಳ ಭರವಸೆ ಮತ್ತು ಉಳುವವರಿಗೆ ಭೂಮಿಯ ಮಾಲೀಕತ್ವ ನೀಡುವ ಭರವಸೆ ನೀಡಲಾಯಿತು.

ಈ ಮಧ್ಯೆ ಟ್ರೇಡ್ ಯೂನಿಯನ್ ಆಂದೋಲನದ ಬಾಕಿ ಉಳಿದಿದ್ದ ಕೆಲವು ಪ್ರಮುಖ ವಿಷಯಗಳ ಕುರಿತು ಸರ್ಕಾರವು ಹಲವಾರು ವಿಚಾರ ಸಂಕಿರಣಗಳನ್ನು ಆಯೋಜಿಸಿತು.

ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ

ಸರ್ಕಾರದ ಕಾರ್ಮಿಕ ಮತ್ತು ಕೈಗಾರಿಕೆ ಸಚಿವಾಲಯಗಳು– ಜಂಟಿಯಾಗಿ 8–9 ಜನವರಿ 1990 ರಂದು ನವದೆಹಲಿಯಲ್ಲಿ "ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ" ಕುರಿತು ಎರಡು ದಿನಗಳ ಸುದೀರ್ಘ ವಿಚಾರ ಸಂಕಿರಣವನ್ನು ಆಯೋಜಿಸಿದವು. ಕೇಂದ್ರ ಕಾರ್ಮಿಕ ಸಂಘಗಳ ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಿದರು.

ಅಂತಿಮವಾಗಿ, ಸೆಮಿನಾರ್, ಸಂಘಗಳ ಮಾನ್ಯತೆ ಮತ್ತು ಆಡಳಿತದಲ್ಲಿ ಭಾಗವಹಿಸಲು ಕಾರ್ಮಿಕರ ಪ್ರಾತಿನಿಧ್ಯಕ್ಕಾಗಿ ರಹಸ್ಯ ಮತದಾನವನ್ನು ಶಿಫಾರಸು ಮಾಡಿತು.

ರಹಸ್ಯ ಮತದಾನದ ಪ್ರಶ್ನೆಗೆ ಶಾಸನಬದ್ಧ ಪರಿಣಾಮವನ್ನು ನೀಡಲು, ಶಾಸನವನ್ನು ರಚಿಸಲು ವಿಚಾರ–ಸಂಕಿರಣ ಸರ್ವಾನುಮತದಿಂದ ಶಿಫಾರಸು ಮಾಡಿತು.

ಕಟ್ಟಡ ನಿರ್ಮಾಣ ಕಾರ್ಮಿಕರ ರಾಷ್ಟ್ರೀಯ ವಿಚಾರಸಂಕಿರಣ

ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯವು ನಿರ್ಮಾಣ ಕೈಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಒಂದು ಕೇಂದ್ರ ಶಾಸನ ರಚನೆಯ ಪ್ರಶ್ನೆಯನ್ನು ಪರಿಗಣಿಸಲು ಫೆಬ್ರವರಿ 12, 1990 ರಂದು ನವದೆಹಲಿಯಲ್ಲೊಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿತು.

ವಾಸ್ತವವಾಗಿ, ಈ ವಿಸ್ತಾರವಾದ ಉದ್ಯಮವು ಒಂದು ವಲಯವಾಗಿ ದೇಶದ ಎರಡನೇ ಅತ್ಯಂತ ದೊಡ್ಡ ಆರ್ಥಿಕ ಚಟುವಟಿಕೆಯಲ್ಲಿ, ಕೃಷಿಯ ನಂತರದ ಸ್ಥಾನದಲ್ಲಿದೆ. ಈ ಹಿಂದೆ ನಿರ್ಮಾಣ ಉದ್ಯಮದ ಕಾರ್ಮಿಕರಿಗೆ ಹಲವಾರು ಶಾಸನಗಳು ಅನ್ವಯವಾಗುತ್ತಿದ್ದವು, ಆದರೆ ಉದ್ಯಮದ ಸ್ವರೂಪದಿಂದ ಆ ಶಾಸನಗಳು ಸಮರ್ಪಕವಾಗಿರಲಿಲ್ಲ. ಈ ಉದ್ಯಮದ ಕಾರ್ಮಿಕರಿಗೆ ಕನಿಷ್ಠ ವೇತನವಿರಲಿಲ್ಲ, ವೇತನದ ಏಕರೂಪತೆಯೂ ಇರಲಿಲ್ಲ, ಸೇವಾ ಭದ್ರತಾ ಕ್ರಮಗಳಿರಲಿಲ್ಲ, ವಸತಿ ಯೋಜನೆ ಇರಲಿಲ್ಲ, ಆರೋಗ್ಯ ರಕ್ಷಣೆಯಿರಲಿಲ್ಲ, ಸುರಕ್ಷತಾ ನಿಯಮಗಳಿರಲಿಲ್ಲ. ಆದ್ದರಿಂದ ಈ ಸಮಸ್ಯೆಗಳನ್ನು ಪರಿಹರಿಸಲು ಈ ಉದ್ಯಮದ ಕಾರ್ಮಿಕರಿಗಾಗಿ ಪ್ರತ್ಯೇಕವಾಗಿ ಕೇಂದ್ರ ಶಾಸನವೊಂದರ ತುರ್ತು ಅಗತ್ಯವಿತ್ತು

ಸೆಮಿನಾರ್‌ನಲ್ಲಿ ಭಾಗವಹಿಸಿದ್ದ ನ್ಯಾಯಮೂರ್ತಿ (ನಿವೃತ್ತ) ವಿ.ಆರ್.ಕೃಷ್ಣ ಅಯ್ಯರ್ ಮತ್ತು ನ್ಯಾಯಮೂರ್ತಿ (ನಿವೃತ್ತ) ಪಿ.ಎಸ್.ಪಾಟಿ, ಕಾರ್ಮಿಕರನ್ನು ನೇಮಕ ಮಾಡಲು ಮತ್ತು ನಿಯಂತ್ರಿಸಲು ನಿರ್ಮಾಣ ಕಾರ್ಮಿಕ ಮಂಡಳಿಗೆ ಅಧಿಕಾರ ನೀಡದಿದ್ದರೆ ಯಾವುದೇ ಕೇಂದ್ರ ಶಾಸನದ ಉದ್ದೇಶವು ವಿಫಲವಾಗುವುದು ಎಂದು ಸ್ಪಷ್ಟವಾಗಿ ಹೇಳಿದರು. ಅಂತಿಮವಾಗಿ, ಕೇಂದ್ರ ಕಾರ್ಮಿಕ ಸಚಿವರು ಸಂಸತ್ತಿನ ಮುಂದಿನ ಬಜೆಟ್ ಅಧಿವೇಶನದಲ್ಲಿ ಕೇಂದ್ರ ಶಾಸನವನ್ನು ಮಂಡಿಸುವ ಭರವಸೆಯನ್ನು ಭಾಗವಹಿಸಿದವರಿಗೆ ನೀಡಿದರು ಮತ್ತು ಕಾರ್ಮಿಕರನ್ನು ನೇಮಕ ಮಾಡುವ ಮತ್ತು ನಿಯಂತ್ರಿಸುವ ಅಧಿಕಾರವನ್ನು ಹೊಂದಿರುವ ನಿರ್ಮಾಣ ಕಾರ್ಮಿಕ ಮಂಡಳಿಯು ಶಾಸನದ ಒಂದು ಭಾಗವಾಗಲಿದೆ ಎಂದು ಹೇಳಿದರು.

ಕೃಷಿ ಕಾರ್ಮಿಕರ ರಾಷ್ಟ್ರೀಯ ಸೆಮಿನಾರ್

ಕಾರ್ಮಿಕ ಸಚಿವಾಲಯದ ಅಧೀನದಲ್ಲಿರುವ ಗ್ರಾಮೀಣ ಕಾರ್ಮಿಕರ ರಾಷ್ಟ್ರೀಯ ಆಯೋಗವು 1990 ರ ಮಾರ್ಚ್ 8–9ರಂದು ದೆಹಲಿಯಲ್ಲಿ ಕೃಷಿ ಕಾರ್ಮಿಕರ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿತು. ಭೂ ಸುಧಾರಣೆಗಳು, ಉದ್ಯೋಗ ಸೃಷ್ಟಿ, ಕೃಷಿ ಕಾರ್ಮಿಕರಿಗೆ ಅವರ ಉದ್ಯೋಗ, ಕೆಲಸದ ಪರಿಸ್ಥಿತಿಗಳು, ವೇತನ, ಸೇವಾ ಭದ್ರತಾ ಕ್ರಮಗಳನ್ನು ನಿಯಂತ್ರಿಸಲು ಮತ್ತು ಶಾಸನಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಗಣಿಸಲು ಈ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ಸೆಮಿನಾರ್ ಕ್ಯಾಲೊರಿ ಅಗತ್ಯತೆಗಳು ಮತ್ತು ಇಂಧನ, ಬಟ್ಟೆ, ವಸತಿ ಮುಂತಾದ ಇತರ ಅವಶ್ಯಕತೆಗಳ ಆಧಾರದ ಮೇಲೆ ಕನಿಷ್ಠ ವೇತನವನ್ನು ನಿಗದಿಪಡಿಸುವ ಮಾನದಂಡವನ್ನು ನಿರ್ಧರಿಸುವ ಕೇಂದ್ರ ಶಾಸನವೊಂದಕ್ಕೆ ಶಿಫಾರಸು ಮಾಡಿತು. ವಿವಾದಗಳನ್ನು ಬಗೆಹರಿಸುವುದು, ಕೆಲಸದ ಸುರಕ್ಷತೆ, ಸಾಮಾಜಿಕ ಭದ್ರತೆ, ಮಾತೃತ್ವ ಸೌಲಭ್ಯ, ವೃದ್ಧಾಪ್ಯ ಪಿಂಚಣಿ, ಸುರಕ್ಷತೆ, ಅಪಘಾತ ಸೌಲಭ್ಯಗಳು, ಸಮಾನ ವೇತನ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗಕ್ಕೆ ವಿಶೇಷ ರಕ್ಷಣೆ ಇತ್ಯಾದಿ ಗಳನ್ನು ಅಂತಹ ಶಾಸನ ಒಳಗೊಳ್ಳಬೇಕು.. ಭೂಮಿಯನ್ನು ಆಸ್ತಿಯಾಗಿ ಪರಿಗಣಿಸದೆ, ಜೀವನೋಪಾಯದ ವಿಶೇಷ ಮೂಲವಾಗಿ ಪರಿಗಣಿಸಿ ಮತ್ತು, ಕೃಷಿ ಬೆಳವಣಿಗೆ ಮತ್ತು ಉತ್ಪಾದಕತೆಯ ಹೆಚ್ಚಳ, ಭೂ ದಾಖಲೆಗಳ ನಿರ್ವಹಣೆ ಇತ್ಯಾದಿ. ಗಳಿಗಾಗಿ ಸಂಪೂರ್ಣ ಭೂ ಸುಧಾರಣೆಗಳಿಗಾಗಿ ಕಾನೂನನ್ನು ಜಾರಿಗೆ ತರಲು ಶಿಫಾರಸು ಮಾಡಿತು.

ಹೀಗೆ ದೇಶದ ಕೃಷಿ ಕಾರ್ಮಿಕರ ಬಹುಮುಖ್ಯ ವಿಷಯಗಳ ಕುರಿತು ಚರ್ಚಿಸಿದ ವಿಚಾರ ಸಂಕಿರಣವು ಒಂದು ಕಡೆ ಭೂಮಾಲೀಕರ ಲಾಬಿಯ ವಿರೋಧದಿಂದಾಗಿ ಮತ್ತು ಸ್ವತ: ಸರ್ಕಾರದ ಕಡೆಯಿಂದ ಹೇಡಿತನದಿಂದಾಗಿ ಕೃಷಿ ಕಾರ್ಮಿಕರ ಶೋಚನೀಯ ಸ್ಥಿತಿಯನ್ನು ಸುಧಾರಿಸುವ ಕ್ರಮಗಳ ಬಗ್ಗೆ ದೃಢವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ.

'ಉದ್ಯೋಗದ ಹಕ್ಕಿಗಾಗಿ' ಹೋರಾಟ

ರಾಷ್ಟ್ರೀಯ–ರಂಗದ ಸರ್ಕಾರ ತನ್ನ ನೀತಿ ಘೋಷಣೆಗಳಲ್ಲಿ, ಕೇಂದ್ರ ಶಾಸನವೊಂದರ ಮೂಲಕ 'ಉದ್ಯೋಗದ ಹಕ್ಕಿ' ಗೆ ಸಾಂವಿಧಾನಿಕ ಭರವಸೆ ನೀಡುತ್ತದೆ ಎಂದು ವಾಗ್ದಾನ ಮಾಡಿತ್ತು.

ಅನೇಕ ಕಾರ್ಮಿಕ ಸಂಘಗಳು, ಭಾರತೀಯ ಸಮಾಜದ ಈ ಅತ್ಯಂತ ಪ್ರಮುಖ ಸಮಸ್ಯೆಯ ಮೇಲೆ ಸರ್ಕಾರದ ಸದ್ಭಾವನೆಯನ್ನು ಮಾತ್ರ ಅವಲಂಬಿಸಿರುವುದು ಸೂಕ್ತವಲ್ಲವೆಂದು ಭಾವಿಸಿದ್ದರಿಂದ, ಈ ಪರಿಸ್ಥಿತಿಯಲ್ಲಿ, ಉದ್ಯೋಗದ–ಹಕ್ಕನ್ನು' ಪಡೆದುಕೊಳ್ಳಲು ಸಾಮೂಹಿಕ ನೆಲೆಯ ಆಂದೋಲನವನ್ನು ರೂಪಿಸುವ ಅವಶ್ಯಕತೆಯಿದೆ ಎಂದು ಭಾವಿಸಿದ್ದವು., ಈ ಸ್ಪಷ್ಟ ಗ್ರಹಿಕೆಯೊಂದಿಗೆ 1990ರ ಏಪ್ರಿಲ್ 2–4 ರಂದು ದುರ್ಗಾಪುರದಲ್ಲಿ 'ಉದ್ಯೋಗದ–ಹಕ್ಕು' ಕುರಿತು ಅಖಿಲ ಭಾರತ ಸಮಾವೇಶವನ್ನು ಆಯೋಜಿಸಲಾಯಿತು.

ರಾಷ್ಟ್ರೀಯ ರಂಗದ ಪ್ರಣಾಳಿಕೆಯು ಉದ್ಯೋಗದ ಹಕ್ಕನ್ನು ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಪ್ರತಿಷ್ಠಾಪಿಸಲು ಬದ್ಧವಾಗಿತ್ತು.. ಅಧಿಕಾರ ವಹಿಸಿಕೊಂಡ ನಂತರ, ಸರ್ಕಾರವು ಈ ವಿಷಯವನ್ನು ಪರಿಶೀಲಿಸಲು ಸಂಪುಟ ಉಪಸಮಿತಿಯನ್ನು ನೇಮಿಸಿತು.

ಉದ್ಯೋಗದ–ಹಕ್ಕಿನ ಪರಿಕಲ್ಪನೆಯು ಈಗಾಗಲೇ ಸಂವಿಧಾನದಲ್ಲಿ ಪ್ರಭುತ್ವ ನೀತಿಯ ನಿರ್ದೇಶನ ತತ್ವಗಳ ಅಧ್ಯಾಯದಲ್ಲಿದೆ. "ಪ್ರಭುತ್ವವು ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಯಲ್ಲಿ, ಉದ್ಯೋಗದ ಹಕ್ಕನ್ನು, ಶಿಕ್ಷಣದ–ಹಕ್ಕು ಮತ್ತು ನಿರುದ್ಯೋಗ ಮತ್ತು ವೃದ್ಧಾಪ್ಯದ ಕಾಯಿಲೆ ಮತ್ತು ಅಂಗವೈಕಲ್ಯ ಮತ್ತು ಇತರ ಅರ್ಹ ಬಯಕೆಯ ಸಂದರ್ಭದಲ್ಲಿ ಸಾರ್ವಜನಿಕ ಸಹಾಯವನ್ನು ಪಡೆಯಲು ಪರಿಣಾಮಕಾರಿ ಅವಕಾಶವನ್ನು ಒದಗಿಸುತ್ತದೆ'. ಎಂದು ಅದು ಹೇಳುತ್ತದೆ.

'ಉದ್ಯೋಗದ–ಹಕ್ಕು' ಸರ್ಕಾರದ ಆರ್ಥಿಕ ನೀತಿಗಳಲ್ಲಿ, ವಿಶೇಷವಾಗಿ ಕೃಷಿ ಮತ್ತು ಉದ್ಯಮದಲ್ಲಿ ಆಮೂಲಾಗ್ರ ಬದಲಾವಣೆಗೆ ಕಾರಣವಾಗಲಿದೆ ಎಂದು ಸಮಾವೇಶವು ಅಭಿಪ್ರಾಯಪಟ್ಟಿತು ಮತ್ತು 'ಉದ್ಯೋಗದ ಹಕ್ಕು' ಪರಿಕಲ್ಪನೆಯ ಪ್ರಾಯೋಗಿಕ ಸಾಕ್ಷಾತ್ಕಾರಕ್ಕಾಗಿ ತಕ್ಷಣದ, ಅಲ್ಪಾವಧಿಯ ಮತ್ತು ದೀರ್ಘಾವಧಿಯ ಕ್ರಮಗಳನ್ನು ಸೂಚಿಸಿತು. ನಿರುದ್ಯೋಗಿ ಯುವಜನರಿಗೆ ಉದ್ಯೋಗವನ್ನು ನೀಡುವವರೆಗೆ ನಿರುದ್ಯೋಗ ಭತ್ಯೆನೀಡಲು ಒತ್ತಾಯಿಸಿತು.

ದುರ್ಗಾಪುರ ಸಮಾವೇಶದ ನಂತರ ವಿವಿಧ ಕಾರ್ಮಿಕ ಸಂಘಗಳು ಸಭೆ ಮತ್ತು ಗುಂಪು ಚರ್ಚೆಗಳ ನಂತರ ಉದ್ಯೋಗದ ಹಕ್ಕಿನ ಸಾಂವಿಧಾನಿಕ ಖಾತರಿಯ ಅವಶ್ಯಕತೆಯ ಕುರಿತು ಚರ್ಚಿಸಿದವು. ನಿರುದ್ಯೋಗಿ ಯುವಕರಿಗೆ ಈ ಹಕ್ಕನ್ನು ನಿಜವಾದ ಪ್ರಯೋಜನದೊಂದಿಗೆ ಹೇಗೆ ಖಾತರಿಪಡಿಸಬಹುದು ಎಂಬುದರ ಕುರಿತು ಹಲವಾರು ಬರಹಗಳು ಸಲಹೆಗಳೊಂದಿಗೆ ಬಂದವು. ಪರಿಕಲ್ಪನೆಯ ಜಾರಿಗೆ ಅಗತ್ಯವಾದ ಪೂರ್ವ–ಸ್ಥಿತಿಯಾಗಿದ್ದ ಉದ್ಯೋಗ ಸೃಷ್ಟಿಯ ಪ್ರಶ್ನೆಯನ್ನು ವಿವಿಧ ಕೋನಗಳಿಂದ ಒತ್ತಿ ಹೇಳಲಾಯಿತು.

ದುರ್ಗಾಪುರ ಸಮಾವೇಶದ ನಿರ್ಧಾರಕ್ಕೆ ಅನುಗುಣವಾಗಿ 1990 ರ ಸೆಪ್ಟೆಂಬರ್ 2 ರಂದು ದೆಹಲಿಯಲ್ಲಿ ಉದ್ಯೋಗದ ಹಕ್ಕಿನ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

ಈ ಆಂದೋಲನವು ಮತ್ತಷ್ಟು ವೇಗ ಮತ್ತು ವಿಸ್ತಾರವನ್ನು ಪಡೆಯುವ ಮೊದಲು, ಉದ್ಯೋಗದ ಹಕ್ಕಿಗಾಗಿ ಈ ನೀತಿ ಘೋಷಣೆ ಮಾಡಿದ ಮತ್ತು ಈ ಗುರಿಯೊಂದಿಗೆ ಮುಂದುವರಿಯಲು ಅನುಕೂಲಕರ ರಾಜಕೀಯ ವಾತಾವರಣವನ್ನು ಸೃಷ್ಟಿಸಿದ್ದ ವಿ.ಪಿ. ಸಿಂಗ್ ಸರ್ಕಾರ 1990 ರ ನವೆಂಬರ್ 7 ರಂದು ಕುಸಿಯಿತು.

ಭಾರತದ ಕಾರ್ಮಿಕ ಸಮ್ಮೇಳನ –29ನೇ ಅಧಿವೇಶನ

1990 ರ ಏಪ್ರಿಲ್ 21 ಮತ್ತು 22 ರಂದು ನವದೆಹಲಿಯಲ್ಲಿ ನಡೆದ ತ್ರಿಪಕ್ಷೀಯ ಭಾರತದ ಕಾರ್ಮಿಕ ಸಮ್ಮೇಳನದ ಇಪ್ಪತ್ತೊಂಬತ್ತನೇ ಅಧಿವೇಶನವನ್ನು ಕರೆಯುವ ಮೂಲಕ ರಾಷ್ಟ್ರೀಯ ರಂಗದ ಸರ್ಕಾರ ಕಾರ್ಮಿಕ ಕ್ಷೇತ್ರದಲ್ಲಿ ಮತ್ತೊಂದು ಉಪಕ್ರಮವನ್ನು ತೆಗೆದುಕೊಂಡಿತು.

ಭಾರತದ ಕಾರ್ಮಿಕ ಸಮ್ಮೇಳನದ ಈ ಇಪ್ಪತ್ತೊಂಬತ್ತನೇ ಅಧಿವೇಶನ ತೆಗೆದುಕೊಂಡ ಮುಖ್ಯ ತೀರ್ಮಾನಗಳೆಂದರೆ: ಎ) ಜನವರಿ 1985 ರಲ್ಲಿ ನಡೆದ ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆಯ ಕುರಿತ ರಾಷ್ಟ್ರೀಯ ಸೆಮಿನಾರ್‌ನ, ಆಡಳಿತದಲ್ಲಿ ಭಾಗವಹಿಸುವ ಎಲ್ಲಾ ಪ್ರತಿನಿಧಿಗಳನ್ನು ರಹಸ್ಯ ಮತದಾನದ ಮೂಲಕ ಆಯ್ಕೆ ಮಾಡಬೇಕು ಎನ್ನುವ ತೀರ್ಮಾನಗಳನ್ನು ಪುನರುಚ್ಚರಿಸಿದ್ದು. ಬಿ) ಮೇ 1988 ರಲ್ಲಿ ಸಂಸತ್ತಿನಲ್ಲಿ ಪರಿಚಯಿಸಲಾದ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ರದ್ದುಪಡಿಸಬೇಕು ಎನ್ನುವ ಸರ್ವಾನುಮತದ ಶಿಫಾರಸ್ಸು ಮತ್ತು ಸಿ) ಹೊಸ ಕೈಗಾರಿಕಾ ಸಂಬಂಧಗಳ ಮಸೂದೆಯ ರೂಪುರೇಷೆಗಳನ್ನು ಪ್ರಸ್ತಾಪಿಸಲು ತ್ರಿಪಕ್ಷೀಯ ಸಮಿತಿಯನ್ನು ನೇಮಿಸಬೇಕು.

ಕೈಗಾರಿಕಾ ಸಂಬಂಧ' ಮಸೂದೆಯ ಕಾರ್ಯಸೂಚಿಗೆ ಸಂಬಂಧಿಸಿದಂತೆ, ಎಲ್ಲಾ ಸದಸ್ಯರು ಸರ್ವಾನುಮತದಿಂದ ಅದನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು ಮತ್ತು ಸರ್ಕಾರವು ಪ್ರಸ್ತಾಪವನ್ನು ಒಪ್ಪಿಕೊಳ್ಳಬೇಕಾಯಿತು. ವಿವಿಧ ಕಾರ್ಮಿಕ ಸಂಘಗಳ ಸದಸ್ಯತ್ವ ಸಾಮರ್ಥ್ಯವನ್ನು ನಿರ್ಧರಿಸುವ ಮಾರ್ಪಡಿಸಿದ ಕಾರ್ಯವಿಧಾನವನ್ನು ಸಾಮಾನ್ಯವಾಗಿ ಸಮ್ಮೇಳನವು ಅಂಗೀಕರಿಸಿತು. ಆದಾಗ್ಯೂ, ಕೃಷಿ ಕಾರ್ಮಿಕರ ಸದಸ್ಯತ್ವದ ಪರಿಶೀಲನೆಗೆ ಸಂಬಂಧಿಸಿದಂತೆ, ಯಾವುದೇ ಒಮ್ಮತಕ್ಕೆ ಬರಲು ಸಾಧ್ಯವಾಗಲಿಲ್ಲ

ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಸೇರಿ ವಿಕಸನಗೊಂಡ ಏಕೀಕೃತ ವಿಧಾನದಿಂದಾಗಿ

ಪುಟ 14 ನೋಡಿ

“ಎಲ್ಲರಿಗೂ ಉಚಿತ ಕೊವಿಡ್ ಲಸಿಕೆ”

ಪುಟ 8 ರಿಂದ

ಕಾರ್ಯಾಂಗದ ಧೋರಣೆಗಳಿಂದಾಗಿ ನಾಗರಿಕರ ಸಂವಿಧಾನಿಕ ಹಕ್ಕುಗಳು ಭಂಗವಾಗುತ್ತಿರುವಾಗ ನ್ಯಾಯಾಲಯಗಳು ಮೂಕಪ್ರೇಕ್ಷಕರಾಗಿರಬೇಕೆಂದು ಕಂಡರಿಸಿಲ್ಲ. ಕಾರ್ಯಾಂಗ ರೂಪಿಸಿದ ಧೋರಣೆಗಳ ನ್ಯಾಯಾಂಗ ಪರಾಮರ್ಶೆ ಮತ್ತು ಅವುಗಳಿಗೆ ಸಂವಿಧಾನಿಕ ಸಮರ್ಥನೆಗಳನ್ನು ಕೋರುವುದು ನ್ಯಾಯಾಲಯಗಳಿಗೆ ವಿಧಿಸಿರುವ ಒಂದು ಆವಶ್ಯಕ ಕ್ರಿಯೆ” ಎಂದು ಜೂನ್ 2 ರಂದು ಪ್ರಕಟವಾದ ತನ್ನ ಆದೇಶದಲ್ಲಿ ಈ ಸುಪ್ರಿಂ ಕೋರ್ಟ್ ಪೀಠ ಹೇಳಿತು ಎಂಬುದು ಕೂಡ ಅಷ್ಟೇ ಗಮನಾರ್ಹ.

ಸುಪ್ರಿಂ ಕೋರ್ಟ್ ತನ್ನ ಆದೇಶದಲ್ಲಿ ಹಲವು ವಿಷಯಗಳನ್ನು ಕೇಂದ್ರ ಸರಕಾರದ ಮುಂದಿಟ್ಟು, ಇವುಗಳಿಗೆ ಪ್ರತಿಯೊಂದಕ್ಕೂ ಪ್ರತ್ಯೇಕವಾಗಿ, ವಿವರಗಳನ್ನು 15 ದಿನಗಳಲ್ಲಿ ಕೊಡಬೇಕು ಎಂದು ಹೇಳಿದೆ. ಲಸಿಕೆ ಖರೀದಿಯ ಬಗ್ಗೆ ನಡೆದಿರುವ ಎಲ್ಲ ಮಾತುಕತೆಗಳ ಪೂರ್ಣ ವಿವರಗಳು, 18–44 ವಯೋಗುಂಪಿನವರಿಗೆ ಲಸಿಕೆ ಕುರಿತಂತೆ ತಾರತಮ್ಯಕ್ಕೆ ಕಾನೂನಾತ್ಮಕ ಸಮರ್ಥನೆಗಳು, ರಾಜ್ಯಗಳಿಗೆ ಹೆಚ್ಚಿನ ಬೆಲೆಗಳು, ಹಾಗೂ ರಾಜ್ಯಗಳಿಗೆ ಮತ್ತು ಖಾಸಗಿಯವರಿಗೆ ಕೋಟಾಗಳು ಇವನ್ನು ಕೇಂದ್ರ ಸರಕಾರ ಹೇಗೆ ನಿರ್ಧರಿಸುತ್ತದೆ ಹಾಗೂ ನಿಭಾಯಿಸುತ್ತದೆ, ಲಸಿಕೆಗೆಂದು ಬಜೆಟಿನಲ್ಲಿ ತೆಗೆದಿಟ್ಟ ರೂ.35,000 ಕೋಟಿಯನ್ನು ಹೇಗೆ ಖರ್ಚು ಮಾಡಲಾಗುತ್ತದೆ , ಡಿಸೆಂಬರ್ 31ರೊಳಗೆ ಎಲ್ಲರಿಗೆ ಲಸಿಕೆ ಹಾಕುವುದನ್ನು ಖಾತ್ರಿಪಡಿಸಲು ರೂಪಿಸಿರುವ ಮಾರ್ಗಸೂಚಿಗಳು ಇವನ್ನೆಲ್ಲ ತಿಳಿಸಬೇಕೆಂದು ಆದೇಶದಲ್ಲಿ ಹೇಳಲಾಗಿದೆ.

ಇವನ್ನು ಗಮನಿಸಿದಾಗ, ಈಗ ಮೋದಿಯವರ ಉಚಿತ ಲಸಿಕೆ ಘೋಷಣೆಯ ಹಿಂದೆ ಸುಪ್ರೀಂ ಕೋರ್ಟ್ ಮಹತ್ವದ ಪಾತ್ರವನ್ನು ವಹಿಸಿದೆ. ಎಂಬುದರ ಬಗ್ಗೆ ಸಂದೇಹವೇನೂ ಉಳಿಯುವುದಿಲ್ಲ.

ಇನ್ನೊಂದು ಅನಗತ್ಯ ಅಸತ್ಯ

ಪ್ರಧಾನಿಗಳು ತಮ್ಮ ಕೊವಿಡ್ ಲಸಿಕೆ ನೀತಿಯನ್ನು ಸಮರ್ಥಿಸಿಕೊಳ್ಳಲು, ಈ ಮೊದಲು ಭಾರತ ಲಸಿಕೆಗಳನ್ನು ಪಡೆಯಲು ದಶಕಗಳ ಕಾಲ ಕಾಯಬೇಕಾಗಿತ್ತು ಮತ್ತು ತಮ್ಮ ಸರಕಾರ ಬಂದ ಮೇಲೆ ಸಾರ್ವತ್ರಿಕ ಲಸಿಕೀಕರಣದ ಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸಲು ‘ಮಿಷನ್ ಇಂದ್ರಧನುಷ್’ ತರಲಾಯಿತು ಎಂದಿದ್ದಾರೆ. ಇದರಿಂದಾಗಿ 2014ರ ವರೆಗೆ ಕೇವಲ 60% ಇದ್ದ ಲಸಿಕೆ ಕವರೇಜ್ ಈಗ 90%ದ ವರೆಗೆ ಬಂದಿದೆ ಎಂದರು.

ಭಾರತ ಲಸಿಕೆಗಳಿಗೆ ದಶಕಗಳ ಕಾಯಬೇಕಾಗಿತ್ತು ಎಂಬುದು ನಿಜವಲ್ಲ, 1897ರಲ್ಲಿ ಮುಂಬೈಯಲ್ಲಿ ಪ್ಲೇಗ್ ವಿರುದ್ಧ ಲಸಿಕೆ ಕಂಡು ಹಿಡಿದಂದಿನಿಂದಲೂ ಭಾರತ ಲಸಿಕೆಗಳನ್ನು ದೇಶೀಯುವಾಗಿ ಉತ್ಪಾದಿಸುವಲ್ಲಿ ಎಂದೂ ಹಿಂದೆ ಬಿದ್ದಿಲ್ಲ ಎಂದು ಪರಿಣಿತರು ಹೇಳುತ್ತಾರೆ(ದಿ ಹಿಂದು, ಜೂನ್ 9). ಪ್ರಧಾನಿಗಳು ಕೊಟ್ಟಿರುವ ಅಂಕಿ–ಆಂಶಗಳು ಕೂಡ ಪ್ರಶ್ನಾರ್ಹ(ನ್ಯೂಸ್ ಲಾಂಡ್ರಿ, ಜೂನ್ 8) ಎಂಬುದು ಒಂದು ಅಂಶವಾಗಿದ್ದರೆ, ಇದಕ್ಕೂ ಎಪ್ರಿಲ್ 19ರ ಲಸಿಕೆ ನೀತಿಯಲ್ಲಿ ಯು–ಟರ್ನ್ ಮಾಡುವುದಕ್ಕೂ ಏನು ಸಂಬಂಧ ಎಂದು ಹಲವರು ಪ್ರಶ್ನಿಸಿದ್ದಾರೆ. ಜನಗಳ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ಇದಷ್ಟೇ ಎಂದು ಅವರು ಹೇಳುತ್ತಾರೆ. ಏಕೆಂದರೆ ತಮ್ಮ ಸರಕಾರದಿಂದಾಗಿಒಂದೇ ವರ್ಷದೊಳಗೆ ಭಾರತದಲ್ಲಿ ಎರಡು ಲಸಿಕೆಗಳು ಬಂದವು ಎಂದು ಹೇಳುವ ಪ್ರಯತ್ನ ಅವರದ್ದು. ಆದರೆ ಪೂರ್ಣವಾಗಿ ಲಸಿಕೆ ಪಡೆದವರ ಪ್ರಮಾಣ ಈಗಲೂ 4% ದಾಟಿಲ್ಲ ಏಕೆ ಎಂಬುದನ್ನು ಹೇಳಿಲ್ಲ.

ಎಲ್ಲರಿಗೂ ಲಸಿಕೆ ಹಾಕಿಸಲು 216 ಕೋಟಿ ಡೋಸ್‌ಗಳು ಬೇಕಿವೆ. ಇಲ್ಲಿನ ಎರಡು ಲಸಿಕೆ ತಯಾರಿಕಾ ಕಂಪನಿಗಳ ವಾರ್ಷಿಕ ಉತ್ಪಾದನಾ ಸಾಮರ್ಥ್ಯ ಕೇವಲ 30–35 ಕೋಟಿ ಮಾತ್ರ. ಇಲ್ಲಿಯ ವರೆಗೆಗೆ 23 ಕೋಟಿ ಜನರಿಗೆ ಲಸಿಕೆಯನ್ನು ನೀಡಿದ್ದರೆ ಇನ್ನೂಳಿದ ಲಸಿಕೆಯನ್ನು ಎಲ್ಲಿಂದ ತರುತ್ತಿರಿ? ಲಸಿಕೆಯ ಯೋಜನೆ ಏನು ಎಂಬ ಪಶ್ನೆ ಸಹಜವಾಗಿ ಏಳುತ್ತದೆ. ಈ ಬಗ್ಗೆ ಪ್ರಧಾನಿಗಳ ಈ ಭಾಷಣದಲ್ಲಿ ಯಾವ ಸೂಚನೆಗಳೂ ಕಾಣಸಿಕ್ಕಿಲ್ಲ.

ಈಗಲೂ 25% ಖಾಸಗಿಯವರಿಗೆ ಏಕೆ?

ಈ ವಿಫಲ ಲಸಿಕೆ ನೀತಿಯನ್ನು ಪೂರ್ಣವಾಗಿ ಜನಪರವಾಗಿ ಬದಲಿಸಿಲ್ಲ ಎಂಬುದು ಇನ್ನೊಂದು ಅಂಶ. ಕೇಂದ್ರ ಸರಕಾರವೇ ಎಲ್ಲರಿಗೂ ಲಸಿಕೆ ಹಾಕಿಸುತ್ತದೆ ಎಂದರೂ ಅದು ಖರೀದಿಸುವುದು ಒಟ್ಟು ಉತ್ಪಾದಿಸಿದ ಲಸಿಕೆಗಳ 75%ವನ್ನು ಮಾತ್ರ. ಅದರ ದ್ವಂದ್ವ ಬೆಲೆ ನಿರ್ಧಾರ ನೀತಿಯನ್ನು ಅದು ಮುಂದುವರೆಸುತ್ತಿದೆ. ಈಗಲೂ ಲಸಿಕೆ ಉತ್ಪಾದನೆಯ 25%ದಷ್ಟು ದೊಡ್ಡ ಪ್ರಮಾಣವನ್ನು ಖಾಸಗಿಯವರಿಗೆ ಮೀಸಲಿಡಲಾಗಿದೆ. ಇದು ಖಾಸಗಿ ತಯಾರಕರಿಗೆ ಸೂಪರ್ ಲಾಭಗಳನ್ನು ಲೂಟಿ ಹೊಡೆಯಲು ಪರವಾನಿಗೆಯನ್ನು ನೀಡಲಾಗಿದೆ ಎಂದು ಸಿಪಿಐ(ಎಂ) ಟೀಕಿಸಿದೆ. ಹಲವು ಪರಿಣಿತರೂ 25% ಕೋಟಾದ ತರ್ಕವನ್ನು ಪ್ರಶ್ನಿಸಿದ್ದಾರೆ.

ಈಗಾಗಲೇ ಈ ನೀತಿಯ ದುಷ್ಪರಿಣಾಮಗಳು ಕಾಣ ಬರುತ್ತಿವೆ.

ಮೇ 30ರ ವೇಳೆಗೆ ದೇಶದಲ್ಲಿ ನೀಡಿದ ಒಟ್ಟು 20.8 ಕೋಟಿ ಡೋಸುಗಳಲ್ಲಿ ಖಾಸಗಿ ವಲಯ ನೀಡಿದ್ದು ಕೇವಲ 1.6 ಕೋಟಿ ಡೋಸುಗಳು ಮಾತ್ರ ಅಂದರೆ ಸುಮಾರು 7.5% ಮಾತ್ರ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಏಳು ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಾಗೂ ದೇಶದ ಒಟ್ಟು ಸುಮಾರು 750 ಜಿಲ್ಲೆಗಳಲ್ಲಿ 80ರಲ್ಲಿ ಮಾತ್ರವೇ ಈ ಪ್ರಮಾಣ 10%ವನ್ನು ದಾಟಿದೆ.

ಅಲ್ಲದೆ, ಖಾಸಗಿ ವಲಯ ನೀಡಿದ ಡೋಸುಗಳಲ್ಲಿ ಬಹುಪಾಲು, 54% ದಷ್ಟು 25 ದೊಡ್ಡ ನಗರಗಳಿರುವ ಜಿಲ್ಲೆಗಳಲ್ಲೇ. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಈಶಾನ್ಯ ರಾಜ್ಯಗಳಲ್ಲಿ, ಒಟ್ಟು 50%ದಷ್ಟು ಜಿಲ್ಲೆಗಳಲ್ಲಿ ಖಾಸಗಿ ವಲಯದಿಂದ ಲಸಿಕೆ ನೀಡಿಕೆ 1%ಕ್ಕಿಂತಲೂ ಕಡಿಮೆ ಸರಕಾರದ ಕೊವಿನ್ ವೆಬ್ ತಾಣದ ಪ್ರಕಾರ 80% ಜಿಲ್ಲೆಗಳಲ್ಲಿ ಸಾರ್ವಜನಿಕ ವಲಯ ,ಅಂದರೆ ಸರಕಾರೀ ಅಸ್ಪತ್ರೆಗಳು ಮತ್ತು ಸರಕಾರಗಳು ನಿರ್ಮಿಸಿದ ಲಸಿಕೆ ಕೇಂದ್ರಗಳಲೇ 95% ದಷ್ಟು ಡೋಸುಗಳನ್ನು ನೀಡಲಾಗಿದೆ.




ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ
ಫೇಸ್‌ಬುಕ್

ಖಾಸಗಿ ಆಸ್ಪತ್ರೆಗಳು ಖರೀದಿಸಿದ 1.20 ಕೋಟಿ ಲಸಿಕೆಗಳಲ್ಲಿ 6.57 ಲಕ್ಷ ಡೋಸ್‌ಗಳನ್ನು ಕೇವಲ 9 ಕಾರ್ಪೊರೇಟ್ ಆಸ್ಪತ್ರೆಗಳು ಖರೀದಿಸಿವೆ ಎಂದು ಇನ್ನೊಂದು ವರದಿ ಹೇಳುತ್ತದೆ. ಇವೆಲ್ಲವೂ ಮಹಾನಗರಗಳಲ್ಲಿರುವವುಗಳು ಎಂದು ಬೇರೆ ಹೇಳಬೇಕಾಗಿಲ್ಲ. ಉಳಿದ 50%ದಷ್ಟು 300 ಆಸ್ಪತ್ರೆಗಳ ಬಳಿ ಇವೆಯಂತೆ. ಆ ದೊಡ್ಡ ಕಾರ್ಪೊರೇಟ್ ಅಸ್ಪತ್ರೆಗಳು ತಾವು ಒಪ್ಪಂದ ಮಾಡಿಕೊಂಡದ್ದರ ಎರಡು ಪಟ್ಟು ಖರೀದಿಸಿವೆ ಯಂತೆ. ಆದರೆ ಕೆಲವು ಸಣ್ಣ ಆಸ್ಪತ್ರೆಗಳಿಗೆ ತಾವು ಕೇಳಿದ್ದರ 10%ದಷ್ಟೂ ಸಿಕ್ಕಿಲ್ಲ.

ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ಎತ್ತಿಕೊಂಡ ವಿಚಾರಣೆಯಲ್ಲಿ ಮೋದಿ ಸರಕಾರದ ಅಫಿಡವಿಟ್ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿರುವ ಮಾತುಗಳು ವಿಶೇಷ ಮಹತ್ವ ಪಡೆಯುತ್ತವೆ. 18–44 ವಯೋಗುಂಪಿನ ಬಹುಜನರು ಅಥವ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ವ್ಯಕ್ತಿಗಳು ಹಣತೆತ್ತು ಲಸಿಕೆ ಪಡೆಯುವುದು ಕಷ್ಟಕರವಾಗಬಹುದು ಎಂದು ಸುಪ್ರಿಂ ಕೋರ್ಟ್ ಹೇಳಿತ್ತು.

ಜೂನ್ 7ರ ಭಾಗಶಃ ಯು–ಟರ್ನ್ ನಂತರ ಮೋದಿ ಸರಕಾರ ಸುಪ್ರಿಂ ಕೋಟ್ ಕೇಳಿರುವ ಉಳಿದಿರುವ ಪ್ರಶ್ನೆಗಳಿಗೆ ಏನು ಉತ್ತರ ಕೊಡುತ್ತದೆ, ಈ ವರ್ಷದ ಅಂತ್ಯದೊಳಗೆ ಎಲ್ಲರಿಗೂ ಲಸಿಕೆ ಹಾಕಿಸಲು ಯಾವ ಮಾರ್ಗಸೂಚಿಗಳನ್ನು ರೂಪಿಸಿದೆ ಎಂಬುದನ್ನು ಕಾದು ನೋಡಬೇಕಾಗಿದೆ.



ಕೃಪೆ: ಸಂದೀಪ್ ಅಧ್ವರ್ಯು

ಎಲ್‌ಡಿಎಫ್ ಸರಕಾರದಿಂದ ರೂ.20,000 ಕೋಟಿ ಕೊವಿಡ್ ಪ್ಯಾಕೇಜ್

ಸತತ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡಿರುವ ಕೇರಳದ ಎಲ್‌ಡಿಎಫ್ ಸರಕಾರ ಆರಂಭದಲ್ಲೇ ರೂ. 20,000 ಕೋಟಿ ರೂ.ಗಳ ಕೊವಿಡ್ ಪ್ಯಾಕೇಜನ್ನು ಪ್ರಕಟಿಸಿದೆ. ಇದನ್ನು ಹೊಸ ಹಣಕಾಸು ಮಂತ್ರಿ ಕೆ.ಎಲ್. ಬಾಲಗೋಪಾಲ್ ಜೂನ್ 4ರಂದು ಈ ಹಣಕಾಸು ವರ್ಷದ ಪರಿಷ್ಕೃತ ಬಜೆಟ್ ಮಂಡಿಸುತ್ತ ಹೇಳಿದ್ದಾರೆ. ಎರಡನೇ ಕೊವಿಡ್ ಅಲೆಯ ಹಿನ್ನೆಲೆಯಲ್ಲಿ ಎದ್ದು ಬಂದಿರುವ ಸಾಮಾಜಿಕ–ಆರ್ಥಿಕ ಮತ್ತು ಆರೋಗ್ಯ ಸವಾಲುಗಳನ್ನು ಎದುರಿಸಲು ಹಾಗೂ ಮುಂದೆ ಬರಬಹುದಾದ ಮೂರನೇ ಅಲೆಯನ್ನು ಎದುರಿಸಲು ಅಗತ್ಯ ಮೂಲರಚನೆಗಳ ನಿರ್ಮಾಣಕ್ಕೆ ಈ ವಿಶೇಷ ಪ್ಯಾಕೇಜನ್ನು ರೂಪಿಸಲಾಗಿದೆ ಮತ್ತು ಈ ಹೆಚ್ಚುವರಿ ವೆಚ್ಚಕ್ಕೆಂದು ಯಾವ ಹೊಸ ತೆರಿಗೆಯನ್ನೂ ಹಾಕುತ್ತಿಲ್ಲ ಎಂದು ಅವರು ಹೇಳಿದ್ದಾರೆ.

ರೂ.8900 ಕೋಟಿ ರೂ. ಜೀವನಾಧಾರ ಕಳಕೊಳ್ಳುವವರಿಗೆ ವಿವಿಧ ನೇರ ಕಲ್ಯಾಣ ನಿಧಿ ಮಂಡಳಿಗಳ ಮೂಲಕ ಮತ್ತು ಸಾಮಾಜಿಕ ಭದ್ರತಾ ಪೆನ್ಶನ್‌ಗಳ ಭಾಗವಾಗಿ ನೇರ ನಗದು ವರ್ಗಾವಣೆಗೆ ಇಡಲಾಗಿದೆ. ಈ ಮೂಲಕ ಸುಮಾರು 8ಪ ಲಕ್ಷ ಜನಗಳಿಗೆ ಸರಾಸರಿ ರೂ.11125 ಲಭ್ಯವಾಗುತ್ತದೆ. ಇದಲ್ಲದೆ ಮನರೇಗ ಮತ್ತು ಎಇಯುಜಿಎಸ್ ನನು ವಿಸ್ತೃಇಸಲು ಪ್ರಯತ್ನಿಸಲಾಗುತ್ತದೆ.

ರೂ.8300 ಕೋಟಿ ಜನಗಳಿಗೆ ಮತ್ತು ಉದ್ದಿಮೆಗಳಿಗೆ ಸುಲಭಸಾಲಗಳನ್ನು ಕೊಡಲು ವೆಚ್ಚ ಮಾಡಲಾಗುವುದು. ಪ್ರಾಥಮಿಕ ಸಹಕಾರಿ ಘಟಕಗಳಿಗೆ ರೂ.2000 ಕೋಟಿ ಸಾಲ, ಕೇರಳ ಬ್ಯಾಂಕಿನಿಂದ 5ಲಕ್ಷ ರೂ. ವರೆಗೆ 4% ಬಡ್ಡಿದರದಲ್ಲಿ ಕೃಷಿ ಸಾಲ, ಕುಡುಂಬಶ್ರೀ ಸ್ಕೀಮಿಗೆ ರೂ.1000 ಕೋಟಿ ಸಾಲ ಇದರಲ್ಲಿ ಸೇರಿದೆ.

ರೂ.2800 ಕೋಟಿ ಯನ್ನು ಆರೋಗ್ಯ ಪಾಲನೆ ಬಿಕ್ಕಟ್ಟನ್ನು ಎದುರಿಸಲು ಕೊಟ್ಟಿದೆ. ಅಲ್ಲದೆ ವಿಜ್ಞಾನ ಪಾರ್ಕಿನಲ್ಲಿ ಲಸಿಕೆ ಉತ್ಪಾದನೆ ಮತ್ತು ಸಂಶೋಧನಾ ಘಟಕಗಳನ್ನು ನಿರ್ಮಿಸುವ ಪ್ರಾಜೆಕ್ಟ್ ಗಳನ್ನು ಆರಂಭಿಸಲಿದೆ. 150 ಮೆಟ್ರಿಕ್ ಟನ್ ಸಾಮರ್ಥ್ಯದ ವೈದ್ಯಕೀಯ ದ್ರವ ಆಮ್ಲಜನಕ ಸ್ಥಾವರವನ್ನು ನಿರ್ಮಿಸಲಾಗುವುದು. ಇದು 1000 ಮೆಟ್ರಿಕ್ ಟನ್ ದಾಸ್ಥಾನು ವ್ಯವಸ್ಥೆ ಮತ್ತು ಟ್ಯಾಂಕರುಗಳಿಂದ ಸಜ್ಜಿತವಾಗಿರುತ್ತದೆ.



ಎಲ್‌ಡಿಎಫ್ ಸರಕಾರ ಒಂದೆಡೆಯಲ್ಲಿ ಕೇಂದ್ರ ಸರಕಾರ ತನ್ನ ‘ಉದಾರೀಕೃತ’ ಲಸಿಕೆ ನೀತಿಯ ಮೂಲಕ ಎಲ್ಲರಿಗೂ ಉಚಿತ ಲಸಿಕೆ ಹಾಕಿಸುವ ಹೊಣೆಯಿಂದ ನುಣಚಿಕೊಳ್ಳುವ ಪ್ರಯತ್ನದ ವಿರುದ್ಧ ವಿವಿಧ ವೇದಿಕೆಗಳಲ್ಲಿ ಹೋರಾಟವನ್ನು ನಡೆಸುತ್ತಲೇ, ಕೇರಳದಲ್ಲಿ 18–44 ವಯೋಗುಂಪಿನವರೂ ಸೇರಿದಂತೆ ಎಲ್ಲರಿಗೂ ಉಚಿತ ಲಸಿಕೆ ಹಾಕಿಸುವುದಕ್ಕಾಗಿ 1000 ಕೋಟಿ ರೂ.ಗಳನ್ನು ಮೀಸಲಿರಿಸಿದೆ. ಮತ್ತು 500 ಕೋ ಟಿರೂ.ಗಳನ್ನು ಇದಕ್ಕೆ ಸಂಬಂಧಪಟ್ಟ ಉಪಕರಣ/ಸಾಧನಗಳಿಗಾಗಿ ಇಡಲಾಗಿದೆ.

ರೂ.1600 ಕೋಟಿ ಉದ್ಯೋಗ ಕಾಯ್ದುಕೊಳ್ಳಲಿಕ್ಕಾಗಿ ಮತ್ತು ಆರ್ಥಿಕ ಪುನಶ್ಚೇತನಕ್ಕೆ ಬಡ್ಡಿ ಸಬ್ಸಿಡಿ, ಕೇರಳದಿಂಧ ಹೊರಗೆ ಹೋಗಿ ದುಡಿಯುತ್ತಿದ್ದು ಈಗ ಕೆಲಸ ಕಳಕೊಂಡು ಬಂದವರು ಸ್ವ–ಉದ್ಯೋಗ ಆರಂಭಿಸಲು ನೆರವಾಗುವ ಒಂದು ಸ್ಕೀಮನ್ನು ಪ್ರಕಟಿಸಲಾಗಿದೆ.

ಬೇರೆ ಸರಕಾರಗಳು ಬಿಕ್ಕಟ್ಟಿನ ಸಮಯದಲ್ಲಿ ಜನಕಲ್ಯಾಣಕ್ಕೆ ಮಾಡುವ ವೆಚ್ಚಗಳನ್ನು ಕಡಿತಗೊಳಿಸುವ ಅಥವ ವೆಚ್ಚಗಳನ್ನು ಕಡಿತ ಮಾಡದಿದ್ದರೆ ಹೊಸ ತೆರಿಗೆಗಳನ್ನು ಹಾಕುವ ಧೋರಣೆಗಳನ್ನು ಅನುಸರಿಸುತ್ತವೆ. ಆದರೆ ಎಡನೇತೃತ್ವದ ಸರಕಾರ ಹಾಗೆ ಮಾಡುವದಿಲ್ಲ, ಸಾಲ ಮಾಡಿಯಾದರೂ ದುರಿತ ಕಾಲದಲ್ಲಿ ಜನರ ಬೆಂಬಲಕ್ಕೆ ನಿಲ್ಲುತ್ತದೆ. ಮೊದಲ ಪಿಣರಾಯಿ ವಿಜಯನ್ ಸರಕಾರ ಅದನ್ನೇ ಮಾಡಿತ್ತು, ಈ ಎರಡನೇ ಸರಕಾರವೂ ಅದೇ ಧೋರಣೆಯನ್ನು ಮುಂದುವರೆಸುತ್ತದೆ ಎಂದು ಹಣಕಾಸು ಮಂತ್ರಿಗಳು ಹೇಳಿದರು.

ಕಾಣದಂತೆ ಮಾಯವಾದವೋ ಕೋವಿಡ್ ಲಸಿಕೆಗಳು!



ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಕಾಡ್ಗಿಚ್ಚಿನಂತೆ ಕೋವಿಡ್-19 ಹಬ್ಬುತ್ತಿರುವ ಸಂದರ್ಭದಲ್ಲಿ, ಸಾಂಕ್ರಾಮಿಕದ ತೀವ್ರತೆಯನ್ನು ತಗ್ಗಿಸುವ ಸಾಮರ್ಥ್ಯವು ಲಸಿಕೆಗಳಿಗೆ ಮಾತ್ರ ಇರುವುದರಿಂದಾಗಿ ಲಸಿಕೆಗಳಿಗೆ ಬೇಡಿಕೆ ಹೆಚ್ಚುತ್ತಿರುವ ಸಮಯದಲ್ಲಿ, ಲಸಿಕೆಗಳ ಲಭ್ಯತೆ ಕಡಿಮೆಯಾಗಿದೆ, ಏಕೆ? ಇದೊಂದು ನಿಗೂಢ ವಿದ್ಯಮಾನವೇ ಸರಿ. ಈ ವಿದ್ಯಮಾನದ ಬಗ್ಗೆ ಆತಂಕಗೊಳ್ಳುವುದರ ಬದಲು, ಸಾಂಕ್ರಾಮಿಕ ರೋಗವು ಜನರ ಮೇಲೆ ಬೀರಬಹುದಾದ ಒಟ್ಟು ಪರಿಣಾಮದ ಬಗ್ಗೆ ಮತ್ತು ಇಡೀ ಜನಸಂಖ್ಯೆಗೆ ಆದಷ್ಟು ಬೇಗ ಲಸಿಕೆ ಹಾಕುವ ತುರ್ತಿನ ಬಗ್ಗೆ ಕಾಳಜಿ ವಹಿಸುವುದರ ಬದಲು, ಮೋದಿ ಸರ್ಕಾರವು ದಿವ್ಯ ಮೌನ ತಾಳಿತು. ಮೇ ತಿಂಗಳಲ್ಲಿ ಕನಿಷ್ಠ 8.5 ಕೋಟಿ ಡೋಸ್ ಲಸಿಕೆಗಳನ್ನು ಉತ್ಪಾದಿಸಲಾಗಿದೆ ಎಂದು ಸಲೀಸಾಗಿ ಊಹಿಸಬಹುದು. ಆದ್ದರಿಂದ, ಉದ್ಭವಿಸುವ ಪ್ರಶ್ನೆ ಎಂದರೆ ಉಳಿದ ಲಸಿಕೆಗಳು ಕಾಣದಂತೆ ಮಾಯವಾಗಿ ಎಲ್ಲಿಗೆ ಹೋದವು? ಚಮತ್ಕಾರ ಇರುವುದು ಇಲ್ಲಿಯೇ. ಮೋದಿ ಸರಕಾರ ಮೇ ತಿಂಗಳಿಂದ ಅನುಸರಿಸಿದ (ಈಗ ಬದಲಿಸಿರುವ) ಖಾಸಗಿಯವರಿಗೆ 25% ದ್ವಂದ್ವ ಬೆಲೆಗಳಲ್ಲಿ ಕೊಡುವ ಬುದ್ಧಿಹೀನ ನೀತಿ ಮತ್ತು ಕಡ್ಡಾಯ ಲೈಸೆನ್ಸಿಂಗ್ ಅಧಿಕಾರವನ್ನು ಬಳಸಲು ನಿರಾಕರಿಸುವ ನಿಲುವು.

ಕೋವಿಡ್-19 ಎರಡನೆಯ ಅಲೆಯ ಎಚ್ಚರಿಕೆಯನ್ನು ಸರ್ಕಾರವು ಕಡೆಗಣಿಸಿದ ಪರಿಣಾಮವಾಗಿ ಚಿಕಿತ್ಸೆ ಲಭ್ಯವಾಗದ ಲಕ್ಷಾಂತರ ಮಂದಿ ಸಾವಿಗೀಡಾಗಿದ್ದಾರೆ. ಲಸಿಕೆ ಮಾತ್ರ ಮೂರನೆಯ ಅಲೆಯ ತೀವ್ರತೆಯನ್ನು ತಗ್ಗಿಸಬಲ್ಲದು. ಹಾಗಾಗಿ, ಎಲ್ಲರಿಗೂ ಲಸಿಕೆ ಹಾಕದ ಹೊರತು ಯಾರಿಗೂ ಉಳಿಗಾಲವಿಲ್ಲ ಎಂಬ ಮುನ್ನೆಚ್ಚರಿಕೆಯ ಪಾಠವನ್ನು ಜಗತ್ತು ಅನುಭವದಿಂದ ಕಲಿತುಕೊಂಡಿದೆ. ಆದರೆ, ವಿಶ್ವ ಗುರು ಮತ್ತು ಜಗತ್ತಿನ ಔಷಧಾಲಯ ಎಂದು ಹೇಳಿಕೊಳ್ಳುವ ದೇಶದಲ್ಲೇ ಲಸಿಕೆಗಳ ಕೊರತೆ ಉಂಟಾಗಿದೆ. ಲಸಿಕೆ ಉತ್ಪಾದನೆಗೆ ಸಮಯ ಹಿಡಿಯುವುದರ ಜೊತೆಗೆ, 18–44 ವಯೋಮಾನದವರಿಗೂ ಲಸಿಕೆ ಆರಂಭಿಸಿರುವುದರಿಂದ ಲಸಿಕೆಯ ಬೇಡಿಕೆಯಲ್ಲಿ ಹಠಾತ್ ಏರಿಕೆಯಾಗಿದೆ ಎಂಬ ಅನಿಸಿಕೆ ಪ್ರಚಲಿತವಿದೆ. ಆದರೆ, ಈ ಅನಿಸಿಕೆ ತಪ್ಪಾಗಿದೆ. ಅತಿ ಹೆಚ್ಚು ಸಂಖ್ಯೆಯ ಜನರು ಈಗ ಲಸಿಕೆ ಪಡೆಯಲು ಅರ್ಹರಾಗಿದ್ದಾರೆ ಮತ್ತು ಕಾತರದಲ್ಲಿದ್ದಾರೆ, ನಿಜ. ಆದರೆ, ಹಿಂದಿನ ಎಪ್ರಿಲ್ ತಿಂಗಳಿಗೆ ಹೋಲಿಸಿದರೆ ಮತ್ತು ದೇಶದಲ್ಲಿ ಉತ್ಪಾದನೆಯಾದ ಲಸಿಕೆಗಳ ಸಂಖ್ಯೆಗೆ ಹೋಲಿಸಿದರೆ ಮೇ ತಿಂಗಳಲ್ಲಿ ಲಭ್ಯವಾದ ಲಸಿಕೆಗಳ ಸಂಖ್ಯೆಯು ತೀಕ್ಷ್ಣವಾಗಿ ಮತ್ತು ಆಶ್ಚರ್ಯಕರವಾಗಿ ಕುಸಿದಿದೆ. ಲಸಿಕೆಗಳಿಗೆ ಉಂಟಾದ ಹೆಚ್ಚುವರಿ ಬೇಡಿಕೆಯು ಎಲ್ಲರೂ ಊಹಿಸುವಂತೆ ಬೇಡಿಕೆಯ ಕಡೆಯಿಂದ ಉದ್ಭವಿಸಿರುವುದು ಮಾತ್ರವಲ್ಲ, ಪೂರೈಕೆಯ ಬದಿಯಿಂದಲೂ ಉದ್ಭವಿಸಿದೆ. ದಿಗ್ಭ್ರಮೆಗೊಳಿಸುವ ಮತ್ತು ನಿಗೂಢವಾಗಿ ಕಾಣುವ ಈ ವಿದ್ಯಮಾನವನ್ನು ಸ್ಪಷ್ಟಪಡಿಸಬೇಕಾದ ಸರ್ಕಾರವು ಲಸಿಕೆಗಳ ಉತ್ಪಾದನೆ ಮತ್ತು ದಾಸ್ತಾನಿಗೆ ಸಂಬಂಧಿಸಿದ ಮಾಹಿತಿಯನ್ನೇ ಒದಗಿಸಿಲ್ಲ.

2021ರ ಏಪ್ರಿಲ್‌ನಲ್ಲಿ ಒಟ್ಟು 8.5 ಕೋಟಿ ಡೋಸ್ (6.5 ಕೋಟಿ ಕೋವಿಶೀಲ್ಡ್ ಮತ್ತು 2 ಕೋಟಿ ಕೊವಾಕ್ಸಿನ್) ಲಸಿಕೆಗಳ ಉತ್ಪಾದನೆಯಾಗಿದೆ. ಕೋವಿಶೀಲ್ಡ್ ಲಸಿಕೆಯ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯ ಬಗ್ಗೆ ಮಾಹಿತಿ ಲಭ್ಯವಿಲ್ಲವಾದರೂ, ಕೊವಾಕ್ಸಿನ್ ಉತ್ಪಾದಿಸುವ ಭಾರತ್ ಬಯೋಟೆಕ್ ತನ್ನ ಉತ್ಪಾದನೆಯನ್ನು ಮೇ ತಿಂಗಳಲ್ಲಿ ಮೂರು ಕೋಟಿ ಡೋಸ್‌ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಿತ್ತು. ಅಂದರೆ, ಮೇ ತಿಂಗಳಲ್ಲಿ ಕನಿಷ್ಠ 9.5 ಕೋಟಿ ಡೋಸ್ ಲಸಿಕೆಗಳು ಉತ್ಪಾನೆಯಾಗಿವೆ ಎಂದಾಗುತ್ತದೆ.

ಎಪ್ರಿಲ್ ವರೆಗೆ ಬಳಕೆ ಮಾಡಿಕೊಂಡು ಉಳಿದ ದಾಸ್ತಾನು ಮತ್ತು ಉತ್ಪಾದನೆಯಾದ ಲಸಿಕೆಗಳನ್ನು ಬಳಸಿಕೊಂಡು ಎಪ್ರಿಲ್ ತಿಂಗಳಿನಲ್ಲಿ ಒಂಬತ್ತು ಕೋಟಿ ಡೋಸ್ ಲಸಿಕೆಗಳನ್ನು ನೀಡಲಾಗಿತ್ತು. ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಮೇ ತಿಂಗಳಲ್ಲಿ, ನೀಡಿದ ಲಸಿಕೆ ಡೋಸ್‌ಗಳ ಸಂಖ್ಯೆ ತುಂಬಾ ಕಡಿಮೆ ಇತ್ತು. ಮೇ ತಿಂಗಳಲ್ಲಿ, ಬಹುತೇಕ, ದಿನಕ್ಕೆ ಸರಾಸರಿ ಹದಿನೈದು ಲಕ್ಷ ಡೋಸ್ ಲಸಿಕೆ ನೀಡಲಾಗಿದೆ (ದಿ ಹಿಂದೂ, ಮೇ 30). ಮೇ 24 ರ ನಂತರ ಚುರುಕುಗೊಂಡ ಈ ಕಾರ್ಯವು ಕೊನೆಯ ವಾರದಲ್ಲಿ ಸರಾಸರಿ ಮೂವತ್ತು ಲಕ್ಷ ದೈನಂದಿನ ಡೋಸ್‌ವರೆಗೆ ತಲುಪಲಾಗಿದೆ ಎಂದು ಭಾವಿಸಿದರೂ ಸಹ, ತಿಂಗಳ ಒಟ್ಟು ಡೋಸ್‌ಗಳ ಸಂಖ್ಯೆಯು 5.7 ಕೋಟಿಯಷ್ಟಾಗುತ್ತದೆ. ಏಪ್ರಿಲ್‌ಗೆ ಹೋಲಿಸಿದರೆ, ಮೇ ತಿಂಗಳಲ್ಲಿ ನೀಡಲಾದ ಲಸಿಕೆಗಳಲ್ಲಿ 3.3 ಕೋಟಿಗಳ ಕುಸಿತ ಕಂಡುಬರುತ್ತದೆ. ಅಷ್ಟೇ ಅಲ್ಲ, ಮೇ ತಿಂಗಳಲ್ಲಿ ನೀಡಲಾದ ಡೋಸ್‌ಗಳ ಸಂಖ್ಯೆಯು ಉತ್ಪಾದನೆಗಿಂತ ಕನಿಷ್ಠ 3.8 ಕೋಟಿ ಕಡಿಮೆ ಇರುವುದು ಕಂಡುಬರುತ್ತದೆ.

ಕಾಡ್ಗಿಚ್ಚಿನಂತೆ ಕೋವಿಡ್-19 ಹಬ್ಬುತ್ತಿರುವ ಸಂದರ್ಭದಲ್ಲಿ, ಸಾಂಕ್ರಾಮಿಕದ ತೀವ್ರತೆಯನ್ನು ತಗ್ಗಿಸುವ ಸಾಮರ್ಥ್ಯವು ಲಸಿಕೆಗಳಿಗೆ ಮಾತ್ರ



ಇರುವುದರಿಂದಾಗಿ ಲಸಿಕೆಗಳಿಗೆ ಬೇಡಿಕೆ ಹೆಚ್ಚುತ್ತಿರುವ ಸಮಯದಲ್ಲಿ, ಲಸಿಕೆಗಳ ಲಭ್ಯತೆ ಕಡಿಮೆಯಾಗಿದೆ, ಏಕೆ? ಇದೊಂದು ನಿಗೂಢ ವಿದ್ಯಮಾನವೇ ಸರಿ. ಅದುವರೆಗೆ ಉತ್ಪಾದನೆಯಾದ ಲಸಿಕೆಗಳನ್ನು ಹಾಗೂ ಅದುವರೆಗೂ ಬಳಕೆಯಾಗಿ ಉಳಿದ ಸಂಗ್ರಹದ ಒಟ್ಟು ಒಂಬತ್ತು ಕೋಟಿ ಡೋಸ್ ಲಸಿಕೆಗಳನ್ನು ಎಪ್ರಿಲ್ ತಿಂಗಳಿನಲ್ಲಿ ಬಳಕೆ ಮಾಡಿಕೊಳ್ಳಲಾಗಿತ್ತು ಮತ್ತು ಮೇ ತಿಂಗಳಿನಲ್ಲಿ ಇಂತಹ ಅನುಕೂಲದ ಪರಿಸ್ಥಿತಿ ಇರಲಿಲ್ಲ ಎಂಬ ವಾದವನ್ನು ಒಪ್ಪಲಾಗದು. ಏಕೆಂದರೆ, ಮೇ ತಿಂಗಳಿನಲ್ಲಿ ನೀಡಲಾದ ಡೋಸ್‌ಗಳ ಸಂಖ್ಯೆಯು ತಿಂಗಳ ಉತ್ಪಾದನಾ ಸಾಮರ್ಥ್ಯಕ್ಕಿಂತಲೂ ಕಡಿಮೆ ಇದೆ. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮೇ ತಿಂಗಳ ದಾಸ್ತಾನು ಶೂನ್ಯವೇ ಇದ್ದರೂ ಸಹ, ಏಪ್ರಿಲ್‌ನಲ್ಲಿ ನೀಡಿದ 9 ಕೋಟಿ ಡೋಸ್‌ಗಿಂತಲೂ ಹೆಚ್ಚು (ಅಂದರೆ, ಸುಮಾರು 9.5 ಕೋಟಿ ಡೋಸ್‌ಗಳನ್ನು) ಲಸಿಕೆಗಳನ್ನು ಮೇ ತಿಂಗಳಲ್ಲಿ ನೀಡಬೇಕಾಗಿತ್ತು. ತನ್ನ ಉತ್ಪಾದನೆಯನ್ನು ಮೇ ತಿಂಗಳಲ್ಲಿ ಮೂರು ಕೋಟಿ ಡೋಸ್‌ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಿದ್ದ ಭಾರತ್ ಬಯೋಟೆಕ್ ಒಂದು ವೇಳೆ ಕೊವಾಕ್ಸಿನ್ ಉತ್ಪಾನೆಯನ್ನು ಯೋಜಿಸಿದಂತೆ ಮೇ ತಿಂಗಳಲ್ಲಿ ಹೆಚ್ಚಿಸದಿದ್ದರೂ ಸಹ ಮತ್ತು ಉತ್ಪಾದನೆಯು ಏಪ್ರಿಲ್ ಮಟ್ಟದಲ್ಲೇ (8.5 ಕೋಟಿ) ಇತ್ತು ಎಂದುಕೊಂಡರೂ ಸಹ, ಮೇ ತಿಂಗಳಲ್ಲಿ ನೀಡಲಾದ 5.7 ಕೋಟಿ ಡೋಸ್‌ಗಳ ಸಂಖ್ಯೆಯು ಯಾವ ರೀತಿಯಲ್ಲಿ ನೋಡಿದರೂ ಸಹ, ಬಹಳ ಕಡಿಮೆಯೇ.

ಈ ವಿದ್ಯಮಾನದ ಬಗ್ಗೆ ಆತಂಕ/ಕಸಿವಿಸಿಗೊಳ್ಳುವುದರ ಬದಲು, ಸಾಂಕ್ರಾಮಿಕ ರೋಗವು ಜನರ ಮೇಲೆ ಬೀರಬಹುದಾದ ಒಟ್ಟು ಪರಿಣಾಮದ ಬಗ್ಗೆ ಮತ್ತು ಇಡೀ ಜನಸಂಖ್ಯೆಗೆ ಆದಷ್ಟು ಬೇಗ ಲಸಿಕೆ ಹಾಕುವ ತುರ್ತಿನ ಬಗ್ಗೆ ಕಾಳಜಿ ವಹಿಸುವುದರ ಬದಲು, ಮೋದಿ ಸರ್ಕಾರವು ದಿವ್ಯ ಮೌನ ತಾಳಿತು. ನೀತಿ ಆಯೋಗದ ಸದಸ್ಯ ವಿನೋದ್ ಪಾಲ್ ಅವರಂತಹ ಸರ್ಕಾರಿ ವಕ್ತಾರರು ಲಸಿಕಾ ಬಿಕ್ಕಟ್ಟಿಗೆ ರಾಜ್ಯ ಸರ್ಕಾರಗಳನ್ನು, ಸಂಪೂರ್ಣ ಕಾನೂನುಬಾಹಿರವಾಗಿ ದೂಷಿಸುವುದು ಅನಿರೀಕ್ಷಿತವೇನಲ್ಲ. ಆದರೆ ಅವರು ಮೇ ತಿಂಗಳಲ್ಲಿ ನೀಡಿದ ಲಸಿಕೆಗಳ ಸಮಖ್ಯೆ ಕಡಿಮೆಯಾದುದರ ಬಗ್ಗೆ ಲಸಿಕೆ ನೀಡಿಕೆಯಲ್ಲಿನ ಅಲಭ್ಯತೆಯ ಬಗ್ಗೆ ಜಾಣ ಮೌನ ವಹಿಸಿದ್ದಾರೆ.

ಸರ್ಕಾರವು ಜಾಣ ಮೌನ ತಳೆದ ಸಂದರ್ಭದಲ್ಲಿ, ಭಾರತ್ ಬಯೋಟೆಕ್ ಒಂದು ಕುಂಟು ನೆಪವನ್ನು ವಿವರಣೆಯಾಗಿ ನೀಡಿತು: ಉತ್ಪಾದನೆ ಮತ್ತು ಪೂರೈಕೆಯ ನಡುವೆ ನುಸುಳುವ ಸುಮಾರು ನಾಲ್ಕು ತಿಂಗಳುಗಳ ಕಾರ್ಯ-ವಿಳಂಬವು ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳುತ್ತದೆ ಎಂದಿತು. ಅದರ ಈ ವಿವರಣೆಯು ಒಂದು ಕುಂಟು ನೆಪವಲ್ಲದೆ ಬೇರೇನೂ ಅಲ್ಲ. ಏಕೆಂದರೆ, ಉತ್ಪಾದನೆಯ ಆರಂಭದಲ್ಲಿ ಉತ್ಪನ್ನವು ಮಾರುಕಟ್ಟೆಯನ್ನು ತಲುಪಿ ಮಾರಾಟಕ್ಕೆ ಲಭ್ಯವಾಗುವಲ್ಲಿ ಸ್ವಲ್ಪ ಸಮಯ ಹಿಡಿಯುತ್ತದೆ, ಹೌದು. ಆದರೆ, ಒಮ್ಮೆ ಉತ್ಪಾದನೆ ಆರಂಭವಾಗಿ ಉತ್ಪನ್ನವು ಮಾರುಕಟ್ಟೆಯನ್ನು ತಲುಪುವ ಕ್ರಿಯೆ ಆರಂಭವಾದ ನಂತರ, ವಿಳಂಬಕ್ಕೆ ಆಸ್ಪದವೇ ಇಲ್ಲ. ಒಂದು ವೇಳೆ ಉತ್ಪಾದನೆಯಲ್ಲಿ ಹೆಚ್ಚಳವಾದರೆ, ಆ ಹೆಚ್ಚಳವು ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳಲು ಸಮಯ ಹಿಡಿಯುತ್ತದೆ, ನಿಜ. ಆದರೆ, ಹಳೆಯ ಉತ್ಪಾದನೆಯು ಯಾವುದೇ ಅಡಚಣೆಯಿಲ್ಲದೆ ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳಲೇಬೇಕು. ಆದ್ದರಿಂದ, ಮೇ ತಿಂಗಳಲ್ಲಿ ಬಳಕೆಗೆ ಲಭ್ಯವಾದ ಲಸಿಕೆಗಳ ಸಂಖ್ಯೆಯು ಏಪ್ರಿಲ್‌ನಲ್ಲಿ ಉತ್ಪಾದನೆಯಾದ ಲಸಿಕೆಗಳ ಸಂಖ್ಯೆಗಿಂತ ಬಹಳ ಕಡಿಮೆ ಇದ್ದ ಅಂಶವು, ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳುವ ಕಾರ್ಯ-ವಿಳಂಬ ಪ್ರಕ್ರಿಯೆಗೂ ಮತ್ತು ಲಸಿಕೆಗಳ ಕೊರತೆಗೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಒಂದು ನಿರ್ದಿಷ್ಟ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವ ಯಾವುದೇ ಸಂಸ್ಥೆಯು, ಬೆಲೆಗಳನ್ನು ಹೆಚ್ಚಿಸುವ ಅವಕಾಶವಿಲ್ಲದ ಹೊರತು, ಉದ್ದೇಶಪೂರ್ವಕವಾಗಿ ಆ ಸಾಮರ್ಥ್ಯವನ್ನು ಕಡಿಮೆ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳುವುದಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಅಂತಹ ಯಾವುದೇ ಸಾಧ್ಯತೆಗಳಿಲ್ಲ, ಏಕೆಂದರೆ, ಲಸಿಕೆ ಉತ್ಪಾದಕರಿಗೆ ದೊರೆಯುವ ಬೆಲೆಗಳನ್ನು ಈಗಾಗಲೇ ನಿಗದಿಪಡಿಸಲಾಗಿದೆ. (ಈ ಬೆಲೆಗಳ ನಿಗದಿಯು ಅನ್ಯಾಯದಿಂದ ಕೂಡಿದೆ ಎಂಬುದು ಬೇರೆ ಮಾತು). ಅದೇ ರೀತಿಯಲ್ಲಿ, ಒಂದು ನಿರ್ದಿಷ್ಟ ಪ್ರಮಾಣದ ಲಸಿಕೆಗಳನ್ನು ಉತ್ಪಾದಿಸಿದ ಯಾವುದೇ ಸಂಸ್ಥೆಯು ಅವುಗಳನ್ನು ಮಾರಾಟಮಾಡುವ ಬದಲು ಸುಮ್ಮನೇ ದಾಸ್ತಾನು ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ. ಆದ್ದರಿಂದ, ಮೇ ತಿಂಗಳಲ್ಲಿ ಕನಿಷ್ಠ 8.5 ಕೋಟಿ ಡೋಸ್ ಲಸಿಕೆಗಳನ್ನು ಉತ್ಪಾದಿಸಲಾಗಿದೆ ಎಂದು ಸಲೀಸಾಗಿ ಊಹಿಸಬಹುದು. ಆದ್ದರಿಂದ, ಉದ್ಭವಿಸುವ ಒಂದು ಪ್ರಶ್ನೆ ಎಂದರೆ: ಮೇ ತಿಂಗಳಿನಲ್ಲಿ ಕೇವಲ 5.7 ಕೋಟಿ ಡೋಸ್‌ಗಳನ್ನು ಮಾತ್ರ ನೀಡಿರುವಾಗ (ಸ್ವಲ್ಪ ಹೆಚ್ಚೇ ಇರಬಹುದು ಅಥವಾ ಸ್ವಲ್ಪ ಕಡಿಮೆಯೂ ಇರಬಹುದು), ಉಳಿದ ಲಸಿಕೆಗಳು ಕಾಣದಂತೆ ಮಾಯವಾಗಿ ಎಲ್ಲಿಗೆ ಹೋದವು?

ದೇಶದಲ್ಲಿ ಉತ್ಪಾದನೆಯಾದ ಮತ್ತು ಪೂರೈಕೆಯಾದ ಲಸಿಕೆಗಳ ಪ್ರಮಾಣದ ಬಗ್ಗೆ ಒಂದು ಸರಿಯಾದ ಲೆಕ್ಕ ಪರಿಶೋಧನೆಯ ಅಗತ್ಯವಿದ್ದು, ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಿಎಜಿ ಅವರನ್ನು ಕೋರುವಂತೆ ಕೆಲವು ವಿರೋಧ ಪಕ್ಷಗಳು ಆಗ್ರಹಿಸಿವೆ. ಸಿಎಜಿ ಅವರ ಪರಿಶೋಧನೆಯ ನಂತರ, ಅದರ ಆಧಾರದ ಮೇಲೆ ಮಾತ್ರ ಈ ಪ್ರಶ್ನೆಗೆ ಉತ್ತರವನ್ನು ಕೊಡಬಹುದು. ಅಲ್ಲಿಯವರೆಗೂ ಕೊಡುವ ಉತ್ತರವು ಒಂದು ಊಹೆಯ ಸ್ವರೂಪದ್ದಾಗಿರುತ್ತದೆ. ಅಂತಹ ಒಂದು ಊಹೆಯು ಈ ಕೆಳಗಿನಂತಿದೆ.

ಕೇಂದ್ರ ಸರ್ಕಾರವು ಲಸಿಕೆಗಳ ಬೆಲೆಗಳನ್ನು ಮತ್ತು ವಿತರಣೆಯನ್ನು ನಿಗದಿಪಡಿಸಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳು ಅನುಕ್ರಮವಾಗಿ 50%, 25% ಮತ್ತು 25% ಅನುಪಾತದಲ್ಲಿ ಲಸಿಕೆಗಳನ್ನು ಪಡೆಯುತ್ತವೆ. ಅದೇ ರೀತಿಯಲ್ಲಿ, ಕೋವಿಷೀಲ್ಡ್ ಲಸಿಕೆಗಳ ಮಾರಾಟದ ಬೆಲೆಗಳನ್ನು ಅನುಕ್ರಮವಾಗಿ, 150ರೂ, 300ರೂ ಮತ್ತು 600ರೂ ಗಳೆಂದೂ ಮತ್ತು ಕೋವ್ಯಾಕ್ಸಿನ್ ಲಸಿಕೆಗಳ ಮಾರಾಟದ ಬೆಲೆಗಳನ್ನು ಅನುಕ್ರಮವಾಗಿ 150 ರೂ., 400 ರೂ. ಮತ್ತು 1200 ರೂ.ಗಳೆಂದು ನಿಗದಿಪಡಿಸಲಾಗಿದೆ. ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳಿಗೆ ಮೀಸಲಾದ ಅರ್ಧ ಭಾಗವನ್ನು ವಾಸ್ತವವಾಗಿ ಖಾಸಗಿ ಆಸ್ಪತ್ರೆಗಳಿಗೇ ಮಾರಾಟ ಮಾಡಲಾಗಿದೆ. ಏಕೆಂದರೆ, ರಾಜ್ಯ ಸರ್ಕಾರಗಳಿಗೆ ನಿಗದಿಪಡಿಸಿದ ಮಾರಾಟದ ಬೆಲೆಗಳಿಗಿಂತ ಎರಡು ಪಟ್ಟು ಹೆಚ್ಚು ದರಗಳನ್ನು ಖಾಸಗಿ ಆಸ್ಪತ್ರೆಗಳಿಗೆ ನಿಗದಿಪಡಿಸಿರುವುದರಿಂದ, ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚು ಲಸಿಕೆ ಮಾರಿದಾಗ ಯದ್ವಾ-ತದ್ವಾ ಲಾಭ ಸಿಗುತ್ತದೆ. ಹಾಗಾಗಿ, ರಾಜ್ಯ ಸರ್ಕಾರಗಳಿಗೆ ನಿಗದಿಪಡಿಸಿದ ಭಾಗದ ಲಸಿಕೆಗಳು ಸರ್ರನೆ ಖಾಸಗಿ ಆಸ್ಪತ್ರೆಗಳಿಗೆ ಜಾರಿವೆ. ರಾಜ್ಯ ಸರ್ಕಾರದ ವತಿಯಿಂದ ಲಸಿಕೆ ದೊರಕದ ಪರಿಸ್ಥಿತಿಯಲ್ಲಿ ಜನರು ಹೆಚ್ಚು ಹಣ ತೆತ್ತು ಖಾಸಗಿ ಆಸ್ಪತ್ರೆಗಳಿಂದ ಲಸಿಕೆ ಹಾಕಿಸಿಕೊಂಡರು. ಮೇಲಾಗಿ, ಖಾಸಗಿ ಆಸ್ಪತ್ರೆಗಳು ನೀಡಿದ ಡೋಸ್‌ಗಳ ಸಂಖ್ಯೆಯು ಲಸಿಕೆ ಕಾರ್ಯಕ್ರಮದ ಅಂಕಿಅಂಶಗಳಲ್ಲಿ ಯಥಾವತ್ತಾಗಿ ಬಿಂಬಿತವಾಗುವುದಿಲ್ಲ, ಏಕೆಂದರೆ, ಈ ಸಂಬಂಧವಾಗಿ ಖಾಸಗಿ ಆಸ್ಪತ್ರೆಗಳು ಸಲ್ಲಿಸುವ ವರದಿಯ ಏರ್ಪಾಟು ಉತ್ತಮವಾಗಿಲ್ಲ. ಈ ಕಾರಣದಿಂದಲೂ ಲಸಿಕೆಗಳ ಕೊರತೆ ಕಂಡುಬಂದಿರಬಹುದು. ಅದೇನೇ ಇರಲಿ, ಈ ವಿದ್ಯಮಾನವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಕಾಣದಂತೆ ಮಾಯವಾದ ಲಸಿಕೆಗಳಲ್ಲಿ ಕೊನೆಯ ಪಕ್ಷ ಒಂದು ಭಾಗವು ಖಾಸಗಿ ಆಸ್ಪತ್ರೆಗಳಿಗೆ ಹೋಗಿರುವ ಅಂಶವು ಅಂಕಿಅಂಶಗಳನ್ನು ಸಂಗ್ರಹಿಸುವ ಏರ್ಪಾಟಿನ ದೋಷದಿಂದಾಗಿ ನಿಖರವಾಗಿ ದಾಖಲಾಗಿಲ್ಲ.

ಇಂತಹ ಒಂದು ಊಹೆಯ ಮೂಲಕ ಕಾಣೆಯಾದ ಲಸಿಕೆಗಳ ವ್ಯತ್ಯಾಸವನ್ನು ಪೂರ್ಣವಾಗಿ ವಿವರಿಸಲಾಗದು. ಅದರ ಒಂದು ಭಾಗವನ್ನಾದರೂ ಲೆಕ್ಕಹಾಕಬಹುದು. ವ್ಯತ್ಯಾಸ ಎಷ್ಟೇ ಇರಲಿ, ಅದರ ಪರಿಣಾಮಗಳು ಮಾತ್ರ ಗಂಭೀರವಾಗಿವೆ. ಲಸಿಕೆ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಗೊಳಿಸಲಾಗಿದೆ ಎಂಬುದನ್ನು ಅದು ಸೂಚಿಸುತ್ತದೆ. ಇಂತಹ ಕ್ರಮದಿಂದಾಗಿ ಜನರಿಗೆ ಸಿಗಬಹುದಾದ ಸರ್ಕಾರದ ಉಚಿತ ಲಸಿಕೆ ಸೌಲಭ್ಯ ತಪ್ಪಿ ಹೋಗುತ್ತದೆ. ಪರಿಣಾಮವಾಗಿ ಜನರು ಸುಖಾ

ಪುಟ 14 ನೋಡಿ



ವ್ಯಂಗ್ಯಚಿತ್ರ ಕೃಪೆ:ಸಾತ್ವಿಕ್ ಗಡೆ, ದಿ ಹಿಂದು

ಕಾಣದಂತೆ ಮಾಯವಾದವೋ ಕೋವಿಡ್ ಲಸಿಕೆಗಳು!

ಪುಟ 13 ರಿಂದ

ಸುಮ್ಮನೇ ಅತಿ ಹೆಚ್ಚು ಹಣ ಕೊಟ್ಟು ಲಸಿಕೆಯನ್ನು ಪಡೆಯಬೇಕಾಗುತ್ತದೆ.

ಒಟ್ಟು ಉತ್ಪಾದನೆಯಲ್ಲಿ, ನಿಗದಿಪಡಿಸಿದ್ದ ಅರ್ಧದಷ್ಟು ಲಸಿಕೆಗಳನ್ನು 150ರೂ ದರದಲ್ಲಿ ಪಡೆಯುವ ಕೇಂದ್ರ ಸರ್ಕಾರವು ಈ ಲಸಿಕೆಗಳನ್ನು 45ಕ್ಕಿಂತ ಹೆಚ್ಚು ವಯೋಮಾನದವರಿಗೆ ಮತ್ತು ಸೇವಾ ಕಾರ್ಯದಲ್ಲಿ ತೊಡಗಿದ ಆದ್ಯತಾ ವಲಯಗಳ ವ್ಯಕ್ತಿಗಳಿಗೆ ನೀಡಿತ್ತು ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. 18 ರಿಂದ 44 ವಯೋಮಾನದವರಿಗೆ, ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳು ಲಸಿಕೆ ನೀಡಬೇಕಾಗಿತ್ತು. ಹಾಗಾಗಿ, ಲಸಿಕೆಗಳನ್ನು ಪಡೆಯಲು ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳು ಸ್ಪರ್ಧೆಗೆ ಇಳಿಯುವಂತಾಯಿತು. ಚಮತ್ಕಾರ ಇರುವುದು ಇಲ್ಲಿಯೇ. ಕೋವಿಶೀಲ್ಡ್ ಲಸಿಕೆಗಳ ಮಾರಾಟದ ದರಗಳನ್ನು ರಾಜ್ಯ ಸರ್ಕಾರಗಳಿಗೆ 400 ರೂ ಮತ್ತು ಖಾಸಗಿ ಆಸ್ಪತ್ರೆಗಳಿಗೆ 600 ರೂ ಎಂದು ನಿಗದಿಯಾಗಿದ್ದರೆ, ಕೊವಾಕ್ಸಿನ್ ಲಸಿಕೆಗಳ ಮಾರಾಟದ ದರಗಳನ್ನು ರಾಜ್ಯ ಸರ್ಕಾರಗಳಿಗೆ 600 ರೂ ಮತ್ತು ಖಾಸಗಿ ಆಸ್ಪತ್ರೆಗಳಿಗೆ 1200 ರೂ ಗಳೆಂದು ನಿಗದಿಪಡಿಸಲಾಗಿತ್ತು. ಹಾಗಾಗಿ, ರಾಜ್ಯ ಸರ್ಕಾರಗಳು ಕೋವಿಶೀಲ್ಡ್ ಲಸಿಕೆಗೆ 400ರೂ ಮತ್ತು ಕೊವಾಕ್ಸಿನ್ ಲಸಿಕೆಗೆ 600ರೂ ಗಳನ್ನೂ ಕೊಡಬೇಕಿದ್ದ ಸಮಯದಲ್ಲಿ ಖಾಸಗಿ ಆಸ್ಪತ್ರೆಗಳು ಕೋವಿಶೀಲ್ಡ್ ಲಸಿಕೆಗೆ 600ರೂ ಗಳನ್ನೂ ಮತ್ತು ಕೊವಾಕ್ಸಿನ್ ಲಸಿಕೆಗೆ 1200ರೂ ಗಳನ್ನೂ ಕೊಡಬೇಕಿದ್ದ ವಿಚಿತ್ರ ಪರಿಸ್ಥಿತಿ ಇದೆ. ಹಲವು ಹತ್ತು ರಾಜ್ಯ ಸರ್ಕಾರಗಳು ಮತ್ತು ಸಾವಿರಾರು ಖಾಸಗಿ ಆಸ್ಪತ್ರೆಗಳು, ಯಾರಿಗೆ ಎಷ್ಟು ಲಸಿಕೆಗಳು ಎಂಬುದನ್ನು ಕಾನೂನುಬದ್ಧವಾಗಿ ನಿಗದಿಪಡಿಸದಿರುವ ಸಂದರ್ಭದಲ್ಲಿ, ಒಂದು ನಿರ್ದಿಷ್ಟ ಸಂಖ್ಯೆಯ ಲಸಿಕೆಗಳನ್ನು ಬೇರೆ ಬೇರೆ ದರಗಳಲ್ಲಿ ಪಡೆಯಲು ಕಿತ್ತಾಡುವಂತಹ ವಾತಾವರಣವನ್ನು ಕೇಂದ್ರ ಸರ್ಕಾರವು ನಿರ್ಮಿಸಿರುವ ಕ್ರಮವು ತರ್ಕಹೀನವಾದದ್ದು. ಆದಾಗ್ಯೂ, ಅದುವೇ ಕೇಂದ್ರ ಸರ್ಕಾರದ ನೀತಿ. ಇದಕ್ಕಿಂತಲೂ ಹೆಚ್ಚು ಬುದ್ಧಿಹೀನ ನೀತಿಯನ್ನು ಊಹಿಸುವುದೂ ಕಷ್ಟವೇ. ಹಾಗಾಗಿ, ಈ ನೀತಿಯು, ಸ್ವಾಭಾವಿಕವಾಗಿ, ಕಡಿಮೆ ಬೆಲೆ ಪಾವತಿಸುವ ಗಿರಾಕಿಯನ್ನು ಹಿಂದಕ್ಕೆ ತಳ್ಳಿ, ಹೆಚ್ಚಿನ ಬೆಲೆ ಪಾವತಿಸುವ ಗಿರಾಕಿಗೆ ಲಸಿಕೆಗಳನ್ನು ಪೂರೈಸುವಲ್ಲಿ ಪರಿಣಮಿಸಿದೆ. ಕೇಂದ್ರ ಸರ್ಕಾರದ ಈ ಬುದ್ಧಿಹೀನತೆಗೆ ಜನರೇ ಬಲಿಪಶುಗಳಾಗಿದ್ದಾರೆ.

ಮಾಯವಾದ ಲಸಿಕೆಗಳು ಖಾಸಗಿ ಆಸ್ಪತ್ರೆಗಳತ್ತ ತಿರುಗಿವೆ ಎಂಬ ವಿವರಣೆಯೂ ಸಹ ಲಸಿಕೆಗಳು ಕಾಣೆಯಾದ ರಹಸ್ಯವನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಈ ಎರಡೂ ಸಂಸ್ಥೆಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಾಗಿ ಮಾಡಿರುವ ಘೋಷಣೆಗಳು ಬಹುಶಃ ಅತಿಶಯದಿಂದ ಕೂಡಿವೆ. ಇಂತಹ ಸಂದರ್ಭದಲ್ಲಿ ಕಡ್ಡಾಯ ಲೈಸೆನ್ಸ್ ಕ್ರಮದ ಮೂಲಕ ಲಸಿಕೆಗಳ ಉತ್ಪಾದನೆಯನ್ನು ತುರ್ತಾಗಿ ಹೆಚ್ಚಿಸುವ ಅಗತ್ಯವಿದೆ. ಆದರೆ, ನೀತಿ ಆಯೋಗವು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಕಡ್ಡಾಯ ಲೈಸೆನ್ಸ್ ಕ್ರಮವನ್ನು ತಳ್ಳಿಹಾಕಿರುವ ಅಂಶವು ಗಮನಾರ್ಹವಾಗಿದೆ. ಕೋವಿಡ್–19 ಲಸಿಕೆಗಳ ಮೇಲಿನ ಪೇಟೆಂಟ್ ಹಕ್ಕುಗಳನ್ನು ಜಾಗತಿಕ ಮಟ್ಟದಲ್ಲಿ ಸ್ಥಗಿತಗೊಳಿಸಬೇಕೆಂದು ಬಯಸುವ ಮೋದಿ ಸರ್ಕಾರವು ತನ್ನದೇ ದೇಶದಲ್ಲಿ ಕಡ್ಡಾಯ ಲೈಸೆನ್ಸ್ ಮೂಲಕ ಲಸಿಕೆಗಳ ಉತ್ಪಾದನೆಯನ್ನು ತುರ್ತಾಗಿ ಹೆಚ್ಚಿಸುವ ಕ್ರಮವನ್ನು ಸಾರಾಸಗಟಾಗಿ ತಳ್ಳಿ ಹಾಕಿರುವ ಕ್ರಮವು ಊಹೆ, ಬುದ್ಧಿಶಕ್ತಿ ಮತ್ತು ತರ್ಕಗಳಿಗೆ ನಿಲುಕುವುದಿಲ್ಲ. ಅದೇನೇ ಇರಲಿ, ಜಾಗತಿಕ ಮಟ್ಟದಲ್ಲಿ ಪೇಟೆಂಟ್ ಹಕ್ಕುಗಳನ್ನು ಸ್ಥಗಿತಗೊಳಿಸುವ ಮಾತುಕತೆಗಳಿಗೆ ಬಹಳ ಸಮಯ ಹಿಡಿಯುತ್ತದೆ. ಏತನ್ಮಧ್ಯೆ ಪೇಟೆಂಟ್ ಹಕ್ಕುಗಳನ್ನು ಅಮಾನತಿನಲ್ಲಿ ಇಡುವಂತೆ ಒತ್ತಾಯಿಸಲು ಮೋದಿ ಸರ್ಕಾರವು ಬಳಸುವ ಅದೇ ತರ್ಕವನ್ನು ಕಡ್ಡಾಯ ಲೈಸೆನ್ಸ್ ನೀಡಲೂ ಸಹ ಬಳಸಬಹುದು. ಆದರೆ, ಮೋದಿ ಸರ್ಕಾರದ ನೀತಿಗಳ ಅಂತರಂಗವೇ ಬೇರೆ, ಬಹಿರಂಗವೇ ಬೇರೆ.

ರಾಷ್ಟ್ರೀಯ ರಂಗ ಸರಕಾರ: ಕಾರ್ಮಿಕರ ಪರಿಸ್ಥಿತಿ 1989-1991



ಪುಟ 11 ರಿಂದ

ಇಪ್ಪತ್ತೊಂಬತ್ತನೇಯ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವು ಕೆಲವು ಸಕಾರಾತ್ಮಕ ಫಲಿತಾಂಶಗಳನ್ನು ಸಾಧಿಸಿತು ಮತ್ತು ಇದು ಈ ವಿಷಯದಲ್ಲಿ ಟ್ರೇಡ್ ಯೂನಿಯನ್ ಐಕ್ಯತೆಯ ಮಹತ್ವದ ಅಂಶವಾಗಿದೆ.

ಉದ್ಯೋಗದಲ್ಲಿ ಮೀಸಲಾತಿ
– ಮಂಡಲ್ ಆಯೋಗದ ವರದಿಯ ಅನುಷ್ಠಾನ

ಹಿಂದಿನ ಜನತಾ ಪಕ್ಷ ಸರ್ಕಾರವು 1978 ರಲ್ಲಿ ಸ್ಥಾಪಿಸಿದ ಬಿ.ಪಿ ಮಂಡಲ್ ಅಧ್ಯಕ್ಷತೆಯ, ಎರಡನೇ ಹಿಂದುಳಿದ ವರ್ಗ ಆಯೋಗ ತನ್ನ ಶಿಫಾರಸುಗಳನ್ನು 31 ಡಿಸೆಂಬರ್ 1980 ರಂದು ಸಲ್ಲಿಸಿತ್ತು.

ಅಂತಿಮವಾಗಿ, ವಿ.ಪಿ. ಸಿಂಗ್ ಈ ಕುರಿತು ಧೀರ ನಿರ್ಧಾರ ಕೈಗೊಂಡು, 1990 ರ ಆಗಸ್ಟ್ 7 ರಂದು ಸಂಸತ್ತಿನಲ್ಲಿ ಘೋಷಿಸಿದರು ಮತ್ತು ನಂತರ 13 ಆಗಸ್ಟ್ 1990 ರಂದು ಹಿಂದುಳಿದ ವರ್ಗಗಳಿಗೆ ಉದ್ಯೋಗ ಕಾಯ್ದಿರಿಸುವ ಆಯೋಗದ ಶಿಫಾರಸನ್ನು ಅಂಗೀಕರಿಸಿದ, ಅಧಿಕೃತ ಆದೇಶವನ್ನು ಹೊರಡಿಸಲಾಯಿತು.

ಮಂಡಲ್ ಆಯೋಗದ ಬಗ್ಗೆ ತೀವ್ರ ಚರ್ಚೆ

ವಾಸ್ತವವಾಗಿ, ಹಿಂದುಳಿದ ಜಾತಿಗಳಿಗೆ ಮೀಸಲಾತಿ ಅದಾಗಲೇ ತಮಿಳುನಾಡು, ಕೇರಳ ಬಿಹಾರ, ಕರ್ನಾಟಕದಂತಹ ಕೆಲವು ರಾಜ್ಯಗಳಲ್ಲಿ ಚಾಲ್ತಿಯಲ್ಲಿತ್ತು. ಈ ಮೀಸಲಾತಿ ವ್ಯವಸ್ಥೆಯು ಯಾವುದೇ ಪ್ರತಿರೋಧವಿಲ್ಲದೆ ಕಾರ್ಯನಿರ್ವಹಿಸುತ್ತಿತ್ತು. ಆದರೆ ಕೇಂದ್ರ ಸರ್ಕಾರದ ಸೇವೆಗಳಲ್ಲಿ ಮತ್ತು ಕೇಂದ್ರೀಯ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ 27% ಉದ್ಯೋಗಗಳನ್ನು ಕಾಯ್ದಿರಿಸುವ ಮಂಡಲ್ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ 1990ರ ಆಗಸ್ಟ್ 7 ರಂದು ಪ್ರಧಾನಮಂತ್ರಿಯವರ ಘೋಷಣೆಯನ್ನು ಅನುಸರಿಸಿ, ಅತ್ಯಂತ ಬಿಸಿಯಾದ ಚರ್ಚೆ, ಹಿಂಸಾಚಾರ ಮತ್ತು ಆತ್ಮಹತ್ಯೆಗಳು ನಡೆದವು.

ಮೀಸಲಾತಿ ಅಗತ್ಯ ಕ್ರಮವಾಗಿದ್ದರೂ, ಅದು ಸ್ವತಃ ಸಾಕಾಗುವುದಿಲ್ಲ ಮತ್ತು ಫಲಾನುಭವಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ಇತರ ಕ್ರಮಗಳೊಂದಿಗೆ ಇರಬೇಕು ಎಂದು ಈ ಸಂಬಂಧದಲ್ಲಿ ನೆನಪಿನಲ್ಲಿಡಬೇಕು. ಅಂತೆಯೇ, ಹಿಂದುಳಿದ ವರ್ಗಗಳಿಗೆ ಸಮಗ್ರ ಪ್ಯಾಕೇಜ್ ಅಗತ್ಯವಿದ್ದರೂ, ಸಾಮಾನ್ಯ ಬಡತನದ ಮೇಲೆ ವ್ಯಾಪಕವಾದ ದಾಳಿಯ ಹೊರತು ಅದು ಸಾಕಾಗುವುದಿಲ್ಲ. ಆದ್ದರಿಂದ ಒಂದು ಆಮೂಲಾಗ್ರ ಭೂ ಸುಧಾರಣೆಯು ಮಾತ್ರ ರೈತರು ಮತ್ತು ಬಹುತೇಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಅಥವಾ ಇತರ ಹಿಂದುಳಿದ ಜಾತಿಗಳಿಗೆ ಸೇರಿದ, ಕೃಷಿ ಕಾರ್ಮಿಕರಿಗೆ ನಿಜವಾಗಿಯೂ ಪ್ರಯೋಜನವನ್ನು ನೀಡುತ್ತವೆ. ದುರದೃಷ್ಟವಶಾತ್, ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾವನ್ನು ಹೊರತುಪಡಿಸಿ. ಯಾವುದೇ ರಾಜ್ಯದಲ್ಲಿ ಉಪಯುಕ್ತ ಭೂಸುಧಾರಣೆಗಳು ಆಗಿರುವುದಿಲ್ಲ. ಹೆಚ್ಚಿನ ರಾಜ್ಯಗಳಲ್ಲಿ, ಕೆಲವು ಜಾತಿ–ಗುಂಪುಗಳ ಹಿಂದುಳಿದಿರುವಿಕೆಗೆ, ಹೆಚ್ಚಿನ ಪ್ರಮಾಣದ ಭೂಮಿ ಇನ್ನೂ ಕೆಲವೇ ಜನರಲ್ಲಿ ಕೇಂದ್ರೀಕೃತವಾಗಿ ಉಳಿದಿರುವುದೇ ಆಗಿದೆ..

ಇದಲ್ಲದೆ, ಮೂಲಭೂತ ಭೂಸುಧಾರಣೆಗಳ ಜೊತೆಗೆ, ಆರ್ಥಿಕ ನೀತಿಗಳಲ್ಲಿ ಮೂಲಭೂತ ಬದಲಾವಣೆಗಳ ಅಗತ್ಯವಿದೆ. ದೇಶದ ಶೀಘ್ರವಾಗಿ ಹೆಚ್ಚುತ್ತಿರುವ ನಿರುದ್ಯೋಗಿ ಸೈನ್ಯವನ್ನು ಹೀರಿಕೊಳ್ಳಲು ದೇಶದ ತ್ವರಿತ ಕೈಗಾರಿಕೀಕರಣ, ವಿಶೇಷವಾಗಿ ಉದ್ಯೋಗ–ವರ್ಧಿತ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳ ಅಗತ್ಯವಿದೆ.

ಬಹಳ ಮುಖ್ಯವಾದುದು, ಸಾರ್ವಜನಿಕ ವಲಯದಲ್ಲಿ ಈ ಅಲ್ಪ ಪ್ರಮಾಣದ ಉದ್ಯೋಗ ಸೃಷ್ಟಿಯಲ್ಲಿಯೂ ಸಹ, ಕಳೆದ ಹಲವು ವರ್ಷಗಳಿಂದ ಸಾರ್ವಜನಿಕ ವಲಯದ ಸೇವೆಗಳು ಮತ್ತು ಕೇಂದ್ರ ಸರ್ಕಾರಿ ಸೇವೆಗಳಲ್ಲಿ ನೇಮಕಾತಿಯ ಮೇಲಿನ ಸಂಪೂರ್ಣ ನಿಷೇಧವು ಜಾರಿಯಲ್ಲಿದೆ; ಈ ನಿಷೇಧವು ಸಾರ್ವಜನಿಕ ವಲಯ ಮತ್ತು ಕೇಂದ್ರ ಸರ್ಕಾರದ ಕಚೇರಿಗಳಲ್ಲಿನ ಉದ್ಯೋಗದಿಂದ ನಿರುದ್ಯೋಗಿ ಯುವಕರಿಗೆ ಸಿಗಬಹುದಾದ ಯಾವುದೇ ಅಲ್ಪ ಲಾಭವನ್ನು ಇಲ್ಲವಾಗಿಸುತ್ತದೆ.

ಆರ್ಥಿಕ ಮತ್ತು ಕೃಷಿ ನೀತಿಗಳಲ್ಲಿನ ಮೂಲಭೂತ ಬದಲಾವಣೆಯ ಮೂಲಕ ಸಮರ್ಪಕ ಉದ್ಯೋಗಗಳನ್ನು ಸೃಷ್ಟಿಸುವುದು ಮತ್ತು ಇಡೀ ಸಮಾಜದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪರಿಣಾಮಕಾರಿ ಕ್ರಮಗಳು ದೇಶದ ಮುಂದಿರುವ ಪ್ರಮುಖ ಸಮಸ್ಯೆ. ಸಮಾಜದ ಸರ್ವಾಂಗೀಣ ಅಭಿವೃದ್ಧಿ ಮತ್ತು ಆಧುನೀಕರಣವಿಲ್ಲದೆ ಕೆಲವು ಜಾತಿ ಗುಂಪುಗಳ ಹಿಂದುಳಿದಿರುವಿಕೆಯನ್ನು ತೆಗೆದುಹಾಕಲು ಸಾಧ್ಯವಿಲ್ಲ, ಅಥವಾ ಸಮಾಜದ ಊಳಿಗಮಾನ್ಯ ಮತ್ತು ಪ್ರತಿಗಾಮಿ ಜಾತಿ–ವಿಭಜನೆಗಳನ್ನು ಹೋಗಲಾಡಿಸಲಾಗುವುದಿಲ್ಲ. ಭಾರತದ ಸಮಾಜದ ಜಾತಿವಾದವು ಖಂಡಿತವಾಗಿಯೂ ಪ್ರತಿಗಾಮಿ, ಹಿಂದುಳಿದ, ಮೂಢ ನಂಬಿಕೆ ಮತ್ತು ವಿಭಜಕ ವಿದ್ಯಮಾನವಾಗಿದೆ. ಸೈದ್ಧಾಂತಿಕ ಪಾತಳಿಯಲ್ಲಿ ಅದನ್ನು ತೊಲಗಿಸಲು ಹೋರಾಡಬೇಕಾಗಿದೆ. ಅದೇ ಸಮಯದಲ್ಲಿ ಹಿಂದುಳಿದ ಜಾತಿಗಳ ಆರ್ಥಿಕ ಮತ್ತು ಶೈಕ್ಷಣಿಕ ಉನ್ನತಿಯ ಮೂಲಕ, ಸಮಾಜವು ಸಮತ್ವದತ್ತ ಸಾಗಬೇಕು ಇದರಿಂದ ಜಾತಿ–ಭೇದದ ಶಾಪವು ಅಂತಿಮವಾಗಿ ಸೋಲುತ್ತದೆ.

ಭಾರತದಂತಹ ಸಮಾಜದಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜನರಿಗೆ ಕೆಲವು ಹೆಚ್ಚುವರಿ ಸೌಲಭ್ಯಗಳು ಮತ್ತು ರಕ್ಷಣೆ ನೀಡುವ ಅಗತ್ಯವನ್ನು ನಿರಾಕರಿಸಲಾಗುವುದಿಲ್ಲ. ಸಾಮಾಜಿಕ ನ್ಯಾಯದ ಆ ಅಂಶದಿಂದ, ಮಂಡಲ್ ಆಯೋಗದ ವರದಿಯನ್ನು ಅಗತ್ಯ ಮಾರ್ಪಾಡುಗಳೊಂದಿಗೆ ಅನುಷ್ಠಾನಗೊಳಿಸುವುದು, ನಂತರ ಈ 27% ಮೀಸಲಾತಿಯ ವ್ಯಾಪ್ತಿಯಿಂದ ಹಿಂದುಳಿದ ಜಾತಿಗಳ 'ಕೆನೆ ಪದರವನ್ನು' ಬಿಟ್ಟುಬಿಡುವ ಮೂಲಕ ಸುಪ್ರೀಂ ಕೋರ್ಟ್ ನಿರ್ಧರಿಸಿದ ರೀತಿಯಲ್ಲಿ, ವಿಶೇಷವಾಗಿ ಆರ್ಥಿಕ ಮಾನದಂಡವನ್ನು ಸರಿಪಡಿಸುವುದು, ಸರಿಯಾದ ಹೆಜ್ಜೆ.

ಆದ್ದರಿಂದ ಈ ಗುರಿಯನ್ನು ಸಾಧಿಸಲು 'ಹಿಂದುಳಿದವರು' ಅಥವಾ 'ಮುಂದುವರೆದವರು' ಇರಲಿ, ಎಲ್ಲಾ ವರ್ಗದ ಜನರ ವಿಶೇಷವಾಗಿ ಕಾರ್ಮಿಕರು ಮತ್ತು ನೌಕರರ ಐಕ್ಯ ಹೋರಾಟವನ್ನು ನಿರ್ಮಿಸಬೇಕಾಗಿದೆ. 'ಹಿಂದುಳಿದವರು' ಕೇವಲ ಮೀಸಲಾತಿಯೊಂದಿಗೆ ಮಾತ್ರ ತೃಪ್ತರಾಗಿ ಉಳಿಯುವುದು ಸಂಪೂರ್ಣವಾಗಿ ನಿಷ್ಪ್ರಯೋಜಕ ಮತ್ತು ವಂಚಕ ಸಂಗತಿಯಾಗಿದೆ ಮತ್ತು 'ಮುಂದುವರೆದವರು' ಅದರ ವಿರುದ್ಧ ತೀವ್ರ ಕೋಪವನ್ನು ವ್ಯಕ್ತಪಡಿಸುವುದು ಅಷ್ಟೇ ಅರ್ಥಹೀನವಾಗಿದೆ. ಪರಿಸ್ಥಿತಿಯು ಒಂದು ಮೂಲಭೂತ ಸಾಮಾಜಿಕ ಬದಲಾವಣೆಯನ್ನು ಬಯಸುತ್ತದೆ, ಇದಕ್ಕಾಗಿ ಇಬ್ಬರೂ ಒಗ್ಗಟ್ಟಿನಿಂದ ಹೋರಾಡಬೇಕು. ಇದು ಇಂದು ಭಾರತದ ಟ್ರೇಡ್ ಯೂನಿಯನ್ ಆಂದೋಲನದ ಪ್ರಮುಖ ಕಾರ್ಯಭಾರ ವಾಗಬೇಕು.

ವೇತನ ನೀತಿ ಮತ್ತು ಸಂವಿಧಾನದ 310 ಮತ್ತು 311(2)ಎ, ಬಿ ಮತ್ತು ಸಿ ಅನುಚ್ಛೇದಗಳನ್ನು ರದ್ದುಪಡಿಸುವ ಕುರಿತ ರಾಷ್ಟ್ರೀಯ ಸೆಮಿನಾರ್

'ರಾಷ್ಟ್ರೀಯ ವೇತನ ನೀತಿ' ಮತ್ತು 'ಸಂವಿಧಾನದ 310 ಮತ್ತು 311 (2) ಎ, ಬಿ ಮತ್ತು ಸಿ ಅನುಚ್ಛೇದಗಳನ್ನು ಅಳಿಸುವುದು' ಕುರಿತ ರಾಷ್ಟ್ರೀಯ ಸೆಮಿನಾರ್ ಅನ್ನು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಆಶ್ರಯದಲ್ಲಿ 6 ಮತ್ತು 7 ಸೆಪ್ಟೆಂಬರ್ 1990 ರಂದು ನವದೆಹಲಿಯಲ್ಲಿ ನಡೆಸಲಾಯಿತು. ಎರಡು ದಿನಗಳ ಸೆಮಿನಾರ್ ಸಮಕಾಲೀನ ಟ್ರೇಡ್ ಯೂನಿಯನ್ ಆಂದೋಲನದ ಎರಡು ಪ್ರಮುಖ ವಿಷಯಗಳನ್ನು ಎತ್ತಿ ತೋರಿಸಿತು.–ಒಂದು ರಾಷ್ಟ್ರೀಯ ವೇತನ ನೀತಿಯನ್ನು ವಿಕಸಿಸುವ ಅವಶ್ಯಕತೆ ಮತ್ತು ಇನ್ನೊಂದು, ಸರ್ಕಾರಿ ನೌಕರರ ಚಳುವಳಿಯ ಮೇಲೆ ಪರಿಣಾಮ ಬೀರುವ–ಅನುಚ್ಛೇದ 310 ಮತ್ತು 311 (2) ಎ, ಬಿ ಮತ್ತು ಸಿ., ಸರ್ಕಾರಿ ನೌಕರರಿಗೆ ಸ್ವರಕ್ಷಣೆಗಾಗಿ ಯಾವುದೇ ಅವಕಾಶವನ್ನು ಒದಗಿಸದೆ ನಿರಂಕುಶವಾಗಿ ವಜಾಗೊಳಿಸಲು ಬಳಸುವ ನಿಬಂದನೆಗಳ ರದ್ದತಿ.

ಆದರೆ 1990 ರ ನವೆಂಬರ್ ಮೊದಲ ವಾರದಲ್ಲಿ ರಾಷ್ಟ್ರೀಯ ರಂಗದ ಸರ್ಕಾರದ ಪತನದೊಂದಿಗೆ ಪರಿಸ್ಥಿತಿ ಶೀಘ್ರದಲ್ಲೇ ಬದಲಾಯಿತು.

ಅಕ್ಟೋಬರ್ 1990 ರಲ್ಲಿ ದೇಶವು ಕೋಮು ಭಾವೋದ್ರೇಕಗಳ ಪುನರುತ್ಥಾನಕ್ಕೆ ಸಾಕ್ಷಿಯಾಯಿತು ಮತ್ತು ಬಿಜೆಪಿ ಮುಖ್ಯಸ್ಥ ಎಲ್.ಕೆ. ಅಡ್ವಾಣಿ ಅವರ ಬಾಬರಿ ಮಸೀದಿ– ರಾಮಮಂದಿರ ವಿಷಯದ ಬಗೆಗಿನ 'ರಥ–ಯಾತ್ರೆ', ತನ್ನ ದಾರಿಯುದ್ದಕ್ಕೂ ವ್ಯಾಪಕವಾಗಿ ಹರಡಿದ ಕೋಮು ಹತ್ಯೆಗಳನ್ನು ತಂದಿತು. ಕೋಮು ಪರಿಸ್ಥಿತಿಯು ಎಂತಹ ಅಪಾಯಕಾರಿ ಪ್ರಮಾಣವನ್ನು ತಲುಪಿತೆಂದರೆ, ವಿ.ಪಿ. ಸಿಂಗ್ ಸರ್ಕಾರವು ಆ 'ರಥ–ಯಾತ್ರೆ'ಯನ್ನು ನಿಲ್ಲಿಸಲು ಆದೇಶಿಸಬೇಕಾಯಿತು ಮತ್ತು ಎಲ್.ಕೆ. ಅಡ್ವಾಣಿ ಮತ್ತು ಅವರ ಸಹಚರರನ್ನು ಬಂಧಿಸಿ, ಪ್ರಜ್ಞಾಪೂರ್ವಕವಾಗಿ ತಮ್ಮ ಸರ್ಕಾರದ ಅಧಿಕಾರಾವಧಿಯನ್ನು ಅಪಾಯಕ್ಕೆ ಸಿಲುಕಿಸಬೇಕಾಯಿತು. ಈ ಪರಿಸ್ಥಿತಿಯಲ್ಲಿ ಬಿಜೆಪಿ ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಿತು ಮತ್ತು ಕಾಂಗ್ರೆಸ್ (ಐ) ಸಹಾಯದಿಂದ ನವೆಂಬರ್ 7, 1990 ರಂದು ವಿ.ಪಿ. ಸಿಂಗ್ ಸರ್ಕಾರದ ವಿರುದ್ಧ ಮತ ಚಲಾಯಿಸಲಾಯಿತು. ಸಮಾಜವಾದಿ ಜನತಾ ಪಕ್ಷದ ಮುಖಂಡ ಎಸ್. ಚಂದ್ರಶೇಖರ್ ನೇತೃತ್ವದ ಜನತಾದಳದಿಂದ ಒಡೆದ ಗುಂಪಿನ, ಹೊಸ ಅಲ್ಪಸಂಖ್ಯಾತ ಸರ್ಕಾರ – ಕೆಲವೇ ಲೋಕಸಭಾ ಸದಸ್ಯರೊಂದಿಗೆ, ಆದರೆ ಕಾಂಗ್ರೆಸ್ (ಐ) ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದಿತು. ಕಾರ್ಮಿಕ ವರ್ಗದ ಚಳವಳಿಯ ಮೇಲೆ ಅದರ ಅನಿವಾರ್ಯ ಪರಿಣಾಮಗಳೊಂದಿಗೆ ಭಾರತದ ರಾಜಕೀಯ ಪರಿಸ್ಥಿತಿಯ ರಾಜಕೀಯ ಅಸ್ಥಿರತೆಯು ಮತ್ತಷ್ಟು ಗಾಢ ವಾಯಿತು.

ದಶಕದ ಅಂತ್ಯದಲ್ಲಿ


ರಾಷ್ಟ್ರೀಯ ರಂಗದ ಸರ್ಕಾರದ ನಂತರ ಬಂದ ಹೊಸ ಅಲ್ಪಸಂಖ್ಯಾತ ಸರ್ಕಾರವು ಕೇವಲ ಐದು ತಿಂಗಳ ವರೆಗೆ ಉಳಿಯಿತು. ಹೊಸ ದಶಕದ ಆರಂಭದಲ್ಲಿ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಚುನಾವಣಾ ಪ್ರಚಾರದ ಸಮಯದಲ್ಲಿ ನಡೆದ ಕ್ರೂರ ಹತ್ಯೆಯಿಂದ ದೇಶವು ತೀವ್ರ ಆಘಾತ ಮತ್ತು ಭಾರಿ ಸಂಕ್ಷೋಭೆಯನ್ನು ಅನುಭವಿಸಿತು. ಈ ಭೀಕರ ಹತ್ಯೆಯ ನಂತರ. ಕಾಂಗ್ರೆಸ್ (ಐ) ಮತ್ತೆ 1991 ರ ಜೂನ್‌ನಲ್ಲಿ ನರಸಿಂಹ ರಾವ್ ಅವರು ಪ್ರಧಾನ ಮಂತ್ರಿಯಾಗಿ ಅಧಿಕಾರಕ್ಕೆ ಬಂದಿತು.

ಪಾವತಿ ಬಿಕ್ಕಟ್ಟಿನ ತೀವ್ರ ಸಮತೋಲನವನ್ನು ಎದುರಿಸಲು ಐಎಂಎಫ್ ನಿಂದ ಭಾರಿ ಸಾಲವನ್ನು ಪಡೆದ ನಂತರ ರಾಜೀವ್ ಗಾಂಧಿ ಸರ್ಕಾರವು 1985 ರಿಂದ ಪ್ರಾರಂಭಿಸಿದ ಹೊಸ ಆರ್ಥಿಕ ನೀತಿಗೆ ನರಸಿಂಹ ರಾವ್ ಸರ್ಕಾರವು ತೀವ್ರವಾದ ವಿಸ್ತಾರ ಮತ್ತು ಆಯಾಮವನ್ನು ನೀಡಿತು.

ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ಷರತ್ತುಗಳನ್ನು ಅನುಸರಿಸಿ ಸರ್ಕಾರ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನು ಘೋಷಿಸಿತು. ಕಾರ್ಮಿಕ ವರ್ಗವು ತೀವ್ರವಾದ ಆಕ್ರಮಣಗಳನ್ನು ಎದುರಿಸಬೇಕಾಯಿತು. ಹೊಸ ಪರಿಸ್ಥಿತಿಯು ಈ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳ ವಿರುದ್ಧ ಟ್ರೇಡ್ ಯೂನಿಯನ್ ಐಕ್ಯತೆ ಮತ್ತು ದೇಶವ್ಯಾಪಿ ಹೋರಾಟದ ಹೊಸ ಹಂತವನ್ನು ಬಿಚ್ಚಿಟ್ಟಿತು. ಕಾರ್ಮಿಕ ವರ್ಗದ ಈ ಹೊಸ ಹಂತದ ಹೋರಾಟವು ಭಾರತದ ಕಾರ್ಮಿಕ–ವರ್ಗದ ಚಳವಳಿಯ ಇತಿಹಾಸದಲ್ಲಿ ಸಾಟಿಯಿಲ್ಲದ ಅಧ್ಯಾಯವನ್ನು ಗುರುತಿಸಿತು.

ಪ್ಯಾರಿಸ್ ಕಮ್ಯೂನ್ -150 ಪುಸ್ತಕ ಬಿಡುಗಡೆ

ಮಾನವ ಕುಲದ ವಿಮೋಚನೆ ಕಾರ್ಮಿಕ ವರ್ಗದ ಜವಾಬ್ದಾರಿ: ಮೀನಾಕ್ಷಿ ಸುಂದರಂ



ವರದಿ: **ವಿನೋದ ಶ್ರೀರಾಮಪುರ**

ಮಾನವ ಕುಲವನ್ನು ಎಲ್ಲಾ ಬಗೆಯ ಶೋಷಣೆಯಿಂದ ಮುಕ್ತಿಗೊಳಿಸುವುದು ಕಾರ್ಮಿಕ ವರ್ಗದ ಜವಾಬ್ದಾರಿಯಾಗಿದೆ ಹಾಗೂ ಕಾರ್ಮಿಕ ವರ್ಗವೇ ಇಂತಹ ಜವಾಬ್ದಾರಿ ನಿರ್ವಹಿಸಲು ಸಾಧ್ಯ ಎಂಬುದನ್ನು 'ಪ್ಯಾರಿಸ್ ಕಮ್ಯೂನ್' ತೋರಿಸಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಮೀನಾಕ್ಷಿ ಸುಂದರಂ ತಿಳಿಸಿದರು

ಕ್ರಿಯಾ ಮಾಧ್ಯಮ ಹೊರ ತಂದಿರುವ 150 ವರ್ಷಾಚರಣೆಯ ಸಂದರ್ಭದಲ್ಲಿ 'ಪ್ಯಾರಿಸ್ ಕಮ್ಯೂನ್ 150' ಕನ್ನಡ ಪುಸ್ತಕವನ್ನು ಆನ್ ಲೈನ್ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದರು.

'ಪ್ಯಾರಿಸ್ ನಗರದಲ್ಲಿ ಚೆಲ್ಲಿದ ರಕ್ತ ನಮ್ಮ ರಕ್ತ, ಚಿಕಾಗೋ ನಗರದಲ್ಲಿ ಹಾರಾಡಿದ ಬಾವುಟ ನಮ್ಮ ಬಾವುಟ' ಎಂದು ಸದಾಕಾಲ ಘೋಷಣೆಗಳ ಮೂಲಕ ನಾವು ಮೊಳಗಿಸುತ್ತೇವೆ. ಇಂದಿಗೂ ಪ್ಯಾರಿಸ್ ಕಮ್ಯೂನ್ ಹೋರಾಟ ಅತ್ಯಂತ ಪ್ರಸ್ತುತವಾಗಿದೆ. 1871ರ ಮಾರ್ಚ್ 18ರಿಂದ ಮೇ 28ರವರೆಗೆ 72 ದಿನಗಳ, ಅತ್ಯಂತ ಸಮರಶೀಲವಾಗಿ ಇಡೀ ಪ್ಯಾರಿಸ್ ನಗರ ಸಂಪೂರ್ಣವಾಗಿ ದುಡಿಯುವವರ ಪ್ರಭುತ್ವದ ಅಧಿಕಾರ ಸ್ಥಾಪನೆಯಾಗಿತ್ತು. ದುಡಿಯುವ ವರ್ಗಕ್ಕೆ ಶೋಷಣೆ ಮುಕ್ತ ಸಮಾಜವನ್ನು ಕಟ್ಟುವುದು, ಆಡಳಿತ ನಡೆಸುವುದು ಸಾಧ್ಯವೆಂದು ತೋರಿಸಿಕೊಟ್ಟಿದ್ದು 'ಪ್ಯಾರಿಸ್ ಕಮ್ಯೂನ್' ಎಂದು ಹೇಳಿದರು.

ಜರ್ಮನಿ ಮತ್ತು ಫ್ರಾನ್ಸ್ ಅತ್ಯಂತ ಕಡುವೈರಿಗಳಾಗಿದ್ದ, ಅಂದಿನ ಬಲಾಢ್ಯ ಜರ್ಮನಿಯು ಫ್ರಾನ್ಸ್ ಮೇಲೆ ಯುದ್ಧವನ್ನು ಹೂಡಿ ಅದು ಶರಣಾಗತವಾಗುವಂತೆ ಮಾಡುತ್ತದೆ. ಫ್ರಾನ್ಸ್ ನಲ್ಲಿನ ಆಳುವ ನೆಪೊಲಿಯನ್-3 ಬಂಧನಕ್ಕೆ ಒಳಗಾಗುತ್ತಾರೆ. ಆಗ ಇಡೀ ದುಡಿಯುವ ವರ್ಗ ಪ್ಯಾರಿಸನ್ನು ವಶಕ್ಕೆ ಪಡೆಯುವ ಮೂಲಕ ದುಡಿಯುವ ವರ್ಗದ ಅಧಿಕಾರವನ್ನು ಸ್ಥಾಪನೆ ಮಾಡುತ್ತಾರೆ. ದುಡಿಯುವ ಜನರ ಸರಕಾರವನ್ನು ಸೋಲಿಸಲು ಫ್ರಾನ್ಸ್ ನ ಮತ್ತು ಜರ್ಮನಿಯ ಬೂರ್ಷ್ವಾ ವರ್ಗಗಳು ಆ ಮೇಲೆ ಒಳಒಪ್ಪಂದ ಮಾಡಿಕೊಂಡು, ಅಂತರ್ಯುದ್ಧದಲ್ಲಿ ಜರ್ಮನಿಯ ಸೈನ್ಯದ ಸಹಾಯದಿಂದ ಫ್ರಾನ್ಸ್ ನ ಸೈನ್ಯ ಅಂತರ್ಯುದ್ಧ ಹೂಡುತ್ತದೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಕಮ್ಯೂನ್ ನ ಧೀರರು ಈ ಅಂತರ್ಯುದ್ಧದಲ್ಲಿ ಮರಣ ಹೊಂದುತ್ತಾರೆ. ಎಲ್ಲ ದುಡಿಯುವ ವರ್ಗದ ನಾಯಕರನ್ನು ಬೇಟೆಯಾಡಿ ಕೊಲ್ಲಲಾಗುತ್ತದೆ.

ಪ್ರೆಂಚ್ ಕ್ರಾಂತಿಯ ಬಗ್ಗೆ ನಮಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಆದರೆ ಪ್ಯಾರಿಸ್ ಕಮ್ಯೂನ್ ಕುರಿತ ಮಾಹಿತಿಗಳು ಅಷ್ಟಾಗಿ ಸಿಗುವುದಿಲ್ಲ. ವ್ಯವಸ್ಥಿತವಾಗಿ ಮಾಹಿತಿಗಳನ್ನು ಮುಚ್ಚಿಹಾಕಲಾಗಿದೆ. ಕಾರ್ಮಿಕರು ತಮ್ಮ ದೈನಂದಿನ ಆರ್ಥಿಕ ಅಗತ್ಯಗಳಿಗೆ ಮಾತ್ರ ಸೀಮಿತಗೊಳ್ಳದೇ, ಶೋಷಣೆಯ ಕಪಿಮುಷ್ಠಿಯಿಂದ ವಿಮೋಚನೆಗೊಳ್ಳುವ ಬಗ್ಗೆ ಚಿಂತಿಸಬೇಕಿದೆ. 'ಪ್ಯಾರಿಸ್ ಕಮ್ಯೂನ್ 150' ನಂತಹ ಚರಿತ್ರೆಯ ಪುಸ್ತಕಗಳು ಈಗಿನ ಕಾರ್ಮಿಕರಿಗೆ ದಾರಿದೀಪವಾಗಲಿ ಎಂದು ಅವರು ಆಶಿಸಿದರು.

ಕಾರ್ಮಿಕರು ಅಧಿಕಾರ ಹಿಡಿದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಜಾರಿಗೆ ಬರುತ್ತದೆ. ಉಳಿದೆಲ್ಲವೂ ಪ್ರಜಾಪ್ರಭುತ್ವ ದ ಹೆಸರಿನ ಬೆರಳೆಣಿಕೆಯ ಶ್ರೀಮಂತರ ಸರ್ವಾಧಿಕಾರ ಎಂದು ಅವರು ಬಣ್ಣಿಸಿದರು.

ಪುಸ್ತಕ ಕುರಿತು ಲೇಖಕರು, ಚಿಂತಕರೂ ಆದ ಡಾ. ಬಿ.ಆರ್. ಮಂಜುನಾಥ್ ಅವರು ಮಾತನಾಡಿ 'ಪ್ಯಾರಿಸ್ ಕಮ್ಯೂನ್' ಬಗ್ಗೆ ಕಾರ್ಮಿಕರು 'ಸ್ವರ್ಗದ ಬಾಗಿಲು ತೆಗೆದರು' ಎಂಬ ಕಾರ್ಲ್ ಮಾರ್ಕ್ಸ್ ಅವರ ಮೆಚ್ಚಿಗೆಯನ್ನು ಪಡೆದುಕೊಂಡ ಪ್ಯಾರಿಸ್ ಕಮ್ಯೂನಿನ 150ನೇ ವರ್ಷದ ಆಚರಣೆಯ ಸಂದರ್ಭದಲ್ಲಿ, ಅಂದಿನ ದುಡಿಯುವ ವರ್ಗದ ಪ್ರಯೋಗದ ಬಗ್ಗೆ ಇಂದಿನ ದುಡಿಯುವ ವರ್ಗವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವುದು ಅಗತ್ಯ. ಅದಕ್ಕೆ ಈ ಪುಸ್ತಕ ಅತ್ಯಂತ ಮಹತ್ವದ್ದಾಗಿದೆ' ಎಂದು ಹೇಳಿದರು.

'ಪ್ರಜಾಸತ್ತಾತ್ಮಕ ಕ್ರಾಂತಿಗಳಲ್ಲಿ ಫ್ರೆಂಚ್ ಕ್ರಾಂತಿ ಅತ್ಯಂತ ಪ್ರಮುಖವಾಗಿದೆ. 1789ರ ಫ್ರೆಂಚ್ ಕ್ರಾಂತಿಯು ಇಡೀ ವಿಶ್ವಕ್ಕೆ ಅತ್ಯಂತ ಪ್ರಮುಖವಾದ ಕ್ರಾಂತಿ ಆದರೂ, ಅದು ಬಂಡವಾಳಶಾಹಿ ನೇತೃತ್ವದ ಕ್ರಾಂತಿಯಾಗಿತ್ತು. ಕಾರ್ಮಿಕ ವರ್ಗ ಇದರಲ್ಲಿ ಭಾಗಿಯಾಗಿತ್ತು. ಆ ನಂತರದಲ್ಲಿ ಸಹ 1848ರಲ್ಲೂ, 1870ರಲ್ಲೂ ಮತ್ತೆ ಮತ್ತೆ ದುಡಿಯುವ ವರ್ಗದ ಭಾರೀ ಹೋರಾಟಗಳು ಸಂಭವಿಸಿವೆ. ಆದರೆ, ಪ್ಯಾರಿಸ್ ಕಮ್ಯೂನ್ ಕ್ರಾಂತಿ ಇಡೀ ದುಡಿಯುವ ವರ್ಗಕ್ಕೆ ಹೊಸದೊಂದು ದಿಕ್ಕನ್ನೇ ತೋರಿಸಿಕೊಟ್ಟಿದೆ. ದುಡಿಯುವ ವರ್ಗ ಕೇವಲ ಪ್ರತಿರೋಧವನ್ನು ಒಡ್ಡುವುದಷ್ಟೆ ಅಲ್ಲ. ಕಾರ್ಮಿಕರು ಪ್ರಭುತ್ವವನ್ನು ಸ್ಥಾಪಿಸಬಲ್ಲರು, ಆಡಳಿತವನ್ನು ಮುನ್ನಡೆಸಬಲ್ಲರು ಎಂಬ ಸಂದೇಶವನ್ನು ಪ್ಯಾರಿಸ್ ಕಮ್ಯೂನ್ ಇಡೀ ವಿಶ್ವಕ್ಕೆ ಸಾರುತ್ತದೆ' ಎಂದು ಕಮ್ಯೂನಿನ ಮಹತ್ವದ ಬಗ್ಗೆ ವಿವರಿಸಿದರು.

'ಇಂದಿಗೂ ಜಗತ್ತಿನಲ್ಲಿ ಹೋರಾಟಗಳ ನಗರವೆಂದ ಪ್ರಸಿದ್ದಿಯನ್ನು ಪ್ಯಾರಿಸ್ ನಗರ ಪಡೆದುಕೊಂಡಿದೆ. ಅಲ್ಲಿ ಹೋರಾಟವೆಂದರೆ ಲಕ್ಷಾಂತರ ಮಂದಿ ಧುಮುಕುವುದಿದೆ. ಮಾನವ ನಿರ್ಮಿತ ಅತ್ಯಂತ ಗಟ್ಟಿ ಮತ್ತು ಬಲಿಷ್ಠವಾದ ತಡೆಗೋಡೆಗಳನ್ನು ನಿರ್ಮಿಸಿ ಹೋರಾಟವನ್ನು ಮುನ್ನಡೆಸುವ ವೈಶಿಷ್ಠತೆಯನ್ನು ಪಡೆದುಕೊಂಡಿದೆ. ದುಡಿಯುವ ವರ್ಗ ಪ್ರಭುತ್ವವನ್ನು ವಶಕ್ಕೆ ಪಡೆದುಕೊಂಡ ನಂತರ ಬೇಕರಿಗಳಲ್ಲಿ ರಾತ್ರಿಪಾಳಿ ಕೆಲಸವನ್ನು ನಿಷೇಧಿಸಲಾಯಿತು. ಇಡೀ ನಗರದ ಕಾರ್ಖಾನೆಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಮಾಲೀಕರು ಬೇರೆ ಬೇರೆ ನೆಪದಲ್ಲಿ ಕಾರ್ಮಿಕರಿಗೆ ದಂಡ ವಿಧಿಸುವುದನ್ನು ನಿಷೇಧಿಸಲಾಯಿತು. ಶಾಶ್ವತವಾದ ಸೈನ್ಯವನ್ನು ರದ್ದು ಮಾಡಿ, ಸಶಸ್ತ್ರವಾದ ಇಡೀ ಜನತೆಯೇ ಸೈನ್ಯದ ಜವಾಬ್ದಾರಿಯನ್ನು ವಹಿಸಿಕೊಂಡಿತು. ಅಷ್ಟು ಮಾತ್ರವಲ್ಲದೆ, ಎಲ್ಲಾ ಆಡಳಿತದ ಅಧಿಕಾರವನ್ನು ಜನತೆಯಿಂದ ಚುನಾಯಿತರಾದ, ಕೆಲಸ ಮಾಡದಿದ್ದರೆ ಹಿಂದಕ್ಕೆ ಕರೆಸಿಕೊಳ್ಳಬಹುದಾದ ಹೆಚ್ಚಾಗಿ ಕಾರ್ಮಿಕ ವರ್ಗದವರೇ ಆದ ಪ್ರತಿನಿಧಿಗಳು ನಡೆಸಿದರು. ಕಮ್ಯೂನ್ ಶಾಸಕಾಂಗವೂ, ಕಾರ್ಯಾಂಗ ಎರಡೂ ಆಗಿತ್ತು. ನ್ಯಾಯಾಂಗವನ್ನು ಸಹ ಚುನಾಯಿತ ಪ್ರತಿನಿಧಿಗಳೇ ನಡೆಸಿದರು. ಎಲ್ಲ ಅಂಗದ ಆಡಳಿತ ನಿರ್ವಹಿಸಿದ ಅಧಿಕಾರಿಗಳಿಗೂ ಕಾರ್ಮಿಕರಿಗೂ ವೇತನದಲ್ಲಿ ತಾರತಮ್ಯ ಇರಲಿಲ' ಎಂದು ಡಾ. ಬಿ.ಆರ್. ಮಂಜುನಾಥ್ ಅವರು ಹೇಳಿದರು.

"ಪ್ರೆಂಚ್ ಕ್ರಾಂತಿಯ ಬಗ್ಗೆ ನಮಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಆದರೆ ಪ್ಯಾರಿಸ್ ಕಮ್ಯೂನ್ ಕುರಿತ ಮಾಹಿತಿಗಳು ಅಷ್ಟಾಗಿ ಸಿಗುವುದಿಲ್ಲ. ವ್ಯವಸ್ಥಿತವಾಗಿ ಮಾಹಿತಿಗಳನ್ನು ಮುಚ್ಚಿಹಾಕಲಾಗಿದೆ. ಕಾರ್ಮಿಕರು ತಮ್ಮ ದೈನಂದಿನ ಆರ್ಥಿಕ ಅಗತ್ಯಗಳಿಗೆ ಮಾತ್ರ ಸೀಮಿತಗೊಳ್ಳದೇ, ಶೋಷಣೆಯ ಕಪಿಮುಷ್ಠಿಯಿಂದ ವಿಮೋಚನೆಗೊಳ್ಳುವ ಬಗ್ಗೆ ಚಿಂತಿಸಬೇಕಿದೆ. 'ಪ್ಯಾರಿಸ್ ಕಮ್ಯೂನ್ 150' ನಂತಹ ಚರಿತ್ರೆಯ ಪುಸ್ತಕಗಳು ಈಗಿನ ಕಾರ್ಮಿಕರಿಗೆ ದಾರಿದೀಪವಾಗಲಿ"

-ಮೀನಾಕ್ಷಿ ಸುಂದರಂ



ಪ್ಯಾರಿಸ್ ಕಮ್ಯೂನ್ ಯಾಕೆ ವಿಫಲವಾಯಿತು ಎಂಬುದರ ಬಗ್ಗೆ ವಿವರಿಸಿದ ಡಾ. ಬಿ.ಆರ್. ಮಂಜುನಾಥ್ ಅವರು 'ಪ್ರಮುಖವಾಗಿ ದುಡಿಯುವ ವರ್ಗವು ಹಣಕಾಸು ಸಂಸ್ಥೆಗಳಾದ ಬ್ಯಾಂಕುಗಳನ್ನು ವಶಕ್ಕೆ ಪಡೆದುಕೊಂಡಿರಲಿಲ್ಲ. ಇದರ ಲಾಭವನ್ನು ಬೂರ್ಷ್ವಾ ವರ್ಗ ಪಡೆದುಕೊಂಡಿತು. ಅದೇ ರೀತಿಯಲ್ಲಿ ಬೂರ್ಷ್ವಾಗಳ ವಿಚಾರಗಳಲ್ಲಿ ಅತಿ ಉದಾರತೆಯನ್ನು ತೋರಿಸಿತು. ಬುರ್ಷ್ವಾ ಸೈನ್ಯ ಮತ್ತು ಸರಕಾರ ವರ್ಸಾಲೆಸ್ ಗೆ ಸ್ಥಳಾಂತರಗೊಳ್ಳಲು ಅವಕಾಶ ಮಾಡಿಕೊಟ್ಟಿದ್ದರಿಂದ ಭಾರೀ ದಂಡ ತೆರಬೇಕಾಯಿತು. ಬೂರ್ಷ್ವಾ ವರ್ಗ ಗಳೇ ಅಂತರ್ಯುದ್ಧವನ್ನು ಹೂಡಿದ್ದರು ಅದರಲ್ಲಿ ದೃಢವಾಗಿ ತೊಡಗಲು ಹಿಂಹಜರಿಯಿತು. ಗ್ರಾಮೀಣ ಪ್ರತಿಗಾಮಿ ಶಕ್ತಿಗಳು ಒಗ್ಗೂಡಿ ಪ್ಯಾರಿಸನ್ನು ಸುತ್ತುವರಿಯುವುದರ ವಿರುದ್ಧ ಸಹ ದೃಢ ಕ್ರಮಗಳನ್ನು ಕೈಗೊಳ್ಳಲಿಲ್ಲ. 72 ದಿನಗಳ ದುಡಿಯುವ ವರ್ಗದ ಪ್ರಭುತ್ವವನ್ನು ಮೇ 28 1871ರಂದು ಬಂಡವಾಳಶಾಹಿ ವರ್ಗದ ಸೈನ್ಯವು ಜರ್ಮನ್ ನೆರವಿನೊಂದಿಗೆ ಉರುಳಿಸಿದವು. ಕಮ್ಯುನಾರ್ಡರ ನರಮೇಧ ನಡೆಸಿದವು ಎಂದು ಡಾ. ಮಂಜುನಾಥ್ ವಿವರಿಸಿದರು.



ಪ್ಯಾರಿಸ್ ಕಮ್ಯೂನ್ ಹೋರಾಟದ ಸಾಧನೆಗಳು ಮತ್ತು ವೈಫಲ್ಯಗಳ ಕುರಿತು 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಎಂಬ ಪುಸ್ತಕವನ್ನು ಬರೆದು ಕಾರ್ಲ್ ಮಾರ್ಕ್ಸ್ ಜಗತ್ತಿಗೆ ಪರಿಚಯಿಸಿದರು. ನಂತರದ ಶತಮಾನದಲ್ಲಿ 1917ರಲ್ಲಿ ಸಂಭವಿಸಿದ ರಷ್ಯಾದಲ್ಲಿ ನಡೆದ ಸಮಾಜವಾದಿ ಕ್ರಾಂತಿಯಲ್ಲಿ ದುಡಿಯುವ ವರ್ಗವು ಕಮ್ಯೂನಿನಿಂದ ಪಾಠ ಕಲಿಯಿತು. ನಂತರದಲ್ಲಿ ನಡೆದ ಚೀನಾ, ವಿಯೆಟ್ನಾಂ ಕ್ಯೂಬಾ, ಇತ್ಯಾದಿ ದೇಶಗಳಲ್ಲಿನ ಕ್ರಾಂತಿಗಳು ಸಹ ಕಮ್ಯೂನ್ ಮತ್ತು ರಷ್ಯನ್ ಕ್ರಾಂತಿಯಿಂದ ಪಾಠ ಕಲಿತು ಮುನ್ನಡೆ ಸಾಧಿಸಿದವು, ಎಂದು ಡಾ. ಮಂಜುನಾಥ್ ವಿವರಿಸಿದರು.

ಮಾರ್ಕ್ಸ್ ಪ್ಯಾರಿಸ್ ಕಮ್ಯೂನಿನ ಪತನದ ನಂತರ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘದ ಜನರಲ್ ಕೌನ್ಸಿಲ್ ಗೆ ಮಾಡಿದ ಭಾಷಣ, ಲೆನಿನ್ ಅವರ 'ಪ್ರಭುತ್ವ ಮತ್ತು ಕ್ರಾಂತಿ' ಪುಸ್ತಕದ ಪ್ಯಾರಿಸ್ ಕಮ್ಯೂನಿನ ಮೇಲಿನ ಅಧ್ಯಾಯ, ಇಂದಿನ ಸಂದರ್ಭದಲ್ಲಿ ಇಟ್ಟು ನೋಡುವ ವಿಜಯ್ ಪ್ರಸಾದ್ ಅವರ ವಿಸ್ತಾರವಾದ ಪೀಠಿಕೆ ಹಾಗೂ ಇತರ ಹಲವು ಸಾಂಸ್ಕೃತಿಕ ಅಂಶಗಳನ್ನು 'ಪ್ಯಾರಿಸ್ ಕಮ್ಯೂನ್ 150' ಪುಸ್ತಕ ಒಳಗೊಂಡಿದೆ ಎಂದು ಡಾ. ಮಂಜುನಾಥ್ ತಿಳಿಸಿದರು.

ಆರಂಭದಲ್ಲಿ ಕ್ರಿಯಾ ಮಾಧ್ಯಮದ ಪರವಾಗಿ ಕಾರ್ಯಕ್ರಮದ ಪ್ರಸ್ತಾವನೆಯನ್ನು ಮಂಡಿಸಿದ ವಸಂತರಾಜ ಎನ್ ಎಕೆ ಅವರು 'ಪ್ಯಾರಿಸ್ ಕಮ್ಯೂನ್ ಕುರಿತು ಮಾರ್ಕ್ಸ್ 72 ದಿನ ಕಾರ್ಮಿಕರು 'ಸ್ವರ್ಗದ ಬಾಗಿಲ ತೆರೆದರು' ಎಂದರೆ, ಲೆನಿನ್ ಅದು 'ದುಡಿಯುವ ವರ್ಗದ ಅಮರ ಧ್ಯೇಯದ' ಪ್ರತೀಕ ಎಂದರೆ, ಮಾವೋ ಅದನ್ನು 'ಉಜ್ವಲ ಹೂವು' ಎಂದು ಕರೆದರು. ಪ್ಯಾರಿಸ್ ಕಮ್ಯೂನ್ ಇಡೀ ದುಡಿಯುವ ವರ್ಗವೇ ಭಾಗವಹಿಸಿ ನೇತೃತ್ವ ನೀಡಿದ ಕ್ರಾಂತಿಯಾಗಿದೆ. ಈ ಕ್ರಾಂತಿಯಲ್ಲಿ ಬಂಡವಾಳಶಾಹಿ ಪ್ರಭುತ್ವವನ್ನು ಕೈವಶ ಮಾಡಿಕೊಂಡ ದುಡಿಯುವ ವರ್ಗ ನಿಜವಾದ ನೇರ ಪ್ರಜಾಪ್ರಭುತ್ವದ ಸ್ಥಾಪನೆಗೆ ಮುಂದಾಯಿತು. ಎಲ್ಲವನ್ನು ಇಡೀ ಕಾರ್ಮಿಕ ವರ್ಗವೇ ನಿರ್ಧರಿಸುವ ಅತ್ಯಂತ ಮಹತ್ವದ ಕ್ಷಣ ಅದಾಗಿತ್ತು. 72 ದಿನಗಳ ದುಡಿಯುವ ವರ್ಗದ ಕ್ರಾಂತಿಯು ಮುಂಬರುವ ದಿನಗಳ ಇಡೀ ವಿಶ್ವದಲ್ಲಿ ಸಂಭವಿಸಿದ ಕಾರ್ಮಿಕರ ಕ್ರಾಂತಿಗಳಿಗೆ ಮಾದರಿ ಸ್ಫೂರ್ತಿಯಾಗಿದ್ದು ಮಾತ್ರವಲ್ಲ, ಹಲವು ಅಯಾಮಗಳಲ್ಲಿ ಪ್ರಜಾಸತ್ತೀಕರಣದಲ್ಲಂತೂ ಆ ಮೇಲಿನ ಕ್ರಾಂತಿಗಳಿಗಿಂತಲೂ ಉನ್ನತ ಸಾಧನೆ ಮಾಡಿತ್ತು. ಸಕಾಲಿಕ ಪರಿಣಾಮಕಾರಿ ರಾಜಕೀಯ ಮಧ್ಯಪ್ರವೇಶ ಮಾಡಿದ ಮತ್ತು ತಾನು ಆಡಳಿತ ನಡೆಸಬಲ್ಲೆ ಎಂಬ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ಪ್ಯಾರಿಸ್ ಕಮ್ಯೂನಿನ ಅನುಭವ ದುಡಿಯುವ ವರ್ಗಕ್ಕೆ ಇಂದಿಗೂ ಪಾಠವಾಗಿದೆ.' ಎಂದು ಹೇಳಿದರು.

ಪ್ಯಾರಿಸ್ ಕಮ್ಯೂನಿನ 150ನೇ ವರ್ಷಾಚರಣೆಯನ್ನು 15 ದೇಶ-ಪ್ರದೇಶಗಳ 27 ಪ್ರಕಾಶನಗಳು 18 ಭಾಷೆಗಳಲ್ಲಿ ಒಂದೇ ರಕ್ಷಾಪುಟ ಒಳಗೊಂಡ ಒಂದೇ ಪುಸ್ತಕವನ್ನು ಜಗತ್ತಿನಾದ್ಯಂತ ಬಿಡುಗಡೆ ಮಾಡುವ ಮೂಲಕ ವಿಶಿಷ್ಟವಾಗಿ ಆಚರಿಸಿವೆ. ರಕ್ಷಾಪುಟ ವಿನ್ಯಾಸಕ್ಕೆ ಅಂತರರಾಷ್ಟ್ರೀಯವಾಗಿ ಕಲಾಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ನೂರಾರು ಕಲಾಕೃತಿಗಳು ಬಂದಿದ್ದವು. ಅದರಲ್ಲಿ ಕ್ಯೂಬಾದ ಕಲಾವಿದ ಮುಖಪುಟ ಹಾಗೂ ಕೇರಳದ ಕಲಾವಿದನ ಹಿಂಬದಿ ಪುಟದ ಚಿತ್ರ ಆಯ್ಕೆಯಾಗಿದೆ. ರಕ್ಷಾಪುಟಕ್ಕೆ ಆಯ್ಕೆಯಾದ ಎರಡು ವಿನ್ಯಾಸಗಳು ಸೇರಿದಂತೆ 41 ಆಯ್ದ ಕೃತಿಗಳ ಆನ್ ಲೈನ್ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಕರ್ನಾಟಕದಿಂದ ಕ್ರಿಯಾ ಮಾಧ್ಯಮದ ಎಂ. ರಾಮು ಹಾಗೂ ಜನಪರ ಚಳುವಳಿಯ ನಾಯಕ ಹೆಚ್ ಆರ್ ನವೀನ್ ಕುಮಾರ್ ಅವರ ಕಲಾಕೃತಿಗಳು ಸಹ ಆಯ್ಕೆಯಾಗಿವೆ ಎಂಬುದು ಹೆಮ್ಮೆಯ ವಿಷಯ ಎಂದು ವಸಂತರಾಜ್ ತಿಳಿಸಿದರು.

ಸ್ಪರ್ಧೆಯಲ್ಲಿ ಬಂದ ನೂರಾರು ವಿನ್ಯಾಸಗಳಲ್ಲಿ, ಕರ್ನಾಟಕದ ಇಬ್ಬರವು ಸೇರಿದಂತೆ ಮೆಚ್ಚುಗೆ ಪಡೆದ 41 ಕೃತಿಗಳ ವಿಡಿಯೊವನ್ನು ಸಭೆಯಲ್ಲಿ ತೋರಿಸಲಾಯಿತು. ಸಭೆಯ ಆರಂಭದಲ್ಲಿ ಪ್ಯಾರಿಸ್ ಕಮ್ಯೂನ್ ಕುರಿತು ಕನ್ನಡ ಕಿರುವಿಡಿಯೊವನ್ನು ತೋರಿಸಲಾಯಿತು.

ಪುಸ್ತಕ ಬಿಡುಗಡೆ ಕಾರ್ಯಕ್ರಮದ ಸ್ವಾಗತ ಹಾಗೂ ನಿರೂಪಣೆಯನ್ನು ಮಾಡಿದ ಕೆ.ಎಸ್. ವಿಮಲಾ ಅವರು 'ದುಡಿಯುವ ವರ್ಗ ಎದುರಿಸುತ್ತಿರುವ ಸಂಕಷ್ಟಗಳು ಹಾಗೂ ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ಆಳುವ ವರ್ಗ ಅನುಸರಿಸುತ್ತಿರುವ ನೀತಿಗಳ ಭಾಗವಾಗಿ ಪ್ರಭುತ್ವ ಎಂಬುದು ದುಡಿಯುವ ಕೈಯಲ್ಲಿದ್ದರೆ ಎಂತಹದ್ದನ್ನು ಸಾಧಿಸಬಹುದಾಗಿತ್ತು. ಶ್ರಮಜೀವಿಗಳನ್ನು ಶೋಷಣೆಗೆ ಒಳಪಡಿಸುತ್ತಿರುವ ಬಂಡವಾಳಶಾಹಿ ವರ್ಗ ಮತ್ತು ಅವರ ಬೆಂಬಲಿತ ಪ್ರಭುತ್ವವನ್ನು ದುಡಿಯುವ ವರ್ಗದ, ಶೋಷಿತರ ಪರವಾಗಿ ಬದಲಿಸುವ ತುರ್ತು ಅನಿವಾರ್ಯ ಎದುರಾಗಿರುವ ಸಂದರ್ಭದಲ್ಲಿ ನಾವು 150 ವರ್ಷಾಚರಣೆಯ ಪ್ಯಾರಿಸ್ ಕಮ್ಯೂನ್ ಕ್ರಾಂತಿ ಮಹತ್ವ ಅತ್ಯಂತ ಅಗತ್ಯವಾಗಿದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಲೇಖಕರಾದ ಬಿ. ಪೀರ್ ಬಾಷ ಅವರು ಬ್ರೆಕ್ಟ್ ಅವರ ಕವನ 'ಕಮ್ಯೂನ್ ಧೀರರ ಸಂಕಲ್ಪ' ವಾಚನ ಮಾಡಿದರು. ಕೆ. ನೀಲಾ ಅವರು 'ಇಂಟರ್ ನ್ಯಾಸನಾಲ್' ಎಂದು ಪ್ರಸಿದ್ಧವಾದ ಜಗತ್ತಿನ ದುಡಿಯುವ ಜನರ, ಚಳುವಳಿಗಳ, ಕಮ್ಯುನಿಸ್ಟರ 'ನಾಡಗೀತೆ'ಯ ಕನ್ನಡ ಅನುವಾದವನ್ನು ವಾಚನ ಮಾಡಿದರು. ಕಾರ್ಯಕ್ರಮದ ಆರಂಭದಲ್ಲಿ ಪ್ಯಾರಿಸ್ ಕಮ್ಯೂನ್ ಸಂಬಂಧಿಸಿದ ಕಿರುಚಿತ್ರ ಹಾಗೂ ಇ-ಪುಸ್ತಕ ಖರೀದಿಯ ಬಗೆಗಿನ ಮಾಹಿತವುಳ್ಳ ವಿಡಿಯೋವನ್ನು ಪ್ರದರ್ಶಿಸಲಾಯಿತು. ಕೊನೆಗೆ ಇಂಗ್ಲಿಷ್ 'ಇಂಟರ್ ನ್ಯಾಸನಾಲ್' ಹಾಡಿನ ವಿಡಿಯೊವನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮವು ಜೂಮ್ ಅಲ್ಲದೆ 'ಜನಶಕ್ತಿ ಮೀಡಿಯಾ'ದ ಫೇಸ್ ಬುಕ್ ಮತ್ತು ಯೂ ಟ್ಯೂಬ್ ನಲ್ಲಿ ಲೈವ್ ಆಗಿ ಬಿತ್ತರವಾಯಿತು.

ಕ್ರಿಯಾ ಮಾಧ್ಯಮ ಹೊರತಂದಿರುವ ಪ್ಯಾರಿಸ್ ಕಮ್ಯೂನ್ ಪುಸ್ತಕವು ಮುದ್ರಣದಲ್ಲಿಯೂ ಲಭ್ಯವಿದೆ ಮತ್ತು ಇ-ಪುಸ್ತಕವಾಗಿಯೂ ಋತುಮಾನ ಸ್ಟೋರ್ ನಲ್ಲಿಯೂ ಲಭ್ಯವಿದೆ.

JANASHAKTHI KANNADA VARA PATRIKE June 14-20, 2021 Price: Rs. 10/- Date of Publication: 11 June 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಕೆ ವಿರೋಧಿಸಿ, ಸಿಪಿಐಎಂ ನಿಂದ ರಾಜ್ಯಾದಾದ್ಯಂತ ಪ್ರತಿಭಟನೆ



ಕಳೆದ ಒಂದೂವರೆ ವರ್ಷದಿಂದ ದೇಶದ ಜನತೆ ತೀವ್ರ ರೀತಿಯ ಕೋವಿಡ್ ಸಂಕಷ್ಟ ಎದುರಿಸುತ್ತಿರುವಾಗಲೇ ಅವರ ಸಂಕಟ ನಿವಾರಣೆಗೆ ಕ್ರಮ ವಹಿಸುವ ಬದಲು ಅವರ ಮೇಲೆ ಭಾರೀ ಬೆಲೆ ಏರಿಕೆಯ ಹೊರೆ ಹೇರುವ ಕ್ರೌರ್ಯವನ್ನು ಮೆರೆಯುತ್ತಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಪೆಟ್ರೋಲ್ ಬೆಲೆಯು 25 ರೂ. ಗಳಷ್ಟು ಹೆಚ್ಚಳಗೊಂಡಿದೆ. ಕಳೆದ ಒಂದು ತಿಂಗಳಲ್ಲಿ 16 ಬಾರಿ ಬೆಲೆ ಏರಿಸಲಾಗಿದೆ. ಈಗದು 100 ರೂ.ಗಳನ್ನು ದಾಟಿದೆ. ಡೀಸೆಲ್ ಬೆಲೆಯು 100 ರೂ.ಗಳಿಗೆ ಹತ್ತಿರವಾಗಿದೆ. ಅಡುಗೆ ಅನಿಲವೂ ಭಾರಿ ಏರಿಕೆ ಕಂಡಿದೆ.

ಇದು ಅತ್ಯಂತ ಅಸಹನೀಯವಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸರಕಾರದ ಈ ಜನವಿರೋಧಿ ಹಾಗೂ ಲೂಟಿಕೋರ ನೀತಿಯನ್ನು ಬಲವಾಗಿ ಖಂಡಿಸುತ್ತದೆ. ಇದು ಸಹಜವಾಗಿಯೇ ಎಲ್ಲ ಅಗತ್ಯ ವಸ್ತುಗಳ ಬೆಲೆಗಳ ಏರಿಕೆಗೆ ಕಾರಣವಾಗಿದೆ.

ಜಾಗತಿಕವಾಗಿ ಕಚ್ಚಾ ತೈಲದಲ್ಲಿ ಯಾವುದೇ ಬೆಲೆ ಏರಿಕೆ ಆಗದಿದ್ದರೂ ದೇಶದಲ್ಲಿ ಈ ಪ್ರಮಾಣದಲ್ಲಿ ಇವುಗಳ ಬೆಲೆಗಳು ಏರಿಕೆಯಾಗಲೂ ಕೇಂದ್ರ ಸರಕಾರವೇ ನೇರ ಹೊಣೆಗಾರನಾಗಿದೆ. ಇದು ಜನತೆಯನ್ನು ದೊಡ್ಡ ಪ್ರಮಾಣದಲ್ಲಿ ಲೂಟಿಗೊಳಪಡಿಸುವ ವಿಚಾರವಾಗಿದ್ದು ಇದನ್ನು ರಾಜ್ಯದಾದ್ಯಂತ ಪ್ರತಿಭಟನೆ ನಡೆದಿದೆ.













ಆದಿವಾಸಿ ಸಮುದಾಯಗಳ ರಕ್ಷಣೆ ಮತ್ತು ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ತುರ್ತು ಗಮನ ನೀಡಲು ಒತ್ತಾಯ











JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**